# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ


ಯಕ್ಷಗಾನ ಪ್ರಸಂಗ

# ಸೌಗಂಧಿಕಾಹರಣ ಮತ್ತು ಜಟಾಸುರ ವಧೆ


ಕವಿ

## ಧ್ವಜಪುರದ ನಾಗಪ್ಪಯ್ಯ



ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦

ಜುಲೈ ೩೦, ೨೦೧೯

# ಯಕ್ಷವಾಹಿನಿ®

Email: yakshaprasangakosha@co.gmailm, yakshavahini@co.gmailm Blog: www.yakshaprasangakosha.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರು ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್ , ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



ಶ್ರೀಧರ ಡಿ. ಎಸ್.
ಪ್ರಧಾನ ಸಂಪಾದಕರು



ಗಿಂಡೀಮನೆ ಮೃತ್ಯುಂಜಯ
ಸಹ ಸಂಪಾದಕರು



ರವಿ ಮಡೋಡಿ
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಮಹಾಭಾರತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಪಾವಂಜೆ ಗುರುರಾವ್ ಅಂಡ್ ಸನ್ಸ್, ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೫೪೦

**ಪಾತ್ರಗಳು:**

ಧರ್ಮರಾಯ, ಭೀಮ, ದ್ರೌಪದಿ, ಅರ್ಜುನ, ಹನುಮಂತ, ರಕ್ಕಸರು, ಕುಬೇರ, ಜಟಾಸುರ, ಧೌಮ್ಯರು

**ಕಥಾ ಸಾರಾಂಶ:**

ಪ್ರಸಂಗದ ಆರಂಭದಲ್ಲಿ ಇಂದ್ರಕೀಲಕದ ಉರ್ವಶೀ ಶಾಪದ ಪ್ರಕರಣದ ನಿವಾತ ಕವಚರೊಂದಿಗೆ ಅರ್ಜುನ ಹೋರಾಡಿದ ಕಥಾಂಶಗಳೆಲ್ಲ ಬರುತ್ತವೆ. ಭೀಮ ದ್ರೌಪದಿಗಾಗಿ ಸುಗಂಧ ಪುಷ್ಪವನ್ನು ತರಲು ಹೊರಡುತ್ತಾನೆ. ಮಾರ್ಗ ಮಧ್ಯದಲ್ಲಿ ಹನುಮಂತನ ಭೇಟಿಯಾಗುತ್ತದೆ. ಮೊದಲಿಗೆ ಭೀಮ ಹನುಮನನ್ನು ತಿರಸ್ಕರಿಸಿದರೂ ಕೊನೆಯಲ್ಲಿ ಆತನ ಅಗಾಧವಾದ ಶಕ್ತಿಗೆ ಮಣಿಯುತ್ತಾನೆ. ಆತನ ಶುಭಾಶೀರ್ವಾದದೊಂದಿಗೆ ಮುಂದೆ ತೆರಳುತ್ತಾನೆ. ಸೌಗಂಧಿಕಾ ಪುಷ್ಪವಿರುವ ಸರೋವರಕ್ಕೆ ಬಂದು ಹೂವನ್ನು ಕೀಳುತ್ತಾನೆ. ಅಲ್ಲಿನ ಯಕ್ಷರಿಗೂ ಭೀಮನಿಗೂ ಹೋರಾಟ ನಡೆಯುತ್ತದೆ. ಕುಬೇರನಿಂದ ಮನ್ನಿಸಲ್ಪಟ್ಟು ವಿಜಯಿಯಾದ ಭೀಮ ಹೂವನ್ನು ತಂದು ಮಡದಿಯನ್ನು ಸಂತೋಷಗೊಳಿಸುತ್ತಾನೆ. ಮುಂದೆ ಭೀಮನು ಪಾಂಡವರನ್ನು ಕೆಣಕಿದ ಜಟಾಸುರನನ್ನು ಕೊಲ್ಲುತ್ತಾನೆ.

**ಕವಿ ಪರಿಚಯ: (ಆಧಾರ: ಕರ್ನಾಟಕ ಯಕ್ಷಗಾನ ಚರಿತ್ರೆ - ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**

ಧ್ವಜಪುರದ ನಾಗಪ್ಪಯ್ಯನ ಕಾಲ ಕ್ರಿ.ಶ. ೧೬೦೦ ರಿಂದ ೧೬೫೦. ಇವರ ಪ್ರಸಂಗಗಳಲ್ಲಿ ಕೋಟಿಲಿಂಗೇಶ್ವರನ ಸ್ತುತಿಯಿದ್ದು, ಡಾ.ಶಿವರಾಮ ಕಾರಂತರು ಇವರು ಕೋಟೇಶ್ವರದವರೆಂದು ಗುರುತಿಸಿದ್ದಾರೆ. ಇವರು ತನ್ನನ್ನು ನಾರಾಯಣಾರ್ಯನೆಂಬ ವಿಪ್ರನ ಮಗನೆಂದು ಹೇಳಿಕೊಂಡಿದ್ದಾರೆ.

ಇವರು ಬರೆದ ಪ್ರಸಂಗಗಳು: ಚಂದ್ರಾವಳಿ, ಘಟೋತ್ಕಚಕಾಳಗ, ಇಂದ್ರಕೀಲಕ, ಸೌಗಂಧಿಕಾಹರಣ ಮತ್ತು ಜಟಾಸುರ ವಧೆ ಹಾಗೂ ನಳ ಚರಿತ್ರೆ

**ಟಿಪ್ಪಣಿ:**

ಹೆಚ್ಚು ಬಳಕೆಯಲ್ಲಿ ಇಲ್ಲ.

# ಪ್ರಸಂಗ ಸಾಹಿತ್ಯ

**ಶಾರ್ದೂಲವಿಕ್ರೀಡಿತಂ**
ಶ್ರೀಮತ್ಸುಂದರಮಾಧವಂ ಮಧುಹರಂ ಮಾರ್ತಂಡಕೋಟಿಪ್ರಭಂ
ಕಾಮಾರಾತಿಸಖಂ ಕರೀಂದ್ರವರದಂ ಪೀತಾಂಬರಾಲಂಕೃತಂ |
ಶ್ಯಾಮಾಂಗಂ ಸಿರಿವತ್ಸಲಾಂಛನವಿಧುಂ ನಾರಾಯಣಂ ಕೇಶವಂ
ಭೀಮಂ ಭರ್ಗಸಮಾನಸತ್ವಮುದಿತಂ ಶ್ರೀವೇಂಕಟೇಶಂ ಭಜೇ ||

**ನಾಟಿ - ಝಂಪೆ**
ಜಯತು ಶ್ರೀ ಗಣನಾಥ | ಜಯ ಮೂಷಿಕವರೂಥ |
ಜಯತು ಪುರಹರಜಾತ | ಜಯ ಲೋಕಧಾತ || ಜಯತು ||ಪ||
ಪಾಹಿ ಶ್ರೀ ಗಜವದನ | ಪಾಹಿ ಮುನಿಹೃತ್ಸದನ |
ಪಾಹಿ ಕರ್ಕಶಕದನ | ಪಾಹಿ ಗುಣಸದನ ||
ಪಾಹಿ ದುರಿತವಿನಾಶ | ಪಾಹಿ ಪನ್ನಗಭೂಷ |
ಪಾಹಿ ನತಪರಿತೋಷ | ಪಾಹಿ ವಿಘ್ನೇಶ || ಜಯತು || 1 ||
ಸ್ವಸ್ತಿ ಸುರಮುನಿಸೇವ್ಯ | ಸ್ವಸ್ತಿ ವಿರಚಿತಕಾವ್ಯ |
ಸ್ವಸ್ತಿ ಪರಹಿತ ಕಾರ್ಯ| ಸ್ವಸ್ತಿ ಶುಭಚರ್ಯ ||
ಸ್ವಸ್ತಿ ಸಿತಮಂದಾರ | ಸ್ವಸ್ತಿ ಗಣಗಂಭೀರ |
ಸ್ವಸ್ತಿ ಭದ್ರಶರೀರ | ಸ್ವಸ್ತಿ ಭವದೂರ || ಜಯತು || 2 ||

**ಸೌರಾಷ್ಟ್ರ - ಅಷ್ಟ**
ಶ್ರೀಗೌರೀವರ ಗಂಗಾಧರ ಶುಭಕರ ಶಿವ | ಪಾಹಿ ಶಂಭೋ | ಚೆಲ್ವ |
ನಾಗಭೂಷಣ ನವಗಜಚರ್ಮಾಂಬರಧರ | ಪಾಹಿ ಶಂಭೋ ||
ಯೋಗಿಹೃತ್ಸದನ ಧೂರ್ಜಟಿ ಮನುಮಥವೈರಿ | ಪಾಹಿ ಶಂಭೋ | ಸಕ |
ಲಾಗಮವಂದ್ಯ ಸುರೌಘವಿನುತಪಾತ್ರ | ಪಾಹಿ ಶಂಭೋ || 3 ||
ನೀಲಲೋಹಿತ ವಾಮದೇವ ತ್ರಿಲೋಚನ | ಪಾಹಿ ಶಂಭೋ | ಸುಗು |
ಣಾಲಯ ಸರ್ವಜ್ಞ ಸೌಭಾಗ್ಯದಾಯಕ | ಪಾಹಿ ಶಂಭೋ ||
ಫಾಲಲೋಚನ ಭಕ್ತಪ್ರಿಯ ಭವನಾಶನ | ಪಾಹಿ ಶಂಭೋ | ದೇವ |
ಮೂಲೋಕದೊಡೆಯನೆ ಮರೆಸೇರ್ದೆ ನಿನ್ನನು | ಪಾಹಿ ಶಂಭೋ || 4 ||

**ಸಾರಂಗ - ರೂಪಕ**
ಶರಣು ಶರಣು ಶ್ರೀ | ವೆಂಕಟಾಚಲ |
ಕರುಣವಾರಿಧೀ | ಭಕ್ತವತ್ಸಲ ||
ನಿರತ ಶುಭವನು | ಇತ್ತು ಎನ್ನನು |
ಪೊರೆಯೊ ವಿನಯದೆ | ಬೇಡಿಕೊಂಬೆನು || 5 ||
ಶೇಷಶಯನ ವೈ | ಕುಂಠನಾಯಕ |
ವಾಸುದೇವ ಕೈ | ವಲ್ಯದಾಯಕ ||
ದೋಷರಹಿತ ತ್ರೈ | ಲೋಕ ರಕ್ಷಕ |
ಈಶಮಿತ್ರ ಸು | ಮಂಗಳಾತ್ಮಕ || 6 ||
ತರಣಿಕೋಟಿ ಸಂ | ಕಾಶಮೂರುತಿ |
ದುರುಳಭಂಜನ | ಪಾರ್ಥಸಾರಥಿ ||
ಗರುಡವಾಹನ | ಇಂದಿರಾಪತಿ |
ಚರಣದಾಸನ | ಕಾಯೋ ಭೂಪತಿ || 7 ||

**ವಾರ್ಧಕ**
ಪುರಹರನ ಬಲಗೊಂಡು ಪಾರ್ವತಿಗೆ ನಮಿಸಿ ಸರ |
ಸಿರುಹಸಂಭವನ ನುತಿಗೈದು ವಾಗ್ದೇವಿಯಂ |
ಸ್ಮರಿಸಿ ಭಕ್ತಿಯೊಳಮರಸಂತತಿಗೆ ತಲೆವಾಗಿ ಋಷಿವರ್ಗಕಭಿವಂದಿಸಿ ||
ಸರಸಸತ್ಕವಿಗಳಂ ಕೊಂಡಾಡಿ ಹರುಷದೊಳು |
ಗುರುಹಿರಿಯರಂ ನೆನೆದು ವರವೇಂಕಟಾಚಲನ |
ಕರುಣರಸಬಲದಿಂದ ಪರಮಮಂಗಲ ಕಥೆಯನೊರೆವೆ ಸಕಲರು ಲಾಲಿಸಿ || 8 ||

**ದ್ವಿಪದಿ**
ವ್ಯಾಸ ವಾಲ್ಮೀಕಿ ಶುಕ ಶೌನಕರ ನೆನೆದು |
ವಾಸವ ಬ್ರಹ್ಮಾದಿಗಳ ಪದಕೆ ಮಣಿದು || 9 ||

ಬಿಡದೆ ಕುಲದೇವತಾನುಗ್ರಹವ ಪಡೆದು |
ದೃಢದಿ ಸದ್ಗುರು ಪದಾಬ್ಜಕೆ ಕೈಯ ಮುಗಿದು || 10 ||
ಭಾರತಸುಧಾಶರಧಿಯೊಳು ಮರುತಸುತನು |
ಮೀರಿದ ಜಟಾಸುರನ ಮುರಿದ ಕಥನವನು || 11 ||
ತಿಳಿವಂತೆ ಪೇಳ್ವೆ ನಾ ಯಕ್ಷಗಾನದಲಿ |
ಚೆಲುವ ಶ್ರೀ ವೇಂಕಟಾಚಲನ ಕರುಣದಲಿ || 12 ||
ಬಾಲಭಾಷಿತದೊಳಗೆ ತಪ್ಪಿರಲು ತಿದ್ದಿ |
ಲಾಲಿಸುತ ಮೆರೆಸಿದರೆ ಬಹುಮಾನವೃದ್ಧಿ || 13 ||

**ಸೌರಾಷ್ಟ್ರ - ತ್ರಿವುಡೆ**
ವಿಧುಕುಲಜ ಜನಮೇಜಯಾಖ್ಯನು |
ಮುದದಿ ವೈಶಂಪಾಯ ಮುನಿಪನ |
ವದನಕಲಶದೊಳಿರ್ದ ಭಾರತ | ಸುಧೆಯ ನೋಡಿ || 14 ||
ಪಾನಲೋಲುಪನಾದ ನೃಪಗೆ ಮ |
ಹಾನುಭವ ಮುನಿ ಕರ್ಣಯುಗ ಸೋ |
ಪಾನ ಮಾರ್ಗದೊಳಿರುವುತಿರೆ ಸು | ಮ್ಮಾನದಿಂದ || 15 ||
ಕುಡಿಕುಡಿದು ಸಂತುಷ್ಟನಾಗದೆ |
ನುಡಿದನೆಲೆ ಮುನಿನಾಥ ಮಾರುತಿ |
ಯೊಡನೆ ಸೆಣಸಿ ಜಟಾಖ್ಯ ದಾನವ | ಮಡಿದನೆಂತು || 16 ||
ಇಂದ್ರಕೀಲದ ಪರ್ವತಾಗ್ರದಿ |
ಚಂದ್ರಶೇಖರ ಪಾಶುಪತವನು |
ಇಂದ್ರತನಯನಿಗಿತ್ತ ಕಥನವ | ಸಾಂದ್ರವಾಗಿ || 17 ||
ವಿಸ್ತರಿಸಬೇಕೆನುತ ಮಣಿಮಯ |
ಮಸ್ತಕವ ಚಾಚಿರಲು ಚರಣಕೆ |
ಹಸ್ತದಿಂ ಪಿಡಿದೆತ್ತಿ ಭಯ ವಿ | ನ್ಯಸ್ತನಾಗಿ || 18 ||

**ವಾರ್ಧಕ**
ಉಪಚರಿಸಿ ಸತ್ಕಥಾವೃತ್ತಾಂತಮಂ ಪೇಳ್ವೆ |
ವಿಪುಲಮತಿ ಕೇಳೆಂದುಪಕ್ರಮಿಸಿದಂ ಪಿಂತೆ |
ನೃಪಯುಧಿಷ್ಠಿರ ತನ್ನ ಸಾಮ್ರಾಜ್ಯಲಕ್ಷ್ಮಿಯಂ ಕಾಲವಶಬದ್ಧನಾಗಿ ||
ಚಪಲಕೌರವನೊಡನೆ ಸಹಜವೆಂದಾಡಿದಂ |
ಕಪಟಮಿತ್ರ ದ್ಯೂತಮುಖದಿಂದ ಸೋಲ್ವಾಗ |
ದ್ರುಪದಸುತೆ ಸಹಿತವಂ ನಿಜಸಹೋದರರೊಡನೆ ವನವಾಸ ಕೈಕೊಂಡನು || 19 ||

**ಕೇದಾರಗೌಳ - ಅಷ್ಟ**
ಧರಣೀಶ ಲಾಲಿಸೀಪರಿಯಿಂದಲಾ ಪಾಂಡು |
ತರಳರು ವನದೊಳಗೆ ||
ಹರಿಯ ಧ್ಯಾನದಲಿ ದ್ರೌಪದಿ ಸಹಿತಿರುತಿರ್ದ | ರುರುತರ ಹರುಷದಿಂದ || 20 ||
ನಿತ್ಯ ಭೂಸುರರ ಸಂತರ್ಪಣೆ ಗೈವುತಾ |
ದಿತ್ಯಪ್ರಸಾದದಲಿ ||
ಸತ್ಯವ ಸಲಹುತಿರ್ದರು ಪಾಂಡುಸುತರು ಸ | ತ್ಕೃತ್ಯ ಸನ್ಮಾರ್ಗದಲಿ || 21 ||
ಆ ಸಮಯದಲಿ ಪರಾಶರಸುತನು ಶ್ರೀ |
ವಾಸುದೇವನ ಧ್ಯಾನದಿ ||
ಲೇಸ ಹಾರೈಸುತ್ತ ಬಂದ ಪಾಂಡವರ ಆ | ಯಾಸವರಿತು ಮನದಿ || 22 ||
ಬರವ ಕಾಣುತ ವೇದವ್ಯಾಸ ಮುನೀಂದ್ರನ |
ಧರಣೀಶ ಸಂಭ್ರಮದಿ ||
ಪರಮೋಪಚಾರದಿ ಲೋಪವಿಲ್ಲದೆ ಸತು | ಕರಿಸಿದ ವಿಧವಿಧದಿ || 23 ||
ಮಾಡಿದ ಸತ್ಕಾರವನ್ನು ಕೈಕೊಂಡಾಗ |
ನೋಡಿದ ಧರ್ಮಜನ ||
ಕೂಡಲೆ ತಾಪೋಪಶಮನಾರ್ಥವಾಗಿ ಮಾ | ತಾಡಿಸಿದನು ನೃಪನ || 24 ||

**ಸಾವೇರಿ - ಆದಿ**
ಏನು ಮನದಿ ಚಿಂತೆ | ನೃಪಕುಲರನ್ನ ||
ದಾನವಾಂತಕನು ಸ | ಹಾಯಿಗ ನಿನ್ನ || 25 ||
ನಾಚದಿರೈ ಪೊಸ | ತಲ್ಲ ನಿನ್ನಲ್ಲಿ ||
ಯೋಚಿಸದಿರು ಧೈರ್ಯ | ಗೊಳು ಮನದಲ್ಲಿ || 26 ||
ಸುಮ್ಮನಿರುವುದಿಲ್ಲ | ಮಂತ್ರವೊಂದಿಹುದು ||
ತಮ್ಮಗರುಹು ಮುಂದೆ | ಕಾರ್ಯ ಲೇಸಹುದು || 27 ||

ಎಂದನುಗ್ರಹವನು | ಮಾಡಿ ಧರ್ಮಜಗೆ ||
ಬಂದ ಪಥದಿ ಮುನಿ | ವರನು ತಾ ಪೋಗೆ || 28 ||

**ಸಾಂಗತ್ಯ - ರೂಪಕ**
ಹರುಷದಿ ಬಾದರಾಯಣನತ್ತ ತೆರಳಲು |
ತರಣಿಜಸುತನಿತ್ತ ಮುದದಿ ||
ಕರೆದು ಪಾರ್ಥನಿಗೆ ತಾನರುಹಿದ ಗುರುವಿಂದ |
ದೊರಕಿದ ಶೈವಮಂತ್ರವನು || 29 ||
ತಡೆಯದೀಕ್ಷಣ ಪೋಗಿ ಭಜಿಸಿಂದುಮೌಳಿಯ |
ದೃಢಚಿತ್ತನಾಗಿ ಭಕ್ತಿಯೊಳು ||
ಮೃಡನು ತಾ ಕೊಡಲಿ ನಿನ್ನಯಭೀಷ್ಟವೆಂದಾಗ |
ಪೊಡವಿಪಾಲಕ ಪರಸಿದನು || 30 ||
ಅರಸನಪ್ಪಣೆಯನ್ನು ಕೇಳುತ್ತ ನರನತಿ |
ತ್ವರಿತದಿ ಮಣಿದು ವಾತಜಗೆ ||
ಎರಗುತನುಜರಿಂಗೆ ಬುದ್ಧಿಯನೊರೆದಾಗ |
ಹರಕೆಯ ಕೊಂಡ ಭೂಸುರರ || 31 ||
ಧನುಶರಗಳ ಕೊಂಡು ಮನದೊಳ್ ಮುರಾರಿಯ |
ನೆನವುತ್ತ ಬರಲಾ ಮಾರ್ಗದಲಿ ||
ಅಣವ ಕಲ್ಲುಗಳ ಘೋರಾರಣ್ಯವನು ಕಳೆ |
ದನು ಧನಂಜಯನು ಧೈರ್ಯದಲಿ || 32 ||

**ವಾರ್ಧಕ**
ಎಲೆ ಮಹೀಪತಿ ಲಾಲಿಸೀ ಪರಿಯೊಳಾ ಪಾರ್ಥ |
ಬಲುಫಥವನುತ್ತರಿಸಿ ಬಳಲಿ ಶಿವನಂಘ್ರಿಯಂ |
ನಿಲದೆ ಸ್ಮರಿಸುತಲಿಂದ್ರಕೀಲಪರ್ವತವೇರಲನಿತರೊಳು ಗಗನವಾಣೀ ||
ನಲಿವಿನಿಂದೊದಗಿತೀ ಶೈಲಪುಣ್ಯಾಶ್ರಮವು |
ಒಲಿಸೇಕಚಿತ್ತದೊಳು ಶಂಕರನ ಮುಂದಿನ್ನು |
ಚಲಿಸಬೇಡೆನೆ ಕೇಳ್ದು ಫಲುಗುಣಂ ತೋಷಿಸುತ ಕಳೆದನಾ ದಿನ ನಿಶಿಯನು || 33 ||

**ಮಾರವಿ - ಏಕ**
ದಂತಿಪುರಾಧಿಪ ಲಾಲಿಸು ಮರುದಿನ |
ಕುಂತಿಯ ತನುಭವನು ||
ಸಂತಸದಲಿ ಶುಚಿಯಾಗುತಲರ್ಕಗೆ |
ನಿಂತರ್ಘ್ಯವ ಕೊಡುತ || 34 ||
ಸುರಗಿಯ ಕಟಿಯೊಳು ಸೇರಿಸಿ ಧನುವನು |
ಧರಿಸುತ ಹಸ್ತದಲಿ ||
ಶರಬತ್ತಳಿಕೆಯ ಪೆಗಲಿನೊಳೇರಿಸಿ |
ಚರಣವೇಕಾಗ್ರದಲಿ || 35 ||
ಸ್ಮರಿಸುತಲಿರಲಾ ಪುರಹರನಡಿಯನು |
ಸುರಪನು ಸಮಯದೊಳು ||
ತರಳನ ದೃಢವೀಕ್ಷಿಸಲೈತಂದನು |
ನೆರೆದ್ವಿಜ ರೂಪಿನೊಳು || 36 ||
ನುಡಿಸಿದನೇನಿದು ನಿನ್ನಯ ತಪಸಿನ |
ಬೆಡಗುಗಳಿಂದಿನೊಳು ||
ಪಿಡಿದಾಯುಧಗಳ ಢಂಬದಿ ಕುಣಿದರೆ |
ಮೃಡನೊಲಿವನೆ ಹೇಳು || 37 ||
ಗುರು ತಾನಾರುಪದೇಶಕೆ ನಗೆಗಳು |
ಬರುತಿದೆ ಪರಿಕಿಸಲು ||
ಧರೆಯೊಳಗೀ ಘನ ತಪಸಿನ ಚೋದ್ಯಗ |
ಳರಿಯೆವು ಪೂರ್ವದೊಳು || 38 ||

**ಕೇದಾರಗೌಳ - ಝಂಪೆ**
ಭೂಸುರನ ನುಡಿ ಕೇಳುತ |
ಫಲುಗುಣನು | ರೋಷದಲಿ ಮೊಗ ನೋಡುತ ||
ಈಸು ನಿಂದೆಗಳೇತಕೆ | ಎನ್ನ ತಪ |
ಹಾಸ್ಯವಾಯಿತೆ ಚಿತ್ತಕೆ || 39 ||

ಪಿಡಿದರೇನಾಯುಧವನು | ಸ್ನಾನಾದಿ |
ತೊಡಕುಗಳ ಬಿಟ್ಟರೇನು ||
ದೃಢದಿಂದ ಭಜಿಸೆ ಶಿವನು | ಒಲಿದೀಗ |
ಕೊಡನೆ ಮನದಿಷ್ಟಗಳನು || 40 ||
ಶ್ವೇತವಾಹನನ ಮಾತ | ಕೇಳಿ ಪುರು |
ಹೂತ ನಿಜವನು ತೋರುತ ||
ಜಾತ ಕೇಳ್ ಧೃತಿಗೆ ನಾನು | ಮೆಚ್ಚಿದೆನು |
ಪ್ರೀತಿಯಿಂದೊಲಿವ ಹರನು || 41 ||
ಎಂದು ಪರಸಿದಡಾತನ | ಪದಕೆರಗಿ |
ಚಂದದಿಂ ಕಳುಹುತನವನ ||
ನಿಂದನೇಕೋಭಾವದಿ | ಶಶಿಧರನ |
ನಂದು ನೆಲೆಗೊಳಿಸಿ ಮನದಿ || 42 ||
ಮೂರುದಿನಕೊಮ್ಮೆ ಮೆಲಲು | ಫಲವ ಮ |
ತ್ತಾರು ದಿನಕೊಮ್ಮೆ ಮೆಲಲು ||
ಧೀರ ತರಗೆಲೆ ಭಕ್ಷಿಸಿ | ಕಡೆಗೆ ತಾ |
ಮಾರುತಾಹಾರ ರಚಿಸಿ || 43 ||
ಮತ್ತೆ ಶ್ವಾಸಗಳ ಬಲಿದು | ದೇಹದ ಅ |
ವಸ್ತುಗಳನೆಲ್ಲ ಮರೆದು ||
ಚಿತ್ತಜಾಂತಕನೆ ತಾನು | ಎಂಬವೊಲು |
ಪಾರ್ಥನೆಸಗಿದ ತಪವನು || 44 ||

**ಕೇದಾರಗೌಳ - ಅಷ್ಟ**
ಶಶಿಕುಲಾಧಿಪ ಕೇಳಾ ನರನ ಸಮಾಧಿಯ |
ಲಸಮ ಜ್ವಾಲೆಯು ಧರೆಗೆ ||
ಮುಸುಕಿ ಸುಡುತಲಿರಲಲ್ಲಿಹ ಋಷಿಗಳು |
ಬಸವಳಿದರು ಉರಿಗೆ || 45 ||
ಪೊಡವಿ ಕಾದವು ಜಪಸರ ದಂಡ ಕೋಲುಗ |
ಳೊಡನೆ ಕಮಂಡಲವು ||
ಉಡುವ ವಸ್ತ್ರಾದಿಗಳ್ ಸುಡುತಿರಲಖಿಳರು |
ನಡುಗಿ ಕಂಗೆಡುತಿರಲು || 46 ||
ಭಾರಿಯದ್ಭುತಗಳೇನೆಮ್ಮಯ ತಪಸಿಗೆ |
ಯಾರು ಕಂಟಕರಾದರು ||
ಸೈರಿಸಲಾರೆವೆಂದೆನುತಲೋಡುತ್ತಿರೆ |
ವೀರಪಾರ್ಥನ ಕಂಡರು || 47 ||
ಇತ್ತ ನೋಡಿರೊ ನಮ್ಮ ತಪಕೆ ವಿಘ್ನವ ಗೈದ |
ತೊತ್ತಿನ ಮಗನಿವನೆ ||
ಹತ್ತಿರೆ ಹೋಗಿ ಮಾತಾಡಿಸಿ ನೋಳ್ಪ ಈ |
ಮೃತ್ಯು ಯಾರೆಂಬುದನು || 48 ||
ಎಂದು ಈ ಪರಿಯೊಳಾಲೋಚಿಸಿ ವಿಧ ವಿಧ |
ದಿಂದ ನುಡಿಸಲೆಲ್ಲರು ||
ಒಂದು ಪ್ರಪಂಚಗಳರಿಯದೆ ದೃಢಚಿತ್ತ |
ದಿಂದ ವಿಜಯನಿರಲು || 49 ||
ಯಾತಕೀತನೊಳೀಗ ವೊದರಿಕೊಂಬುದು ಪೋಗಿ |
ಭೂತನಾಥಗೆ ಪೇಳುವ ||
ಆತ ನಮ್ಮನು ರಕ್ಷಿಸುವನೆಂದು ಮುನಿಕುಲ |
ವ್ರಾತ ಹಿಡಿಯೆ ಪಥವ || 50 ||

**ವಾರ್ಧಕ**
ಇನಿತೆಲ್ಲರೊಂದಾಗಿ ಬರೆ ಮುಂದೆ ಕಾಣಿಸಿತು |
ಘನ ರಮ್ಯದಿಂದೆಸೆವ ಕೈಲಾಸ ಕಂಗಳಿಗೆ |
ಗಣಪ ಷಣ್ಮುಖ ವೀರಭದ್ರ ನಂದಿ ಪ್ರಮಥಗಣದ ಮಧ್ಯದಿ ಶಂಕರ ||
ವನಿತೆ ಪಾರ್ವತಿ ಸಹಿತಲಾನಂದಮಯನಾಗಿ |
ಕನಕಸಿಂಹಾಸನದೊಳೊಪ್ಪಿರುವ ದೇವನಂ |
ಮುನಿನಿಕರ ಕಂಡಾಗ ಜಯನಮೋ ಜಯತೆನುತ ಶರಧಿಘೋಷದಿ ಕೂಗಲು || 51 ||

**ಭಾಮಿನಿ**
ದೇವ ದೇವೋತ್ತಮ ಕೃಪಾಕರ |
ಭಾವಜಾಂತಕ ಭಕ್ತವತ್ಸಲ |
ಪಾವನಾತ್ಮಕ ಪಂಚವದನ ಮಹೇಶ ಸರ್ವೇಶ ||
ರಾವಣಾಂತಕಸಖ ತ್ರಿಯಂಬಕ |
ಪಾವಕಾಕ್ಷ ಪುರಾರಿ ಶಶಿಧರ |
ಕಾವುದೆಮ್ಮನೆನುತ್ತ ನುತಿಸಿದರಧಿಕ ಭಕ್ತಿಯಲಿ || 52 ||

**ಬೇಗಡೆ - ಏಕ**
ಭೂತಳದೊಳು ಬಿದ್ದು ಪೊರಳುವ | ಧರಣಿಯಮರ |
ವ್ರಾತವನ್ನು ಕಾಣುತಾ ಶಿವ ||
ಯಾತಕೀ ಭಯ ನಿಮ್ಮ ತಪಸಿಗೆ |
ಘಾತಕವನುರೆ ಗೈದರ್ಯಾರೈ |
ಭೀತಿ ಬಿಡಿ ಮಾತಾಡಿರೆನೆ ಪುರು |
ಹೂತವಂದಿತಗೆಂದರಾಗಲೆ || 53 ||
ಚಿತ್ತವಿಸು ಪರಾಕು ಶಂಕರ |
ಭಿನ್ನಹವನ್ನು ಬಿತ್ತರಿಸುವುದೇನು ಭವದೂರ ||
ಕ್ಷತ್ರಿಯೋ ಮೇಣಾರು ತಿಳಿಯದು |
ಬತ್ತಿಸಾಯುಧವನ್ನೇ ಧರಿಸಿಹ |
ಉತ್ತಮದ ತಪದಿಂದ ಜಗವನು |
ಹೊತ್ತಿಸಿದನುರಿ ತಾಳಲಾರೆವು || 54 ||
ಖುಲ್ಲನನು ಎಬ್ಬಿಸುತಲೆಮ್ಮನು | ಇರಿಸಿಲ್ಲಿ ದೇವ |
ಇಲ್ಲದಿರೆ ಬದಲೊಂದು ಠಾವನು ||
ನಿಲ್ಲದೀಕ್ಷಣ ತೋರಿ ನೀ ಕೃಪೆ |
ಯಲ್ಲಿ  ಉದ್ಧರಿಸೆಂದು ನಮಿಸಲು |
ಫುಲ್ಲವೈರಿಯ ಜೂಟ ನಗುತವ |
ರೆಲ್ಲರನು ಸಂತೈಸಿ ನುಡಿದನು || 55 ||
ಮೂಢ  ದುರ್ಜನನಲ್ಲವವನಿಂದು | ನಿಮಗಿನ್ನು ಉಪಹತಿ |
ಮಾಡನ್ಯಾತಕೆ ಭೀತಿ ಮನಕಿಂದು ||
ರೂಢಿಯೊಳಗತಿ ಭಕ್ತ ನಮಗವ |
ಬೇಡಿದಿಷ್ಟವನಿತ್ತು ಕಳುಹಿಸಿ |
ಗಾಢದಿಂ ನಿಮ್ಮೆಲ್ಲರಿಗೆ ಸುಖ |
ಮಾಡಿ ಇರಿಸುವೆ ಪೂರ್ವದಂದದಿ || 56 ||

**ವಾರ್ಧಕ**
ಹರನಿಂತು ಯೋಗಿಗಳ ಕರುಣದಲಿ ಸಂತೈಸಿ |
ಕರೆದು ನಂದೀಶ್ವರನೊಳರುಹಿದಂ ನೀನೀಗ |
ಕರೆಸು ಪ್ರಮಥಾದಿಗಳ ಧರಿಸಲೀಕ್ಷಣದೊಳಗೆ ವರ ಕಿರಾತಕ ರೂಪವ ||
ತೆರಳಬೇಕೀಗ ಶರಣನ ಬಳಿಗೆ ನಾವಿಂದು |
ಕರಿವದನ ಗುಹ ವೀರಭದ್ರ ರೇಣುಕ ಮುಖ್ಯ |
ಪರಿವಾರ ಸಹಿತ ಭವ ವರಪುಳಿಂದಕರಾಗೆ ಗಿರಿಜೆ ಬೇಡಿತಿಯಾದಳು || 57 ||

**ಭಾಮಿನಿ**
ಮೆರೆವ ಹಸುರಂಗಿಗಳ ಸೊಪ್ಪಿನ |
ನಿರಿಯುಡಿಗೆ ಕೆಮ್ಮೀಸೆ ಗುಂಜಿಯ |
ಸರವು ತರತರವಾದ ನಾಯ್ಗಳು ಕರದಿ ಕೈದುಗಳು ||
ಪರಿಪರಿಯ ಬಲೆಗಳನು ನಾಲ್ದೆಸೆ |
ಗ್ಹರಹಿ ಪುಲಿ ಸಿಂಹಾದಿ ನಾನಾ |
ಹರಿಣ ಜಾತಿಯ ಹರಣಗೊಳ್ಳುತ ಬರಲು ಬೊಬ್ಬಿಡುತ || 58 ||

**ಭೈರವಿ - ತ್ರಿವುಡೆ**

ಲಾಲಿಸಿದನು | ಶಶಿಕುಲ | ಮೌಳಿ ನೀನು || ಪ ||
ಲಾಲಿಸೈ ಪುರಹರನ ಘನತರ |
ಲೀಲೆಯನು ಕೈರಾತವೇಷವ |
ತಾಳಿ ಬರಲವರೈಸೆ ವರ ಕಾಂ |
ತಾರ ಮುಸುಕುತ ಬಲೆಯ ಬೀಸುತ |
ಲೀಲೆಯಲಿ ಗಿಡನಿಕರವನು ಕರ |
ಕೋಲಿನಿಂದಲಿ ಬಡಿದು ತೂಗುತ |
ಬಾಳ ಮೃಗಜಾತಿಗಳ ಪ್ರಾಣವ |
ಕಾಲನಾಲಯಕಾಗಿ ಕಳುಹುತ || ಲಾಲಿಸಿದನು || 59 ||
ಬಾಣಗುರಿಗಳ ತಪ್ಪಿಪೋಡುವ |
ಕೋಣ ಪುಲಿ ಶಾರ್ದೂಲ ಸಿಂಹಕೆ |
ಶ್ವಾನಗಳ ಕರೆದಾಗ ಹಿಡಿ ಛೂ |
ಯೆನುತ ನಾಲ್ದೆಸೆ ಬಿಡಲು ಮುಂದಕೆ |
ಜಾಣತನದೊಳಗಡ್ಡವಿಸೆ ಗೋ |
ನಾಳಿ ಮುರಿದಪ್ಪಳಿಸೆ ಭುವನಕೆ |
ಏನಿದದ್ಭುತವೆನುತ ನೋಡಿದ |
ದಾನವಾಧಮ ಮೂಕ ದೂರದಿ || ಲಾಲಿಸಿದನು || 60 ||
ಬಂದ ಸೈನ್ಯಗಳಾರದೀಕ್ಷಣ |
ತಿಂದು ತೇಗುವೆನೆನುತ ಕೋಪದಿ |
ಹಂದಿರೂಪಿನೊಳಾಗ ಪೊಕ್ಕನು |
ಇಂದುಮೌಳಿಯ ಪಡೆಗೆ ರಭಸದಿ |
ಕಂದುಗೊರಳನು ನೋಡಿ ಸಮಯವಿ |
ದೆಂದು ಬಾಣವನೆಸೆಯೆ ವಹಿಲದಿ |
ಬಂದು ನರನನು ಮುಟ್ಟುವಿಸಲವ |
ಕಂದೆರೆದು ಸೂಕರವ ಕೆಡಹಿದ || ಲಾಲಿಸಿದನು || 61 ||

**ಭಾಮಿನಿ**

ಮಾರಹರ ನಸುನಗುತ ನುಡಿದನು |
ಗೌರಿದೇವಿಯರೊಡನೆ ಫಲುಗುಣ |
ಮೂರುಲೋಕದ ಗಂಡನತಿಬಲ ಧೀರನೆಂದೆನುತ ||
ಭೂರಿವಾರ್ತೆಗಳೀಗಳೀತನ |
ಶೂರತೆಯ ನೀ ನೋಡು ಎನುತಲಿ |
ಮೀರಿ ಕೆಣಕಿದನಾಗ ವರ ಜಂಭಾರಿತನಯನನು || 62 ||

**ಆರ್ಯಸವಾಯ್ - ಏಕ**

ಹಂದಿಯ ಬೇಗನೆ ತೆಗೆಯಿರಣ್ಣ |
ಇಂದಿಗೆ ಸಾಕಿದು ನಮ್ಮನೆಗೆ ||
ಚಂದದಿ ಕೈಕಾಲ ಬಂಧಿಸಿ ಹೊರಿರೆನ |
ಲೆಂದ ಕಿರೀಟಿ ಪುಳಿಂದನಿಗೆ || 63 ||

**ಕಾಂಭೋಜ - ಏಕ**

ಎಲವೊ ಶಬರ ನಮ್ಮ ಶರದೊ | ಳಳಿದ ಸೂಕರ ನಿನಗೆ ||
ಸೇರುವುದೇನೋ ಮರುಳೇ ಸುಮ್ಮನೆ |
ತೊಲಗೋ ನಿನ್ನಯ ಕಡೆಗೆ || 64 ||
ಒಂದು ಯೋಜನದಿಂದಲದರನು | ತಂದೈದೇವೆ ಬೆರಸಿ ||
ಕೊಂದವರಾವೈ ನನಗೀ ನುಡಿಗಳು |
ಚಂದವಿದಲ್ಲೈ ತಪಸಿ || 65 ||
ಧೂರ್ತತನದಿ ಬಗುಳಿ ನೀನು | ವ್ಯರ್ಥ ಕೆಡಲುಬೇಡ ||
ಪೃಥ್ವಿಯೊಳಗೆ ನಮ್ಮನು ಗೆಲುವ |
ಸತ್ವವರಿಲ್ಲ ನೋಡ || 66 ||
ಉತ್ತಮ ಭಟನಾದರೀಗ | ಸತ್ತ ಹಂದಿಗೆ ನೀನು ||
ಅತ್ತು ಸಾವುದೇಕೋ ತಪಸಿನ |
ಚಿತ್ತವ ಬಿಟ್ಟುದೇನು || 67 ||

**ಶಂಕರಾಭರಣ - ಮಟ್ಟೆ**
ವರ ಕಿರಾತನೆಂದ ನುಡಿಗೆ ಉರಿಯನುಗುಳುತ |
ಕರದ ಧನುವ ಝೇಂಕರಿಸಿ ಸರಳನುಗಿವುತ ||
ಒರೆದನೆಲವೊ ಬಣಗೆ ನಿನ್ನ ಮದವ ಮುರಿವೆನು |
ಬರಿದೆ ನಮ್ಮ ಕೆಣಕಿ ಕೆಟ್ಟೆ ಸಾರಿ ನುಡಿವೆನು || 68 ||
ಮೂಗ ಮುಟ್ಟೆ ಬಾಯ ಕಳೆವ ಜೋಗಿ ಮನುಜನೆ |
ಕೂಗಿ ಕೊರಚಿ ಕುಣಿದರೀಗ ಹಂದಿ ಕೊಡುವೆನೆ ||
ಭೋಗಿಶಯನ ತಡೆದು ನಿಲಲು ಛಲವ ಬಿಡುವೆನೆ |
ಬೇಗದಿಂದ ಕಿಟಿಯ ಬಿಟ್ಟು ಪೋಗು ಪಾರ್ವನೆ || 69 ||
ಕಣೆಯ ಕಳುಹಲಿಲ್ಲವೆಂಬ ಪಿತ್ತವೇರಿತೆ |
ಬಿನುಗು ತಪಸಿಯೆಂಬ ಭ್ರಾಂತಿ ಮನಕೆ ತೋರಿತೆ ||
ವನಿತೆ ಸುತರು ಬಂಧು ಬಳಗ ಹತ್ತರಿರಿಸಿಕೋ |
ತನುವ ಬಗಿದು ಭೂತಗಣಕೆ ಕೊಡುವೆ ನೋಡಿಕೊ || 70 ||
ಎನತಲಗಣಿತಾಸ್ತ್ರವೆಸೆಯೆ ಬಂದು ಮುಸುಕಲು |
ಕನಲಿ ಸಮರಕೇಳಲಾಗ ಪ್ರಮಥಗಣಗಳು ||
ಮನುಮಥಾರಿ ತಡೆದು ನುಡಿದ ನಿಲ್ಲಿರೀತನು |
ಮಣಿವನಲ್ಲ ನಿಮಗೆ ಜಗದೊಳಧಿಕಶೌರ್ಯನು || 71 ||
ನಿಲಿಪೆ ನಾನು ನೋಡಿರಿವನ ಬಲುಹನೆನುತಲಿ |
ಚಳಕಧನುವ ಕೊಂಡು ಹರನು ನಿಂದು ಭರದಲಿ ||
ಎಲವೊ ತಪಸಿ ಬೇಡ ಛಲವು ಸತ್ತ ಹಂದಿಗೆ |
ತಲೆಯ ತೆರುವುದುಚಿತವಲ್ಲ ನಮ್ಮ ಕಾಲಿಗೆ || 72 ||

**ಭೈರವಿ - ಏಕ**
ವ್ಯಾಧನ ಬಿರುವಾಕ್ಯವನು | ಹರಿ |
ಮೈದುನ ಲಾಲಿಸುತವನು ||
ಕ್ರೋಧದಿ ಕಿಡಿಮಸಗಿದನು | ಕಡು |
ಮೂದಲೆಯಿಂದುಸಿರಿದನು || 73 ||
ಗಿರಿಗಿಡಕಾಂತಾರಗಳ | ಸಂ |
ಚರಿಸುತ ಮೃಗಪಕ್ಷಿಗಳ ||
ಹರಣವ ಕೊಂಡೊಡಲುಗಳ | ಪೊರೆ |
ವಧಮನೆ ಹಿಡಿ ಕೈದುಗಳ || 74 ||
ಮಡುವನು ಮುಳುಗೇಳುತಲಿ | ಬೂದಿ |
ಬಡಿಯುತಲೊಕ್ಕಾಲಿನಲಿ ||
ಮೃಡಶಿವನೆನನ್ನುವ ತರವೆ | ರಣ |
ತೊಡಕಿನೊಳ್ ಶಿರವನು ಕೊಡುವೆ || 75 ||
ಇಷ್ಟುಂಟೇನೆಲೊ ಮದವು | ತ್ರೈ |
ಸೃಷ್ಟಿಯ ಗಂಡನ ಬಲವು ||
ಧೃಷ್ಟನೆ ಪರಿಕಿಸುಯೆನುತ | ಶರ |
ವೃಷ್ಟಿಯ ಬಿಡೆ ಬೊಬ್ಬಿಡುತ || 76 ||
ಮುತ್ತುವ ಶಸ್ತ್ರಂಗಳನು | ಹರ |
ಕತ್ತರಿಸುತ ಪೇಳಿದನು ||
ವ್ಯರ್ಥವು ನಿನಗೀ ಗರುವ | ಜಯ |
ಹತ್ತದು ನಮ್ಮೊಳು ಪಾರ್ವ || 77 ||

**ಮಾರವಿ - ಮಟ್ಟೆ**
ಖೂಳ ಶಬರ ಕೇಳು ನಿನ್ನ |
ಪಾಳ್ಯಸಹಿತ ಕೆಡಹದಿರಲು |
ಶ್ರೀಲತಾಂಗಿರಮಣನಿಂಗೆ |
ಭಾವನೇನೆಲ || 78 ||
ಅಧಮತಪಸಿ ನಿನಗೆ ನಾನು |
ಬೆದರಿ ಪಿಂತೆ ಪೋದರೀಗ |
ಸುದತಿ ಗಂಡನೆಂಬಳೇನೊ |
ಮುದದೊಳೆನ್ನನು || 79 ||
ಹತ್ತು ನಾಮ ಅಕ್ಷಯಾಸ್ತ್ರ |
ಮತ್ತೆ ಗಾಂಡೀವ ದೇವ |
ದತ್ತ ಬಿರುದಿದೇಕೆ ಜೈಸ |
ದಿರಲು ನಿನ್ನನು || 80 ||

ಭಳಿರೆ ಭಳಿರೆ ಅತ್ಮಸ್ತುತಿಗ |
ಳೊಳಗೆ ಬಹಳ ನಿಪುಣ ನೀನು |
ಗಳಹಬೇಡ ಮರುಳರಂತೆ |
ಕಳುಹು ಸರಳನು || 81 ||

**ಘಂಟಾರವ - ಮಟ್ಟೆ**
ಕಪಟವ್ಯಾಧನು | ನುಡಿದ ಮಾತನು |
ಚಪಲಪಾರ್ಥ ಕೇಳಿ ಫಡ ಫ | ಡೆನುತಲೆಚ್ಚನು || 82 ||
ನಡುವೆ ಅದರನು | ತರಿವುತೆಂದನು |
ಬಡತಪಸ್ವಿ ಜೋಕೆಯೆನುತ | ಪೊಯ್ದ ನರನನು || 83 ||
ಉಬ್ಬಿ ಫಲುಗುಣ | ಬರುವ ಮಾರ್ಗಣ |
ಅಬ್ಬರಿಸುತ ಕಡಿದು ಮರಳಿ | ಎಸೆದನಾಕ್ಷಣ || 84 ||
ತಿಕ್ಕಿ ಬಿಸುಟನು | ವರಪುಳಿಂದನು |
ಸೊಕ್ಕಿನಿಂದ ಮತ್ತೆ ಪೊಡೆಯೆ | ಕತ್ತರಿಸಿದನು || 85 ||
ಅನಿತು ಶರಗಳು | ತೀರೆ ಮನದೊಳು |
ಕನಲಿ ತೆಗೆದನಕ್ಷಯಾಸ್ತ್ರ | ಭುವನವಳುಕಲು || 86 ||
ಶರಧಿತೆರದೊಳು | ಸರಳು ಮುಸುಕಲು |
ಹರುಷದಿಂದಲಭವನದರ | ನುಂಗೆ ಭರದೊಳು || 87 ||

**ಭಾಮಿನಿ**
ಮೃಡನ ಮೆಚ್ಚಿಸುತೆನ್ನಭೀಷ್ಟವ |
ಪಡೆವೆನೆಂದರೆ ಈ ದುರಾತ್ಮನು |
ಬಿಡದೆ ಕಂಟಕನಾದನೇ ಶಿವಯೆನುತ ಚಿಂತಿಸಿದ ||
ಒಡನೆ ಲಯಭೈರವನ ತೆರದಲಿ |
ಕಿಡಿಯಿಡುತಲಪ್ಪಳಿಸೆ ಚಾಪದಿ |
ನಡುಗೆ ಪ್ರಮಥಾದಿಗಳು ರುಧಿರವು ಸುರಿಯೆ ಶಿರವೊಡೆದು || 88 ||

**ಭೈರವಿ - ಅಷ್ಟ**
ತೊಲ ತೊಲ ತೊಲಗೆನ್ನುತ್ತ | ಹೊಯ್ದ ಮತ್ತೆ |
ಫಲುಗುಣ ಗರ್ಜಿಸುತ್ತ ||
ನಿಲದೆ ರಕ್ತವ ಕೈಯೊಳರಸುತ್ತ ಧನುವನ್ನು |
ಸೆಳಕೊಂಡ ನಸು ನಗುತ || 89 ||
ಒರೆಯಿಂದ ಸುರಗಿಯನು | ಉಗಿದನಾಗ |
ಧುರಪರಾಕ್ರಮಿ ಪಾರ್ಥನು ||
ಒರೆದನೆಲವೊ ಖೂಳ ಜನನಿಹೊಟ್ಟೆಯ ಹೊಕ್ಕ |
ರಿರಿಸೆನು ಪ್ರಾಣವನು || 90 ||
ಪರಿಕಿಸೆಂದೆನುತಲಾಗ | ಝಳಪಿಸುತ್ತ |
ಬರೆ ಕಂಡು ಹರನು ಬೇಗ ||
ಕರದ ಖಡ್ಗವನಪಹರಿಸಲು ಮರಗಳ |
ಮುರಿಮುರಿದಿಟ್ಟನಾಗ || 91 ||
ಅಲ್ಲಿಹ ವೃಕ್ಷಗಳು | ತೀರಲು ಮತ್ತೆ |
ಕಲ್ಲುಮಣ್ಣಿನೊಳಿಡಲು ||
ಫುಲ್ಲಶರಾಂತಕನೆಲ್ಲವ ಖಂಡಿಸಿ |
ನಿಲ್ಲದಾತನೊಳ್ ಪೇಳಲು || 92 ||
ಬಲುದಿನ ತಪಸುಗಳು | ರಚಿಸಿ ಪಿತ್ತ |
ತಲೆಗೇರಿ ಭ್ರಾಂತಿಯೊಳು ||
ಕಲುಮರ ಹೊಡೆದರೆ ಭಂಡ ನಿರಾಯುಧ |
ನಲಿ ಸಲ್ಲ ಕಡುಹುಗಳು || 93 ||
ಹುಲು ಕಿರಾತನೆ ನಿನ್ನನು | ಗೆಲ್ಲಲು ಕೈದು |
ಗಳ ಹಂಗೇತಕೆ ಕೊಬ್ಬನು ||
ನಿಲಿಸುವೆ ನೋಡೆನ್ನ ಭುಜಬಲವೆನಲುಮಾ |
ಲಲನೆಗಾ ಹರನೆಂದನು || 94 ||

**ಸೌರಾಷ್ಟ್ರ - ತ್ರಿವುಡೆ**
ನೋಡೆ ಪಾರ್ವತಿ ವೀರ ಪಾರ್ಥನ |
ಗಾಢವಿಕ್ರಮ ಶೌರ್ಯದೇಳ್ಗೆಯ |
ಮಾಡಿದನು ಬಲುತಪವ ಹಸಿತೃಷೆ | ದೂಡಿ ಕೆಳಕೆ || 95 ||

ಕಾದಿದನು ಸರಿಯಾಗಿ ನಮ್ಮೊಳು |
ಕೈದುಗಳುಯಿಲ್ಲೆಂಬ ಭೀತಿಗೆ |
ಹಾದಿಕೊಡದಿವ ಮಲ್ಲಯುದ್ಧಕೆ | ಬಾಧಿಸುವನು || 96 ||
ಪರಿಕಿಸೀತನ ಸಹಸವೆಂದತಿ |
ತ್ವರಿತದಿಂದಲಿ ಬಲಿದು ಮುಷ್ಟಿಯ |
ಒರೆದ ಹಾರುವ ನಿಲ್ಲು ಭುಜಬಲ | ವಿರಲು ನಿನಗೆ || 97 ||
ವರಪುಳಿಂದನ ನುಡಿಗೆ ಕೋಪದಿ |
ಭರಿತಮುಷ್ಟಿಯೊಳಾಗ ತಿವಿಯಲು |
ಮರಳಿ ಪೊಯ್ದನು ನರನು ಪುನರಪಿ | ಹರನ ಪೊಡೆಯೆ || 98 ||

**ನಾದನಾಮಕ್ರಿಯೆ - ಅಷ್ಟ**
ಎಲವೊ ತಪಸಿ ವ್ಯರ್ಥ ಕಾದುವೆ | ಜಯ |
ಒಲಿಯದು ಸುಮ್ಮನೆ ಬಳಲುವೆ ||
ಹಳುವುದೊಳೇಕೆ ನೀನೊರಗುವೆ | ಬಂಧು |
ಬಳಗ ಸತಿಯ ದು:ಖಪಡಿಸುವೆ || 99 ||
ಕುರಿಯ ಹಿಂಡನು ನಾಶಗೈಯಲು | ಕೇ |
ಸರಿ ಬೇಕೆ ಬದಲೊಂದು ಬಲಗಳು ||
ದುರುಳ ನಿನ್ನಯ ಲಕ್ಷ್ಯವೇನೆಂದು | ಶಶಿ |
ಧರನ ವಕ್ಷವ ತಿವಿಯಲು ಬಂದು || 100 ||
ಮತ್ತೆ ಪಾರ್ಥನ ಶಿವ ತಿವಿಯಲು | ನಡು |
ನೆತ್ತಿಗರ್ಜುನನು ತಾ ಕೊಣೆಯಲು ||
ತತ್ತರಿಸುತ ಬಹು ಶ್ರಮದೊಳು | ದೇವ |
ಪೃಥ್ವಿಗುರುಳ್ದು ಮತ್ತೇಳಲು || 101 ||
ಮದನಾರಿ ಕೋಪದಿ ವಿಜಯನ | ನೋಡಿ |
ಒದೆದ ನಿರ್ಮೋಹದೊಳಾ ಕ್ಷಣ ||
ಪದಹತಿಯಲಿ ನೆಲಕುರುಳಿದ | ಬಾಯೊಳ್ |
ರುಧಿರ ಕಾರುತ ಬೋಧ ತಪ್ಪಿದ || 102 ||
ನೋಡಿ ಗಣಂಗಳು ಬೆದರಲು | ಭಯ |
ಗೂಡಿ ಮಹೇಶನು ವ್ಯಥಿಸಲು ||
ಮಾಡಿದಳ್ ಶೋಕವ ಗಿರಿಜಾತೆ | ಪತಿ |
ಕೂಡೆ ಪೇಳಿದಳಾಗ ವಿಖ್ಯಾತೆ || 103 ||

**ನಾದನಾಮಕ್ರಿಯೆ - ಅಷ್ಟ**
ಭಳಿರೆ ಮೆಚ್ಚಿದೆ ದೇವ ನಾನು | ಭಕ್ತ |
ರೊಳಗತಿ ಕರುಣಾಳು ನೀನು |
ಪುರವೈರಿಸುತನಿಗಿಷ್ಟಾರ್ಥವನಿತ್ತೆಯ |
ಮನದೊಳಗಿಹ ವೈರವನು ತೀರ್ಚಿಕೊಂಡೆಯ || ಭಳಿರೆ || 104 ||
ಹರುಷವಾಯಿತೆ ನಿನ್ನ ಮನಕೆ | ಮುರ |
ಹರನು ಮೆಚ್ಚುವನೆ ಕೇಳಿದಕೆ ||
ಸುರನರೋರಗ ಜನರೆಲ್ಲ ಭಾಪೆಂದರು |
ನಿರತ ಭಜಿಪರಿನ್ನು ಸರ್ವದಾ ಸಕಲರು || ಭಳಿರೆ || 105 ||
ಎಷ್ಟು ಮೂದಲಿಸಿದರೇನು | ಮತಿ |
ಭ್ರಷ್ಟರಂದದೊಳಿಂದು ನೀನು ||
ಸಿಟ್ಟಿನೊಳೊದೆವುತ್ತ ಬಹುತಪ್ಪನೆಸಗಿದೆ |
ಸೃಷ್ಟಿಮೂರರೊಳಪಕೀರ್ತಿಯ ಗಳಿಸಿದೆ || ಭಳಿರೆ || 106 ||

**ಶಂಕರಾಭರಣ - ಮಟ್ಟೆ**
ಹರನು ಗಿರಿಜೆ ಸಹಿತ ದುಗುಡದಿಂದಲಿ |
ಇರುವ ಸಮಯದೊಳಗೆ ವಿಜಯ ಕಣ್ಣು ಬಿಡುತಲಿ |
ದುರಿತಹರ ಪುರಾರಿಯೆನುತಲೆದ್ದು ಕುಳಿತನು ||
ಕರಗಳನ್ನು ಶಿರದೊಳಿಟ್ಟು ಮರುಗುತೆಂದನು || 107 ||
ಗಂಡುಸೆಂದೆನುತ್ತ ಜನನಿಯೇಕೆ ಪಡೆದಳು |
ಭಂಡುಜನ್ಮದವನೆಂತು ವಸುಧೆ ಪೊರುವಳು ||
ಪುಂಡರೀಕನಾಭನೆನ್ನ ಕೈಯ ಬಿಟ್ಟೆಯ |
ಲಂಡವ್ಯಾಧನಿಂಗೆ ಜಯವ ಸೂರೆ ಕೊಟ್ಟೆಯ || 108 ||

ಹರನ ಧನುವ ನೆಗಪಿದಂತ ಸತ್ತ್ವವಡಗಿತೆ |
ಸುರಗಜವನು ಧರೆಗೆ ತಂದ ಶೌರ್ಯ ಹೋಯಿತೆ ||
ಹರಿಗೆ ಖಾಂಡವನವನಿತ್ತ ಬಲುಹು ಹಿಂಗಿತೆ |
ಕುರುಪನನ್ನೆ ಬಿಡಿಸಿ ತಂದ ಗರುವ ತಗ್ಗಿತೆ || 109 ||
ಮೂರು ಜಗದ ಗಂಡನೆಂಬ ಬಿರುದು ಇಂದಿಗೆ |
ಸೂರೆ ಹೋದುದಕಟ ಬರಿದೆ ದುಷ್ಟವ್ಯಾಧಗೆ ||
ಧಾರಿಣೀಯೊಳೆನ್ನ ಬಾಳ್ವೆ ವ್ಯರ್ಥವಾಯಿತು |
ಮಾರಹರನ ಕರುಣ ರಸವು ಎಲ್ಲಿ ಹೋಯಿತು || 110 ||

**ನೀಲಾಂಬರಿ - ರೂಪಕ**
ಏನ ಮಾಡಲಿ ನಾನು | ಹೀನ ಬೇಡನು ಎನ್ನ |
ತ್ರಾಣಗುಂದಿಸಿ ಜಯ | ಹಾನಿಗೈಸಿದನು || ಪ ||
ಅಸಮ ಕೈದುಗಳೆಲ್ಲ | ವಶಗೈದು ಸುಮ್ಮಾನ |
ರಸದೊಳು ನಿಂತಿಹ | ವಿಷಮ ದುರ್ಜನನು || 111 ||
ಹಲವು ಮಾತುಗಳೇನು | ಕುಲಗಡುಕನ ಜಯ |
ಲಲನೆ ಕೈವಿಡಿದಳಿ | ನ್ನಳಿವುಂಟೆ ಅವಗೆ || 112 ||
ಗುರುಹಿರಿಯರ ನೋಡಿ | ಎರಗದಾದೆನೊ ಬಡ |
ವರ ಸೊತ್ತುಗಳನಪ | ಹರಿಸಿದನೇನೊ || 113 ||
ಹರಿಹರರನು ಭೇದ | ಗೈದೆನೊ ಶಿವನಂಘ್ರಿ |
ಸ್ಮರಿಸದಾದೆನೊ ದೃಢ | ದೊಳಗೆ ನಾನಿಂದು || 114 ||
ಬರಿದೆ ಈ ಪರಿ ಕಷ್ಟ | ದೊರೆತುದೆನ್ನಯ ಸತ್ತ್ವ |
ಮುರಿದ ದುರ್ಬಲನಾಗಿ | ಒರಲುವುದುಂಟೆ || 115 ||
ಯಾಕೆ ಬಂದುದೊ ಕೆಟ್ಟ | ಸೂಕರೆನ್ನಿದಿರಿಗೆ |
ಯಾಕೆ ನಾ ಹೊಡೆದೆನೊ | ಗರ್ವದಿಂದದರ || 116 ||
ಪೋಕಬುದ್ಧಿಯೊಳ್ಯಾಕೀ | ದುರುಳನೊಳ್ ಸೆಣಸಿದೆ |
ಲೋಕ ಮೂರರೊಳವಿ | ವೇಕಿಯಾದೆನಲಾ || 117 ||

**ಭಾಮಿನಿ**
ಮರುಗಲೇನಹುದಿನ್ನು ಶೂಲಿಯ |
ಚರಣ ಪೂಜೆಯ ಗೈದು ವ್ಯಾಧನ |
ಶಿರವ ಕೊಂಬೆನೆನುತ್ತ ರಚಿಸಿದ ಮಳಲ ಲಿಂಗವನು ||
ಪರಿಪರಿಯ ಸುಮದಿಂದಲರ್ಚಿಸು |
ತೆರಗಿ ನುತಿಸುತಲೆಂದ ದುಷ್ಟನ |
ಧುರದಿ ಜೈಸುವ ಬಲುಹ ಕರುಣಿಸೆನುತ್ತಲೆರಗಿದನು || 118 ||

**ಸೌರಾಷ್ಟ್ರ - ತ್ರಿವುಡೆ**
ಎಲವೊ ನಿಲ್ಲು ದುರಾತ್ಮ ಶಂಕರ |
ನೊಲುಮೆ ಪಡೆದಿಹೆನೊಂದು ನಿಮಿಷಕೆ |
ತಲೆಯ ಕೊಂಬೆನು ನೋಡು ಭುಜಬಲ | ದೊಲವನೆನುತ || 119 ||
ಪರಿಕಿಸಲು ಬೇಡನ ಶಿರಾಗ್ರದೊ |
ಳಿರಲು ತಾನರ್ಚಿಸಿದ ಸುಮಗಳು |
ಬೆರಗಿನಿಂದೀಕ್ಷಿಸಿದ ಬರಿ ಲಿಂ | ಗವನು ನರನು || 120 ||
ಭೂರಿ ಚೋದ್ಯವಿದೇನು ಶಂಭುವಿ |
ಗೇರಿಸಿದ ಸುಮ ವೈರಿಶಿರದೊಳು |
ತೋರುತಿದೆ ಕಡು ಭಂಡನೊಯ್ದನೆ | ಚೋರತನದಿ || 121 ||
ನಾನೆ ಪುಷ್ಪಗಳಿಡದೆ ಭ್ರಮೆಯಲಿ |
ಸ್ಥಾಣುವಿನ ಪೂಜೆಯನು ಗೈದೆನೊ |
ಕಾಣಬೇಕಿನ್ನೊಮ್ಮೆ ಮನಕೆ ನಿ | ಧಾನವಾಗಿ || 122 ||
ಎನುತ ನಿರ್ಮಾಲ್ಯವನು ತೆಗೆದತಿ |
ವಿನಯದಲಿ ಪೊಸ ಕುಸುಮವೇರಿಸಿ |
ಮನುಮಥಾರಿಗೆ ಮಣಿದು ಪ್ರಾರ್ಥಿಸಿ | ರಣಕೆ ನಿಲಲು || 123 ||
ಮತ್ತೆ ನೋಡಲು ವರ ಪುಳಿಂದನ |
ಮಸ್ತಕದಿ ತಾನಿಟ್ಟ ಸುಮವಿರೆ |
ಅತ್ತಲಿರೆ ಬರಿಲಿಂಗ ನುಡಿದನು | ಚಿತ್ತ ನಡುಗಿ || 124 ||

**ಭೈರವಿ - ರೂಪಕ**
ಹರ ಹರೆನ್ನ ಗರ್ವದಿಂದ | ಲರಿಯದಾದೆ ಶಿವನ ನೆಲೆಯ |
ಕರುಣನಿಧಿ ಮಹೇಶ ಗೌರಿ | ಯರಸನೀತನು || 125 ||
ಇದಕೆ ಸಂಶಯಂಗಳಿಲ್ಲ | ಮುದದೊಳೆನ್ನ ದೃಢವ ತಿಳಿಯ |
ಲೊದಗಿನಿಂದ ಬಂದನೀತ | ಶಬರ ವೇಷದಿ || 126 ||
ಇರುವೆ ಕರಿಯ ಕೆಣಕಿದಂತೆ | ಧುರದೊಳಧಿಕ ಕೊಬ್ಬಿನೊಳಗೆ |
ಚರಣದಿಂದಲೊದೆದು ಬೈದು | ಕರದಿ ತಿವಿದೆನು || 127 ||
ಸುರಗಿ ಅಕ್ಷಯಾಸ್ತ್ರ ಚಾಪ | ಭರಿತ ಸತ್ತ್ವ ಸಹಿತ ಸೆಳೆದ |
ನರಿಯದಾದೆ ಕ್ಷಾತ್ರ ಮದದಿ | ಮೂಢಭುಮೆಯಲಿ || 128 ||
ಅಣ್ಣದೇವ ಕೇಳ್ವರೇನ | ನೆನ್ನಲವಗೆ ಕಮಲನಾಭ |
ಪುಣ್ಯಹೀನ ಧೃಷ್ಟನೆನುತ | ಲೆನ್ನ ಜರಿಯನೆ || 129 ||
ನಷ್ಟವಾದುದೆನ್ನ ಸಹಸ | ಸಿಟ್ಟಿನಿಂದಲವನ ಕೈಯ |
ಬಿಟ್ಟರ್ಯಾರು ಗತಿಯು ತನಗೆ | ಕೆಟ್ಟೆ ವ್ಯರ್ಥದಿ || 130 ||

**ಭೈರವಿ - ಝಂಪೆ**
ಈ ತೆರದೊಳಾ ನರನು | ಕಾತರಿಸಿ ಮರುಗುತಿರೆ |
ಭೂತನಾಥನು ನೋಡಿ | ಪ್ರೀತಿಯಿಂದಾಗ || 131 ||
ವರ ಶಬರರೂಪವನು | ತೊರೆದು ಪಂಚಾನನದಿ |
ಮೆರೆವ ದಶಭುಜದಿಂದ | ಗಿರಿಜಾತೆ ಸಹಿತ || 132 ||
ಕರಿವದನ ಗುಹವೀರ | ಭದ್ರಾದಿ ಗಡಣದಲಿ |
ನರಗೆ ನಿಜವನು ತೋರ್ದ | ಪರಮೇಶ ಮುದದಿ || 133 ||
ನಡುಗಿ ಭಯದೊಳು ಶೋಕ | ಪಡುತ ಸಂತಾಪದೊಳು |
ಪೊಡವಿಯಲಿ ಹೊರಳಿದನು | ಮೃಡನೆ ಸಲಹೆನುತ || 134 ||
ದುರುಳನನು ಮೂಢನನು | ಗರುವಿಯನು ದ್ರೋಹಿಯನು |
ಪೊರೆಯಬೇಕೆಲೆ ದೇವ | ಕರುಣದೊಳು ನೀನು || 135 ||

**ಬೇಗಡೆ - ಆದಿ**
ಇಂತು ನುತಿಸುತಲಿರ್ಪ ಪಾರ್ಥನ | ಕಂಡಾಗ ಗೌರೀ |
ಕಾಂತ ಹರುಷದೊಳೆಂದನಾಕ್ಷಣ ||
ಕುಂತಿಸುತ ನೀನಿತ್ತ ಬಾ ಬಿಡು |
ಚಿಂತೆ ಮನಸಂತಾಪ ದುಃಖವ |
ಸಂತಸದಿ ನೀ ಬೇಡಿಕೊಳ್ಳೈ |
ಚಿಂತಿತಾರ್ಥವ ನಿನಗೆ ಕೊಡುವೆನು || ಇಂತು || ಪ ||
ನಿನ್ನ ಧನುಶರ ಮುಖ್ಯ ಕೈದುಗ |
ಳನ್ನು ಕೊಳ್ಳಯ್ಯ | ಧುರದೊಳ |
ಗೆನ್ನ ಕೈಲಿ ಕಾದಿ ಬಲುತರ | ನೊಂದು ಬಳಲಿದೆಯಾ | ಮನದಲಿ |
ಖಿನ್ನನಾಗಲು ಬೇಡ ನಿನ್ನಲಿ | ವರ್ಮವಿಲ್ಲಯ್ಯಾ || ಎನ್ನಯ |
ಚಿಣ್ಣರಾಣೆಯು ಕೇಳು ಸಂಶಯ |
ವನ್ನು ಬಿಡು ಬಿಡು ಈಗ ನೀ ನಮ |
ಗನ್ಯನಲ್ಲತಿ ಭಕ್ತ ಹರಿಪ್ರಿಯ |
ನೆನ್ನಲಾ ಹರಗೆಂದ ವಿಜಯನು || ಇಂತು || 136 ||
ಇಂದುಮೌಳಿ ಮಹೇಶ ಪರಮಾ | ನಂದ ಭವದೂರ | ತವಪದ |
ದ್ವಂದ್ವವರಿಯದೆ ಎನ್ನ ಬಯಕೆಯ |
ಸಿಂಧುಗಂಭೀರ | ಭಕ್ತರ |
ಬಂಧು ದಯವಿರಲೀಗ ಪಾಲಿಸು | ಪಾಶುಪತಶರವ || ಈಗಲು |
ನಿಂದು ಬೇಡುವೆನೆಂದು ನಮಿಸಲು |
ಕಂದುಗೊರಳನು ನೋಡಿ ಕರುಣಗ |
ಳಿಂದಲಿತ್ತನು ಪಾಶುಪತವನು |
ಇಂದ್ರಸುತಗಾನಂದದಿಂದಲಿ || ಇಂತು || 137 ||
ಮೂಲಮಂತ್ರವನೆಲ್ಲ ಶಿವ ತಾ | ಪೇಳಿ ಸಂಗದಲಿ | ಭಕ್ತನ |
ಪಾಲಿಸೆಂದಾ ಗೌರಿಗರುಹಲು |
ಬಾಲೆ ಹರುಷದಲಿ | ಲಕ್ಷ್ಮೀ |
ಲೋಲಮೈದುನ ಇತ್ತ ಬಾರೆನು |
ತಾಗ ಕರುಣದಲಿ || ತಾನತಿ ||
ಲೀಲೆಯಿಂದವಗಂಜನಾಸ್ತ್ರವ |
ಬಾಲಗುಹ ಗಣಪಾದಿ ಪ್ರಮಥರ |
ಕಾಲಿಗೆರಗಲು ಕಂಡು ಹರುಷದಿ |
ಪಾಲಿಸಿದರೊಂದೊಂದು ಮಂತ್ರವ || ಇಂತು || 138 ||

**ಕೇದಾರಗೌಳ - ಅಷ್ಟ**
ಇನಿತೆಲ್ಲರಿಗೆ ಮಣಿದರ್ಜುನನು ತೋಷದಿ |
ಘನಶರಂಗಳ ಪಡೆದು ||
ವಿನಯದಿಂ ಕರವ ಜೋಡಿಸಿಕೊಂಡು ನಿಂತಿರೆ |
ಮನುಮಥಾಂತಕನಿದಿರು || 139 ||
ಕರೆದು ಪಾರ್ಥನೊಳೆಂದ ನಮ್ಮ ಶಸ್ತ್ರಂಗಳು |
ದೊರಕಿತೆಂದೆನುತ ನೀನು ||
ಮರೆಯದಿರ್ ಹರಿಯನ್ನು ನಿಮ್ಮ ದೇಹಕ್ಕಾತ |
ಪರಮ ಸಂಜೀವನನು || 140 ||
ತೆರಳು ಸಕಲ ಕಾರ್ಯ ಸಿದ್ಧಿಸಿ ಸುಖದಿಂದ |
ಲಿರುವಿರಿ ಮುಂದೆನುತ ||
ಹರ ತನ್ನ ಗಣ ಸಹಿತೈದಿದ ನರನಿತ್ತ |
ಲಿರೆ ಬಂದ ಸುರನಾಥನು || 141 ||
ತನಯ ಕೇಳ್ ನಿನಗೆ ತ್ರೈಭುವನದೊಳಿದಿರುಂಟೆ |
ತ್ರಿಣಯನೊಲಿದ ಮೇಲಿನ್ನು ||
ವಿನಯದಿಂದೆನ್ನ ಪುರಕೆ ಬಂದು ತಪಸಿನ |
ದಣು ಪರಿಹರಿಸೆಂದನು || 142 ||
ಜನಕ ಕೇಳ್ ನಾನೆಲ್ಲಿ ಸುರಪುರ ತಾನೆಲ್ಲಿ |
ಮನುಜರ್ಗೆ ದೊರಕುವುದೆ |
ಮನುಮಥಾರಿಯ ದಯವೆಂದು ಹತ್ತಿದನಾಗ |
ಘನ ಪುಷ್ಪಕವನಿರದೆ || 143 ||

**ಭಾಮಿನಿ**
ಹಾರಿಸಿದ ಮಾತಳಿಯು ಗಗನಕೆ |
ಮಾರುತನ ವೇಗದಲಿ ವಿಜಯಗೆ |
ತೋರಿಸುತ ಬ್ರಹ್ಮಾಂಡ ವಿಸ್ತಾರವನು ಮನವೊಲಿದು ||
ಭೂರಿವಿಭವಗಳಿಂದ ಘನಗಂ |
ಭೀರ ಸ್ವರ್ಗವ ಪೊಕ್ಕು ವರ ಜಂ |
ಭಾರಿಯರ್ಧಾಸನವನೇರಿದ ವೀರ ಫಲುಗುಣನು || 144 ||

**ಕೇದಾರಗೌಳ - ಝಂಪೆ**
ಭರಿತ ವಿಭವಗಳಿಂದಲಿ | ಇರುತಿರುವ |
ಸುರಸಭೆಯನೀಕ್ಷಿಸುತಲಿ ||
ಪರಮ ಹರುಷಗಳಿಂದಲಿ | ಕುಳ್ಳಿರಲು |
ಸುರಪ ಸಹಿತಾಸನದಲಿ || 145 ||
ನರರು ಶತಕ್ರತು ಮಾಡಲು | ಸ್ವರ್ಗಕ್ಕೆ |
ಬರುವರೆಂಬೀ ನುಡಿಗಳು ||
ಬರಡಾದುದೆನುತೆಲ್ಲರು | ಅಚ್ಚರಿಯ |
ಪರಿಕಿಸಲು ನಡೆತಂದರು || 146 ||
ಶರಧಿ ತೆರೆಗಳ ಪರಿಯಲಿ | ಮುಸುಕುತಿರೆ |
ನರನ ಕಾಣುವ ಭ್ರಮೆಯಲಿ ||
ಸುರಪ ಗರ್ಜಿಸುತೆಂದನು | ನೂಕು ನೂಕ್ |
ಹೊರಗಧಮರಿಂಗೆಂದನು || 147 ||
ಮುಂದೆ ಬಾಜಿಯ ಬಿಡಿಸಲು | ನಾರಿಯರ |
ವೃಂದ ಝಣಝಣರವದೊಳು ||
ಬಂದರತಿ ಬೆಡಗಿನೊಳಗೆ | ನರ್ತನಕೆ |
ನಿಂದರತಿ ತೋಷದೊಳಗೆ || 148 ||
ತಾಳ ಲಯ ರಾಗದಿಂದ | ನಟಿಸಿದರು |
ಬಾಲೆಯರು ಚಂದದಿಂದ ||
ಹೇಳಲರಿದೆನಗಂದಿನ | ಸುರಪತಿಯ |
ಓಲಗದ ಸಿರಿಯ ಹದನ || 149 ||
ಭರತ ಶಾಸ್ತ್ರಗಳು ಕೂಡಿ | ನರ್ತಿಸುವ |
ತರುಣಿಯೂರ್ವಶಿಯ ನೋಡಿ ||
ಬೆರಗಾಗಿ ಕಲಿಪಾರ್ಥನು | ಈ ಸತಿಗೆ |
ಸರಿಗಾಣೆ ಭಾಪೆಂದನು || 150 ||

ತನಯನೆಂದುದ ಲಾಲಿಸಿ | ಈಕೆಯಲಿ |
ಮನವಾಯಿತೆಂದು ಗ್ರಹಿಸಿ ||
ಘನ ಸಭೆಯ ಬೀಳ್ಕೊಟ್ಟನು | ಚಿತ್ರಸೇ |
ನನ ಕರೆವುತಿಂತೆಂದನು || 151 ||

**ಮಧುಮಾಧವಿ - ತ್ರಿವುಡೆ - ಏಕ**
ಇತ್ತ ಬಾರೈ ಚಿತ್ರಸೇನನೆ | ಮತ್ತೆ |
ಫಲುಗುಣನೂರ್ವಶಿಯ ಮೇಲ್ |
ಚಿತ್ತವಿಟ್ಟಿಹ ಕಳುಹು ಬೇಗದಿ |
ಪುತ್ರನಿದ್ದೆಡೆಗವಳನು | ಪೋಗಿ ನೀನು || 152 ||
ಎಂದು ನೇಮವ ಕೊಡಲು ಖಚರನು |
ಬಂದನಾಕೆಯ ಮನೆಗೆ ಕಾಣುತ |
ಚಂದದಿಂದುಪಚರಿಸಿ ಕೇಳ್ದಳು |
ಮಂದಗಾಮಿನಿ ಹರುಷದಿ | ಆತನೊಡನೆ || 153 ||
ಏನು ಬಂದುದು ಸ್ವಾರಿ ನಿನ್ನದು |
ಜಾಣ ಸುರಪತಿ ಕಳುಹಿಕೊಟ್ಟನೆ |
ಮಾನನಿಧಿ ಬಹ ಕಾರ್ಯವೇನೆನೆ|
ಮಾನಿನಿಯೊಳವ ಪೇಳ್ದನು | ಗುಪ್ತದಿಂದ || 154 ||
ಬಲರಿಪುವಿನಪ್ಪಣೆಗಳಾದುದು |
ನಿಲದೆ ಇಂದಿನ ದಿನದಿ ನೀನಾ |
ಫಲುಗುಣಗೆ ಸತಿಯಾಗಬೇಕೆನೆ |
ಲಲನೆ ತೋಷವ ತಾಳ್ದಳು | ಚಿತ್ತದೊಳಗೆ || 155 ||
ಮೀರಲಳವೇ ಧೊರೆನಿರೂಪವ |
ಸಾರುವೆನು ಈ ಕ್ಷಣದೊಳೆಂದಾ |
ಧೀರನನು ಬೀಳ್ಕೊಟ್ಟು ಊರ್ವಶಿ |
ಭೂರಿ ಶೃಂಗರವಾದಳು | ಗೆಲವಿನಿಂದ || 156 ||

**ವಸಂತಭೈರವಿ - ಏಕ**
ಏನನೆಂಬೆ ನಾನೂರ್ವಶಿಸೊಬಗುಗಳ | ಬೀರುತ ಬೆಡಗುಗಳ |
ಏನನೆಂಬೆ ನಾನೂರ್ವಶಿ ಸೊಬಗುಗಳ || ಪ ||
ತೊಟ್ಟಳು ಸರ್ವಾಭರಣವ ದೇಹದೊಳು |ತಾನತಿ ವಿಭವದೊಳು |
ಉಟ್ಟಳಾಗ ಕಲುಗಚ್ಚಿನ ಶೀರೆಗಳು |ತೊಡಿಸುತ ರವಕೆಗಳು |
ಅಷ್ಟಗಂಧವನು ತನುವಿಗೆ ತಿವುರಿದಳು | ಕುಂಕುಮ ತಿಲಕಗಳು ||
ಇಟ್ಟು ಫಣೆಗೆ ಕಪ್ಪಚ್ಚಿದಳಕ್ಷಿಗೆ |
ದಿಟ್ಟೆ ಸುಮವ ಕಟ್ಟೇರಿಸಿ ತುರುಬಿಗೆ | ಏನನೆಂಬೆ || 157 ||
ಲಲನೆಯು ದರ್ಪಣವೀಕ್ಷಿಸಿ ತ್ವರಿತದೊಳು |ಶಾಲ್‌ಹೊದಿಕೆಯೊಳು |
ಹೊಳೆವ ದವಡೆಯೊಳ್ ವೀಳ್ಯವನಿರಿಸಿದಳು | ಸ್ತ್ರೀಯರ ಗಡಣದೊಳು |
ಒಲಪಿನಿಂದ ಬರೆ ದಂಡಿಗೆ ಮೇಲವಳು | ಪರಮಾನಂದದೊಳು ||
ಚಳಕದಿಂದ ನರನಿಳಯವ ಕಾಣುತ |
ಲೊಳಗೆ ಪೊಕ್ಕಳೆಲ್ಲರ  ಹೊರಗಿರಿಸುತ || 158 ||
ನಾರಿ ಕಂಡಳಾ ಹೇಮದ ಮಂಚದೊಳು | ಘನತರ ನಿದ್ರೆಯೊಳು |
ಧೀರ ಪಾರ್ಥ ತಾ ಮಲಗಿರೆ ಸೌಖ್ಯದೊಳು | ಮನ್ಮಥನಂದದೊಳು |
ಸೂರೆಗೊಟ್ಟಳಾ ರೂಪಿಗೆ ಮನಗಳನು | ವಿರಹದಿ ಬಳಲಿದಳು ||
ಭೂರಿ ಪುಣ್ಯವೀ ಪುರುಷನ ಭೋಗವು |
ಸೇರಿಕೊಂಡರಾನಧಿಕ ಕೃತಾರ್ಥಳು || ಏನನೆಂಬೆ || 159 ||

**ಭಾಮಿನಿ**
ಸ್ಮರವಿರೋಧಿಯ ಕೂಡೆ ಸೆಣಸಿದ |
ಪರಮ ಸಾಹಸಿ ಪುಷ್ಪಬಾಣನ |
ಧುರಕೆ ಹಿಮ್ಮೆಟ್ಟುವನೆ ಮಲಗಿಹ ತಪದ ಶ್ರಮದಿಂದ ||
ಪರಿಹರಿಸಲೆಂತಿವನ ನಿದ್ರೆಯ |
ನೆನುತ ಚರಣಾಭರಣ ಕುಣಿಸಲು |
ನರನು ಬೆಚ್ಚುತಲೆದ್ದು ನೋಡಿದ ಮುಂದೆ ಊರ್ವಶಿಯ || 160 ||

**ಕಾಂಭೋಜ - ಝಂಪೆ**
ಹರ ಹರೇನಿಂದೆನ್ನ ಮೇಲಧಿಕ ಕರುಣದಲಿ |
ಬರವಾದುದಿಲ್ಲೆಗೆಂದೆನುತ ||
ಪರಮ ಭಕ್ತಿಗಳಿಂದಲೆಳಿದು ಪರಿಯಂಕವ |
ನ್ನೈರಗಿದನು ಪಾರ್ಥ ನಸುನಗುತ || 161 ||
ವಂದಿಸಿದ ಪರಿಯ ಕಂಡಿಂದುಮುಖಿ ಊರ್ವಶಿಯು |
ನೊಂದುಕೊಂಡಳು ನಾಚಿ ಮನದಿ ||
ಇಂದು ನಾ ಬರಬಹುದೆ ಮಂದಮತಿ ಖಚರ ತಾ |
ನೆಂದ ಮಾತಿಗೆ ಧೃಷ್ಟತನದಿ || 162 ||
ಎನುತಲೀಪರಿಯಿಂದ ಹಲವು ವಿಧ ಯೋಚಿಸುತ |
ವನಿತೆ ಫಲುಗುಣಗೆಂದಳಾಗ ||
ಘನ ಪರಾಕ್ರಮಿ ನಿನಗೆ ಮನವೊಲಿದು ಬಂದಿಹೆನು |
ಬಿನುಗು ವಾರ್ತೆಗಳ್ಯಾತಕೀಗ || 163 ||
ಲೇಸು ಲೇಸೆಲೆ ತಾಯೆ ತವ ಚರಣಭೇಟಿಯಲಿ |
ನಾಶವಾದುದು ಎನ್ನ ದುರಿತ ||
ವಾಸವನ ಭೋಗಸತಿ ನಿಮಗೆ ನಾ ಮಗನೈಸೆ |
ಪಾಶವಿಡಬಹುದೆ ಬಹು ವಿಹಿತ || 164 ||

**ಶಂಕರಾಭರಣ - ಏಕ**
ಬರಿದೆ ಇಂಥಾ ಮೂಢ ನುಡಿಗ |
ಳೊರೆವುದ್ಯಾಕೆ ನಿನ್ನ ಬಳಿಗೆ |
ಸುರಪ ಕಳುಹೆ ಬಂದೆ ತೋರೈ |
ಸ್ಮರನ ಕಲಹವ ||
ಭರಿತ ದ್ರೋಹ ವಚನವೀಗ |
ತರಳನೊಳುಚಿತವೆ ತಾಯೆ |
ಹರುಷದಿ ನೀನೆನ್ನ ಹರಸಿ |
ತೆರಳು ಬಂದಂತೆ || 165 ||
ಮೂರು ಜಗದೊಳಧಿಕ ಭಟನು |
ಗೌರೀಶನೊಳು ಸೆಣಸಿದಂತ |
ಧೀರ ಹಿಮ್ಮೆಟ್ಟುವರೆ ಬೆದರಿ |
ಮಾರನಾಹವಕೆ ||
ಮೀರದೇ ಸತ್ಯವ ಧರ್ಮ |
ಸಾರದೋರಿ ಶೌರ್ಯಗಳನು |
ಬೀರುವುದಲ್ಲದೆ ಪಾಪ |
ದಾರಿ ಹಿಡಿಯೆವು || 166 ||
ಭೂತಳದೊಳಧಿಕ ಸತ್ಯ |
ಖ್ಯಾತರಹುದು ಸತಿಯೊಬ್ಬಳಿಗೆ |
ಪ್ರೀತರೈದು ಮಂದಿ ವೃಷಭ | ಜಾತಿಯ ತೆರದಿ ||
ಮಾತೆಯನುಜ್ಞೆಯನು ಸುಜನ |
ವ್ರಾತ ಮೀರಬಾರದರಿಂದ |
ಪ್ರೀತೆಯ ಭೋಗಿಪೆವು ಮುನಿ | ನಾಥ ನುಡಿದಂತೆ || 167 ||
ಜನನಿ ವಚನವನ್ನು ನಡೆಸಿ |
ಜನಕನಾಜ್ಞೆಗಾಗಿ ಬಂದ |
ವನಿತೆಯನ್ನು ತ್ಯಜಿಸುವಂತೆ |
ಘನ ಶಾಸ್ತ್ರವಿಹುದೆ ||
ವನಜಮುಖಿಯೆ ನಮ್ಮ ನೆಲೆಯು |
ನಿನಗೆ ತಿಳಿಯದೀಗ ಹಿಂದೆ |
ಮನುಮಥಾರಿ ಕೊಟ್ಟ ವರದೊ | ಳನುಭವಿಸುವೆವು || 168 ||
ನಿನ್ನಮೂಲ ಕಥೆಯ ಕೇಳ್ದ |
ರೆನ್ನ ವಿರಹ ತಣಿವುದೇನೈ |
ಇನ್ನು ಛಲವ ಬಿಟ್ಟು ರಮಿಸೊ |
ತನ್ನ ದಯದೊಳು ||
ಸಣ್ಣವನೊಳಿಂಥ ಮಾತು |
ಸನ್ಮತವೆ ಜನನಿಯರಿಗೆ |
ಮುನ್ನ ತ್ರಿಜಗವಳಿದರೊಪ್ಪೆ || ನಿನ್ನಿದಕಾನು || 169 ||

**ಕಾಂಭೋಜ - ಏಕ**
ಎಲವೊ ನರನೆ ಕೇಳು ನಾನ್ಯಾರೆಂದು | ತಿಳಿಯದಾದೆ ನೀನು |
ಇಳೆಯೊಳ್ ಶತಯಾಗವನು ಗೈದ | ರೊಲಿಯೆನವಗೆ ನಾನು ||
ನಿಲದೆ ನಿನ್ನ ಬಳಿಗೆ ನಾನೆ | ತೆರಳಿ ದೇಹಿ ಎನಲು |
ತಲೆಗೆ ಪಿತ್ತವೇರಿ ಬಹಳ | ತುಚ್ಛಿಸುವರೆ ಪೇಳು || 170 ||
ಯಾತಕಿಂತ ಹಟಗಳವ್ವ | ಜಾತನಲ್ಲ ನಿಮಗೆ |
ಪೇತು ಮನುಜರಾವು ಚಿತ್ತ | ಸೋತು ನುಡಿವಿರೆ ಹೀಗೆ ||
ಭೂತನಾಥನಾಣೆ ಎನ್ನೊಳ್ | ಸೋತುದೀ ಮಾತುಗಳು || 171 ||

**ಸೌರಾಷ್ಟ್ರ - ತ್ರಿವುಡೆ**
ಫಲುಗುಣನ ನುಡಿ ಕೇಳುತೂರ್ವಶಿ |
ನಿಲದೆ ಮಾನಚ್ಯುತಿಗೆ ಕೋಪದಿ |
ಕಳವಳಿಸಿ ಪೇಳಿದಳು ಮೋಹವ | ಕಳಚಿ ಭರದಿ || 172 ||
ಎಲವೊ ಭಂಡ ದುರಾತ್ಮ ಮನುಜರ |
ಕುಲದೊಳಧಮ ಶಿಖಂಡಿ ಖೂಳರ |
ತಿಲಕ ಹೇಡಿ ಮುಸುಂಡಿ ತಿಳಿಯದೆ | ನೆಲೆಯನೆನ್ನ || 173 ||
ಮಂದಮತಿ ನೀನೆನ್ನ ಚಿತ್ತವ |
ನಿಂದು ನೋಯಿಸಿ ಮಾನಹಾನಿಯ |
ತಂದ ದ್ರೋಹಕೆ ಕೊಡುವೆನೌಷಧ | ಚಂದದಿಂದ || 174 ||
ಎಂದು ಹಸ್ತವ ನೆಗಹಿ ಕ್ರೋಧಗ |
ಳಿಂದ ಕೊಟ್ಟಳು ಶಾಪ ಧರೆಯೊಳ |
ಗೊಂದು ವರುಷವು ಷಂಡನಾಗೆನು | ತಂದು ನರಗೆ || 175 ||
ಹರಿಹರಬ್ರಹ್ಮಾದಿ ದೇವರ |
ಮರೆಯ ಹೊಕ್ಕರು ಬಿಡದು ಹೋಗೆನು |
ತೊರೆದು ತೆರಳಿದಳಾಗ ನಿಜಮಂ | ದಿರಕೆ ತರುಣಿ || 176 ||
ಕರೆಸಿದಳು ವರಚಿತ್ರಸೇನನ |
ಅರುಹಿದಳು ವೃತ್ತಾಂತವೆಲ್ಲವ |
ಮರುಗಿದನುನರನಿತ್ತ ನಾನಾ | ಪರಿಯೊಳಂದು || 177 ||

**ನೀಲಾಂಬರಿ - ಆದಿ**
ಏಕೆ ಬಂದೆನಯ್ಯೋ ನಾನು | ನಾಕಕೀಗ ಶಿವನೆ ||
ಲೋಕೇಶನ ಲಿಖಿತವಿಷ್ಟು | ಕಾಕುಮಾಡಿತಕಟಾ || 178 ||
ನರರು ಶತಯಾಗವ ಮಾಡಿ | ಬರುವಂತೀಪುರಕೆ ||
ಹರನ ದಯದಿ ಸುಲಭವಾಗಿ | ದೊರಕಿತೆನಗೆ ಸ್ವರ್ಗ || 179 ||
ಭೂತಳದೊಳೆನ್ನ ಪೋಲ್ವ | ಖ್ಯಾತರಿಲ್ಲವೆಂದು ||
ಸಾತಿಶಯದಿಂದಲಿರಲು | ಈ ತರುಣಿ ಬಂದು || 180 ||
ಶಾಪವೆನಗಿತ್ತಳು ನಿ | ರಪರಾಧದಿಂದ ||
ಭೂಪ ಧರ್ಮಜಾದಿಗಳಿಗೆ | ತೋರ್ಪೆನೆಂತು ಮುಖವ || 181 ||

**ಭಾಮಿನಿ**
ವರನಪುಂಸಕತನದಿ ಧರೆಯೊಳು |
ಹರಣ ಪೊರೆವುದರಿಂದ ಪ್ರಾಣವ |
ತೊರೆವುದತಿ ಲೇಸೆಂದು ಫಲುಗುಣನಿರಲು ದುಗುಡದಲಿ ||
ಅರಸ ಕೇಳೈ ಇತ್ತ ಖಚರನು |
ಸುರಪನೆಡೆಗೈತಂದು ಸಕಲವ |
ನರುಹಲಾಕ್ಷಣ ಬಂದು ತನಯನೊಳೆಂದ ನಸುನಗುತ || 182 ||

**ನವರೋಜು - ಏಕ**
ಏನಿದೇನಿದು ಮಗನೆ | ಬಿಡು |
ಹೀನ ಶೋಕಂಗಳನೆ ||
ಮಾನನಿಧಿಯೆ ಅವ | ಮಾನಗಳಲ್ಲಿದು |
ಮಾನಿನಿಯುಪಕೃತಿ | ತಾನೆಸಗಿದಳು || 183 ||
ವರುಷವಜ್ಞಾತವನು | ನೀ |
ವಿರುವ ವೇಳ್ಯಕೆ ಇದನು ||
ಧರಿಸಬಹುದು ಹರಿ ಕರುಣದಿ ನಿನಗಿದು |
ದೊರಕಿತು ಸುಮ್ಮನೆ | ಮರುಗದಿರಿನ್ನು || 184 ||

ಎಂದು ಬೋಧಿಸಿ ನರಗೆ | ಕರೆ |
ತಂದು ತನ್ನಯ ಮನೆಗೆ ||
ಚಂದದಿ ಕುಳ್ಳಿರ | ಲಂದು ಸುರಪ ಸುರ |
ವೃಂದವಿಪತ್ತನು | ಕಂದನೊಳರುಹಿದ || 185 ||
ವರಹಿರಣ್ಯಕಪುರದಿ | ಕಡು |
ದುರುಳ ದೈತ್ಯರು ಮುದದಿ ||
ಇರುವರು ದಿನದಿನ ದಿವಿಜರ ಬಾಧಿಸೆ |
ಪರಿಪರಿ ವಸ್ತುಗ | ಳಪಹರಿಸುವರು || 186 ||
ಹರನ ಶಸ್ತ್ರದ ಬಲವು | ಮುರ |
ಹರನ ಸಖ್ಯದ ಒಲವು ||
ಇರುವುದು ನೀನಾ | ದುರುಳರ ಮರ್ದಿಸಿ |
ಪೊರೆ ಸ್ವರ್ಗವನೆನ | ಲೊರೆದ ಧನಂಜಯ || 187 ||

**ಮಾರವಿ - ಏಕ**
ತಾತನೆ ಈ ತೃಣಕಾರ್ಯಕೆ ಸುಮ್ಮನೆ |
ಯಾತಕೆ ಭಯ ನಿಮಗೆ |
ಪಾತಕರಾದ ನಿವಾತಕವಚರನು |
ಘಾತಿಪೆ ಕ್ಷಣದೊಳಗೆ || 188 ||
ಹರುಷದೊಳಿರಿಸುವೆ ಸುಮನಸಲೋಕವ |
ತರಿಸೈ ರಥವೆನುತ ||
ಶರಚಾಪವಕೊಂಡೆರಗಿ ನಡೆದನುರು |
ತರ ಮಾರ್ಬಲ ಸಹಿತ || 189 ||
ದುರುಳರ ನಗರವ ಮುತ್ತುತ ಕೋಟೆಯ |
ಮುರಿದೊಳಪೊಗುತಿರಲು ||
ಪರಿಕಿಸಿ ಚರರತಿ ಭಯದಿಂದೋಡುತ |
ಒರೆದರು ದೈತ್ಯರೊಳು || 190 ||
ಹರಿಯೊ ಮಹೇಶನೊ ಬ್ರಹ್ಮನೊ ಸುರಪನೊ |
ಅರಿಯೆವು ಬಂದೀಗ ||
ಪುರವನು ಮುಸುಕಿಹರೆನಲಾಗಸುರರು |
ಉರಿ ಸೂಸುತಲಾಗ || 191 ||
ಆನೆ ಕುದುರೆ ಬಲ ಸೇನಾವಾರದಿ |
ದಾನವರೈತರಲು ||
ಕಾಣುತ ಫಲುಗುಣ ಬಾಣದೊಳುರುಳಿಸೆ |
ಕ್ಷೋಣಿಗೆ ನಿಮಿಷದೊಳು || 192 ||

**ಕೇದಾರಗೌಳ - ಮಟ್ಟೆ**
ಅನಿತು ಬಲವು ನಾಶವಾಗೆ ಕಂಡು ದೈತ್ಯರು |
ಕನಲುತಾಯುಧವನೆ ಪಿಡಿದು ಪಾರ್ಥಗೆಂದರು || 193 ||
ಯಾರೋ ನೀನು ಹೊಸಬನಾಗಿ ತೋರಿ ಬರುತಿದೆ |
ವೀರ ನಮ್ಮ ಕೆಣಕಿ ನಿನ್ನ ತಲೆಯ ನೀಗಿದೆ || 194 ||
ಅಧಮರಿರ ಸುಪರ್ವರಿಂಗೆ ಬಾಧೆಯೆಸಗಿದ |
ಮದವ ನಿಲಿಸಿ ಬಿಡುವೆನೆನುತ ಬಂದೆ ನಾನಿದ || 195 ||
ಎಲವೊ ಮೂರುಲೋಕ ತೃಣಕೆ ಗಣಿಸದವರಲಿ |
ಗೆಲುವೆನೆಂಬ ಭ್ರಾಂತಿಯುಂಟೆ ನಿಲ್ಲು ಇದಿರಲಿ || 196 ||
ಕೇಳಿ ಬಂದೆ ಜಗದಿ ನಿಮ್ಮ ತುಂಟತನಗಳು |
ತಾಳಿ ನಿಮಗೆ ಮೃತ್ಯು ನಾನು ಮರಣವೀಯಲು || 197 ||

**ಭೈರವಿ - ಏಕ**
ಭಾಪುರೆ ನೀ ನಮಗೀಗ | ಮೃತ್ಯು |
ರೂಪನೆ ಭಳಿರೆನುತಾಗ ||
ಚಾಪಕೆ ಬಾಣವ ಹೂಡಿ | ಬಲು |
ಕೋಪದಿ ಬಿಟ್ಟರು ನೋಡಿ || 198 ||
ಬರುತಿಹ ಶರ ವೃಷ್ಟಿಯನು | ನರ |
ತರಿಯುತಲೈದಸ್ತ್ರವನು ||
ದುರುಳರಿಗೆಸೆಯಲು ಭರದಿ | ಶಿರ |
ವರಿದು ಕೆಡಹಿತಾಕ್ಷಣದಿ || 199 ||

ಕಾಲಕೇಯರಿರಿದ ಕೇಳಿ | ಬಲು |
ಕಾಳಗ ಕೊಡೆ ವಿಜಯನಲಿ ||
ಖೂಳರ ಜೀವವ ಬೇಗ | ಯಮ |
ನಾಲಯ ಪೊಗಿಸಿದನಾಗ || 200 ||

**ಭಾಮಿನಿ**
ಘೋರ ಖಳರನು ಮುರಿದು ನಗರದ |
ಭೂರಿವಸ್ತುವನೆಲ್ಲ ನಗರಕೆ |
ಸೇರಿಸುತ ಬಂದೆರಗಲಾ ಜಂಭಾರಿ ಪದಯುಗಕೆ ||
ಚಾರು ಹರುಷದೊಳಪ್ಪಿ ಕುವರನ |
ಮೀರಿದಾನಂದದಲಿ ಪೊಗಳಲು |
ಮೂರುಲೋಕದ ಗಂಡ ಕೇಳಿದ ಪಿತನೊಳಪ್ಪಣೆಯ || 201 ||

**ರೇಗುಪ್ತಿ - ಆದಿ**
ಇನ್ನು ನಾನಿಲ್ಲಿ ನಿಲಲಾರೆನ್ನೈ ಕಳು |
ಹೆನ್ನ ಶಚೀರಮಣ ||
ಮುನ್ನಗ್ರಜರನುಜಾತರು ಮನದಲಿ |
ಖಿನ್ನರಾಗುವರು ನಾ ಪೋಗದಿರೆ || 202 ||
ಅಕ್ಕರಧಿಕ ಸಹದೇವನಲ್ಲಿ ಮುಖ |
ಚಿಕ್ಕದಾಗಿ ಬೇಸರಿಸುವನು ||
ತಕ್ಕ ದಿವಸದೊಳಗೊರೆದವಧಿಗೆ ಕೈ |
ಮಿಕ್ಕಿತೆಂಬ ಯೋಚನೆ ಬಾಂಧವರೊಳು || 203 ||
ಕ್ಷೇಮವಾರ್ತೆಗಲ್ಲಿಗೆ ಬೃಹದಶ್ವನ |
ಪ್ರೇಮದಿಂದ ನಾ ಕಳುಹುವೆನು ||
ಭೀಮಾದ್ಯರಿಗರುಹಲಿ ಗಮನಾರ್ಥದಿ |
ಕಾಮನಾಗದೆ ದಿನತ್ರಯವಿರು ನೀನು || 204 ||
ಆಗ ಕರೆದು ರೋಮಶಮುನಿಪಾಲನ |
ಬೇಗದಿ ಪಾಂಡವರಿದ್ದೆಡೆಗೆ ||
ಈ ಗಾಂಡೀವಿಯ ಕುಶಲವರುಹು ಚೆ |
ನ್ನಾಗಿ ಧರ್ಮಜನ ಕರೆದವನೊಡನೆ || 205 ||

**ಮಾರವಿ - ಏಕ**
ಅನಿಮಿಷೇಂದ್ರನುಸಿರಿದ ಮಧುರೋಕ್ತಿಗೆ |
ಮನದೊಳೊಪ್ಪುಗೊಂಡು ||
ಜನಪ ಯುಧಿಷ್ಠಿರನೆಡೆಗೈತರಲಾ |
ಮುನಿಯ ಬರವ ಕಂಡು || 206 ||
ಇದಿರೆದ್ದರ್ಘ್ಯಾಸನವುಪಚಾರದಿ |
ವಿಧ ವಿಧ ಸತ್ಕರಿಸಿ ||
ಸದಮಲ ಹೃದಯನ ಬೆಸಗೊಂಡನು ನೃಪ |
ಮುದ ಮಾನಸಗೊಳಿಸಿ || 207 ||
ಗಮನವಿದೆತ್ತಣದೆಲ್ಲಿಯ ಕಾರ್ಯಾ |
ಗಮನವಿದೆಂತೆನಲು ||
ಅಮರಾವತಿಯ ಸುವಾರ್ತೆಯನರುಹಿದ |
ಮಮತೆಯೊಳರಸನಿಗೆ || 208 ||

**ಶಂಕರಾಭರಣ - ಅಷ್ಟ**
ಲಾಲಿಸಿ ಕೇಳ್ ಧರ್ಮರಾಯ | ಈಗ |
ಪೇಳುವೆ ಪಾರ್ಥನ ಚರ್ಯ |
ಆಲಸ್ಯವನುಳಿ | ದಾಲಿಸು ಸುಮನಸ |
ಪಾಲನುಸಿರ್ದ ವಿ |
ಶಾಲ ವಾರ್ತೆಗಳನ್ನು || ಲಾಲಿಸಿ || ಪ ||
ವಿಗ್ರಹದೊಳು ಧೈರ್ಯಗೂಡಿ | ಪರ್ವ |
ತಾಗ್ರದೊಳಗೆ ನಿಂದು ನೋಡಿ |
ಉಗ್ರತಪವನಲ್ಲಿ ಮಾಡಿ | ಭಕ್ತಾ |
ನುಗ್ರಹ ಶಿವನೊಳೆಚ್ಚಾಡಿ |
ಶೀಘ್ರದೊಳಸ್ತ್ರಪ | ರಿಗ್ರಹನಾಗಿ ಸ |
ಮಗ್ರ ದಾನವರನ್ನು ನಿಗ್ರಹಿಸಿದನೈ || ಲಾಲಿಸಿ || 209 ||

ಸವ್ಯಸಾಚಿಯ ಬಹು ಕಾರ್ಯ | ಮಹ |
ದಿವ್ಯ ಪರಾಕ್ರಮೋದಾರ್ಯ |
ಅವ್ಯಯ ಸುಗುಣಗಾಂಭೀರ್ಯ | ಲೋಭಿ |
ದ್ರವ್ಯದಂತಿಹುದೀಗ ಧೈರ್ಯ |
ಭೂವ್ಯೋಮದಿ ಸಂ |
ಭಾವ್ಯನಮಮ ಸು | ಶ್ರಾವ್ಯನು ನಿನ್ನ ಮ |
ನೋ ವ್ಯಥೆಯನು ಬಿಡು || ಲಾಲಿಸಿ || 210 ||
ಪ್ರೇಮವ ಸಲಿಸಬೇಕೆಂದು | ಆ ಸು |
ತ್ರಾಮನ ನಗರಿಗೆ ಬಂದು |
ಕ್ಷೇಮದೊಳಿರುವೆ ತಾನೆಂದು | ಪರಿ |
ಣಾಮ ವಾರ್ತೆಯನು ಕೇಳೆಂದು |
ರೋಮಶಮುನಿ ಸು | ಪ್ರೇಮದೊಳೆನಲಾ |
ಭೂಮಿಪ ದುಗುಡ ವಿ |
ರಾಮನಾದನೈ || ಲಾಲಿಸಿ || 211 ||

**ಜಂಗಲ್ - ಏಕ**
ಇಂತನುಜನ ವೃತ್ತಾಂತವರಿದು ಭೂ |
ಕಾಂತ ತನ್ನ ಮನದಿ ||
ಚಿಂತೆಯನುಳಿದಾನಂತರದಲಿ ಮಗು |
ಳಿಂತೆಂದನು ಮುದದಿ || 212 ||
ಹೊತ್ತು ಕಳೆಯದೀ ಕಾನನದೊಳು ಮುನಿ |
ಪೋತ್ತಮ ನೀ ದಯದಿ ||
ಉತ್ತಮ ಪುಣ್ಯ ಚರಿತ್ರವ ಶ್ರುತಗೊಳಿ |
ಸುತ್ತಲಿ ಸಂಭ್ರಮದಿ || 213 ||
ಫಲುಗುಣ ಬಹ ಪರಿಯಂತರ ನಮ್ಮನು |
ಬಲು ಮುದಗೊಳಿಸುತಲಿ ||
ನೆಲೆಗೊಳಿಸೈ ನಾ ಪೇಳಿದ ಬಿನ್ನಹ |
ಸಲಿಸತಿ ಕರುಣದಲಿ || 214 ||
ಇನಶಶಿಕುಲದೊಳು ಪುಟ್ಟಿದ ರಾಯರೊ |
ಳನಿತು ಕೋಟಲೆಯನ್ನು ||
ಅನುಭವಿಸಿದರಾರೈ ಮೊದಲೆನಲಾ |
ಮುನಿವರನರುಹಿದನು || 215 ||

**ವಾರ್ಧಕ**
ಕೀರ್ತಿಗುಣಶೀಲ ಧರ್ಮಜ  ಕೇಳು ನಳಚಕ್ರ |
ವರ್ತಿ ಮಹರಾಜ ರಾಜಾಧೀಶನಾಗಿ ಕೈ |
ವರ್ತಿಸಿದ ಸಾಮ್ರಾಜ್ಯಪದವಿಯನಾಳುತಿರೆ ಸತ್ಯದಿಂ ನೈಷಧದೊಳು ||
ಮತ್ತೆ ಶನಿಮಹಿಮೆಯೊಳು ಧೂರ್ತ ಪುಷ್ಕರನೊಡನೆ |
ಲತ್ತವನ್ನಾಡಿ ಸಕಲವ ಸೋತು ಸತಿಸಹಿತ |
ಲತ್ಯಧಿಕ ದುಗುಡದಿಂ ತೆರಳಿ ಕಾನನಕಾಗ ಉತ್ತಮದ ಜಲವ ನೋಡಿ || 216 ||
ವನಿತೆಯುಟ್ಟಿಹ ಸೀರೆ ಕೊನೆಯ ತಾನಳವಡುತ |
ವೊಣಗಿಸಲ್ ವಸನಮಂ ಗೃಧ್ರ ತಾ ಕೊಂಡೊಯ್ಯೆ |
ಜನಪ ವೈರಾಗ್ಯದೊಳ್ ನಡೆದ ನಿದ್ರೆಯೊಳಿರ್ಪ ಸತಿಯ ವಂಚಿಸಿ ಭರದೊಳು ||
ಮನ ಮಿಡುಕುತೈತರುವ ಜನಪಾಲನಂ ಕಂಡು |
ಕೊಣೆಯೆ ಕಾರ್ಕೋಟಕಂ ತನುವಿಕಾರಗಳಾಗಿ  |
ದಿನಪವಂಶಜನಾದ ಋತುಪರ್ಣನಾಲಯದಿ ಬಾಣಸಿಗನಾಗಿಯಿರಲು || 217 ||
ಮಡದಿ ಮೈಮುರಿದೆದ್ದು ಪುರುಷನಂ ಕಾಣದಿರೆ |
ಕಡುರೋದಿಸುತಿರಲಜಗರನೊಂದು ನುಂಗುತಿರೆ |
ಬಿಡದೆ ಲುಬ್ಧಕನದರ ಸೀಳುತಾಕೆಯ ಸೆರಗ ಪಿಡಿಯೆ ಶಾಪವನಿತ್ತಳು ||
ಧಡಿಗ ತಾ ಭಸ್ಮವಾಗಲು ವೈಶ್ಯಜತೆಯಿಂದ |
ನಡೆದು ಚೇದ್ಯೇಶನರಸಿಯ ಸೇವೆಯಿಂದಿರಲು |
ಪೊಡವಿಪಾಲಕ ಭೀಮ ಕೇಳ್ದು ಪುಡುಕಿಸಿ ಸುತೆಯ ಕರೆಸಿದಂ ತನ್ನ ಪುರಿಗೆ || 218 ||
ಕುಲಪುರೋಹಿತನಿಂದ ನಳನ ನೆಲೆಯಂ ತಿಳಿದು |
ನಿಲದೆ ಪುನರಪಿ ಸ್ವಯಂವರ ಗೈವೆ ತಾನೆಂದು |
ಚೆಲುವ ಋತುಪರ್ಣನಂ ಕರೆಸಿ ಯುಕ್ತಿಯೊಳಾಗ ಲಲನೆ ಕಾಂತನ ವರಿಸಲು ||
ಬಲು ಪರಾಕ್ರಮಿ ಮತ್ತೆ ಚಳಕದಿಂ ಪುಷ್ಕರನ |
ಮರುಜೂಜಿನಿಂ ಗೆಲ್ದು ಸಕಲ ಸಾಮ್ರಾಜ್ಯದಿಂ |
ದಿಳೆಯ ಪಾಲಿಸಿದ ಪೂರ್ವಕೆ ಹತ್ತು ಮಡಿಯಾಗಿ ಕಲಿ ಯುಧಿಷ್ಠಿರ ಲಾಲಿಸು || 219 ||

**ಭಾಮಿನಿ**
ಸುರನರೋರಗರಿಂದ ಕಪ್ಪವ |
ಹೊರಿಸುತಿಹ ಹರಿಶ್ಚಂದ್ರರಾಯನು |
ತರುಣಿ ಮಕ್ಕಳ ಮಾರಿ ಹೊಲೆಯನ ಗೃಹದಿ ಸೇವೆಯನು ||
ವಿರಚಿಸಿದನೈ ಸತ್ಯಕೋಸುಗ |
ಮರುಳೆ ನಿನ್ನಯ ಕಷ್ಟವಾವುದು |
ಅರಿಯಲೈ ನೀ ಕೇಳ್ದು ರಾಘವ ಪಟ್ಟ ಬವಣೆಯನು || 220 ||

**ಕಾಂಭೋಜ - ಝಂಪೆ**
ರೋಮಶನ ಕಥೆಗಳನು ಪ್ರೇಮದಿಂದಾಲಿಸುತ |
ಭೀಮ ಯಮಳರು ಸಹಿತಲಂದು ||
ಕಾಮಿನಿಯನೊಡಗೊಂಡು ಧೌಮ್ಯಾದಿ ಗಡಣದಲಿ |
ಭೂಮಿಪಾಲಕ ನಡೆದು ಬಂದು || 221 ||
ಧರಣಿಯೊಳಗಿಹ ಸಕಲ ತೀರ್ಥವನು ಮಿಂದು ಸಂ |
ಚರಿಸಿ ಬಹು ಮುನಿಗಳಾಶ್ರಮವ |
ಪರಿ ಪರಿ ಪ್ರಯಾಣದಲಿ ಮನವೊಲಿದು ಹತ್ತಿದರು |
ವರ ಗಂಧಮಾದನ ಗಿರಿಯ || 222 ||
ಅಲ್ಲಿ ಹನ್ನೆರಡಬುದವಾದುದೈ ವೃಷ್ಟಿ ತಾ |
ನಿಲ್ಲದೇನೆಂಬೆ ವ್ಯಥೆಗಳನು ||
ತಲ್ಲಣಿಸಿ ತಪಸಿಗಳು ಎಲ್ಲ ಮೃಗಪಕ್ಷಿಗಳು |
ಅಲ್ಲಲ್ಲಿ ಸೊರಗಿ ಮಲಗಿರಲು || 223 ||
ಕಡುಪುಣ್ಯಮೂರ್ತಿ ಧರ್ಮಜ ಪೋಗುತಡಿಯಿಡಲು |
ಒಡನೆ ಮುಸುಕಿತು ಮೇಘ ನಭದಿ ||
ಘುಡುಘುಡಿಸಿ ಮಿಂಚು ಬಿರುಗಾಳಿ ಸಿಡಿಲುಗಳಿಂದ |
ನಡುಗಿಸಿತು ಜಗವನಾರ್ಭಟಿಸಿ || 224 ||
ಕರಿಯ ಸುಂಡಿಲಗಾತ್ರ ಸುರಿಯೆ ಮಳೆಯದ್ಭುತದಿ |
ನೆರೆ ಮುಸುಕೆ ಕಾರುಗತ್ತಲೆಯು ||
ಮರಕಲ್ಲುಗಳು ಮಗುಚಿ ಧರಣಿಯದುರಲು ಶೈಲ |
ಜರಿಜರಿದು ಕೂಗನಿಕ್ಕಿದವು || 225 ||

**ವಾರ್ಧಕ**
ಎಲೆ ಪರೀಕ್ಷಿತಜಾತ ಲಾಲಿಸೀಪರಿಯಿಂದ |
ಜಲ ಕಂಟಕದಿ ಸಿಕ್ಕಿ ಹೊಲಬು ಕಾಣದೆ ಮನದಿ |
ಹಲುಬಿ ಕೈಕಾಲುಡುಗಿ ಬೆರೆತು ಮಲಗಿದರಂದು ಧರೆ ಪ್ರಪಂಚಗಳಿಲ್ಲದೆ ||
ನಿಲಲು ಸಕಲುತ್ಪಾತ ನಳಿನಸಖ ಮೈದೋರೆ |
ಬಲುಭಂಗದೊಳು ಬಿದ್ದ ಜನರೆಲ್ಲ ಚೇತರಿಸಿ |
ಒಲಿದೊಂದುಗೂಡಿ ಗಣನೆಯ ನೋಡೆ ದ್ರೌಪದಿಯ ಸುಳಿವು ಕಾಣಿಸದಾದುದು || 226 ||

**ಭಾಮಿನಿ**
ನರಿಯನೀಕ್ಷಿಸಿ ಬೆದರಿ ಓಡುವ |
ನರಗೆ ಹುಲಿಯಿದಿರಾದ ತೆರದಿಂ |
ಕರಗಿ ಮಿಡುಕುತ ಧೈರ್ಯಗೆಡೆ ಧೌಮ್ಯಾದಿ ಮುನಿವರರು ||
ಮರುತಸುತ ಸಹದೇವ ನಕುಲರು |
ಮರುಗುತಿರೆ ಹಾ ವಿಧಿಯೆ ಎನುತಲಿ |
ಕರದಗಲ್ಲದೊಳರಸ ಮಿಡುಕುತ್ತೊರೆದ ಶೋಕದಲಿ || 227 ||

**ತಿಲ್ಲಾನಿ - ರೂಪಕ**
ಎಲ್ಲಿ ಪೋದಳೂ | ಮಾನಿನಿ ರನ್ನೆ |
ಎಲ್ಲಿ ಬಿದ್ದಳೊ || ಪ ||
ಎಲ್ಲಿ ಪೋದಳಯ್ಯೋ ಕಾಯ |
ನಿಲ್ಲದು ಕಾಣದೆ ಸತಿಯ |
ಫುಲ್ಲಾಂಬಕಿಯ ನೋಡಿರಯ್ಯ |
ನಿಲ್ಲಬೇಡಿ ಮುಗಿವೆ ಕೈಯ || ಎಲ್ಲಿ ಪೋದಳೋ || 228 ||
ಮರೆತನೇ ಶ್ರೀಕೃಷ್ಣ ನಮ್ಮ |
ಬರೆವನೇ ಈ ತೆರದಿ ಬ್ರಹ್ಮ |
ಹರ ಹರಾ ಪ್ರಾಚೀನ ಕರ್ಮ |
ಸೆರಗ ಬಿಡದು ಸುಡು ಈ ಜನ್ಮ || ಎಲ್ಲಿ ಪೋದಳೋ || 229 ||

ನಾಗವೇಣಿ ಪೋದ ಕ್ಷಣಕೆ |
ಜೋಗಿಗಳಾದೆವು ಜಗಕೆ |
ಸಾಗಿತು ಕೌರವನ ಬಯಕೆ |
ಬೇಗ ಹುಡುಕಿ ತಡವಿನ್ಯಾಕೆ || ಎಲ್ಲಿ ಪೋದಳೋ || 230 ||

**ಶಂಕರಾಭರಣ - ಏಕ**
ವಸುಮತೀಶನೀ ಪರಿಯೊ |
ಳುಸಿರುತನುಜರನ್ನು ಕೂಡಿ |
ಋಷಿ ಸಮೂಹ ಸಹಿತ ಹುಡುಕೆ |
ಕುಸುಮಗಂಧಿಯ || 231 ||
ಕೊಣವು ಭಾವಿಯಗಳ ಜರಿಯ |
ಹಣಿಕಿ ಹಣಿಕಿ ನೋಡುತಾಗ |
ದಣಿವಿನಿಂದ ಕೂಗಿ ಕೂಗಿ |
ಒಣಗೆ ಕಂಠವು || 232 ||
ಬರುತ ಬರುತಲೊಂದು ಕಡೆಯೊಳ್ |
ಮರನ ಬೇರ್ಗಳಲ್ಲಿ ಸಿಕ್ಕಿ |
ಮರೆದು ತನುವ ಮೂರ್ಛೆಯಿಂದ |
ಸೊರಗಿ ಬಿದ್ದರೆ || 233 ||
ಶೀತವೇರಿ ಕೊರಡಿನಂತೆ |
ಚೇತನಗಳು ಶೂನ್ಯವಾದ |
ಪ್ರೀತೆಯನ್ನು ಕಂಡು ಮರುಗೆ |
ಭೂತಳೇಶನು || 234 ||

**ನೀಲಾಂಬರಿ – ರೂಪಕ**
ಹರ ಹರ ಎನ್ನ ರಮಣಿಗೆ |
ದೊರಕಿತೆ ಮರಣವು ಯಿಲ್ಲಿಗೇ |
ಅರಿಯದೆ ಬಂದೀಗಿರಿಗೆ |
ಗುರಿಗೈದೆನೆ ಬಲಿಗೆ || 235 ||
ಉಸಿರುಗಳಾಡದು ನಾಡಿಯು |
ಮಿಸುಕದು ದೇಹದ ಕಾಂತಿಯು |
ಮಸುಳಿತು ನಮಗಿನ್ನೀಕೆಯು |
ವಶವಾಗಳು ಭ್ರಮೆಯೂ || 236 ||
ಅರಿಯಳು ಸುಖ ಪಾಪಿಗಳಿಗೆ |
ಪರಿಣಯವಾದಾ ಮೇಲೆ |
ನರನಿದ ಕೇಳ್ವರೆ ಪ್ರಾಣವ |
ತೊರೆಯದೆ ಬಿಡ ನಾಳೆ || 237 ||
ಬಾವೆಯ ಗುಣವರ್ಣಿಸುವರೇ |
ಸಾವಿರ ವರುಷವು ಸಾಲದು ||
ಐವರ ಸಿರಿಯಡಗಿತೆ |
ನಿರ್ಜೀವನವಿನ್ನೆಮದ || 238 ||

**ಭಾಮಿನಿ**
ನೆಣದ ಕೊಬ್ಬಿಲಿ ರಾಜ್ಯಲಕ್ಷ್ಮಿಯ |
ಬಣಗು ಕೌರವನಿಂಗೆ ತೆತ್ತೆನು |
ಉಣಿಸಿದೆನು ಅನುಜರಿಗೆಯಡವಿಯ ಗೆಡ್ಡೆಗೆಣಸುಗಳ ||
ಧಣಿಸಿದೆನು ಬಹುವಿಧದಿ ಕಾಂತಾ |
ಮಣಿಯ ಕಳೆದೆನು ಸಾಕು ಯೆನ್ನಾಗಿ ಹರಣ ತನಗೆನೆ
ನುಡಿದ ರೋಮಶ ನೃಪನ ಸಂತೈಸಿ || 239 ||

**ಕಾಪಿ - ಅಷ್ಟ**
ಹೇ ಧರ್ಮರಾಯ ನೀನಿಂತ | ಕೆಟ್ಟ |
ರೋದನ ಮಾಳ್ಪರೆ ಬಿಡು ಬಿಡು ಭ್ರಾಂತ || ಹೇ || ಪ ||
ಹಾನಿಯಲ್ಲೀ ಪುಣ್ಯವತಿಗೆ | ನಿ |
ಧಾನ ತಿಳಿಯದ್ಯಾಕೆ ಒರಲುವೆ ಹೀಗೆ |
ದಾನವಾರಿಯ ಕೃಪೆ ನಿಮಗೆ | ಪರಿ |
ಪೂರ್ಣವಾಗಿಹುದು ನಂಬಿಕೊ ದೃಢದೊಳಗೆ || ಹೇ || 240 ||

ತರಣಿ ರಾತ್ರಿಯೊಳುದಿಸಿದರು | ಸಪ್ತ |
ಶರಧಿಗಳ್ ಬತ್ತಿ ಶೈಲಗಳೋಡಾಡಿದರು ||
ಹರಿ ನಿಮ್ಮ ಬಿಡನಯ್ಯ ಕೇಳು | ಹರಿ |
ಹರಿಸಲಿಲ್ಲವೆ ಹಿಂದೆ ಬಹು ಕಂಟಕಗಳು || ಹೇ || 241 ||
ಭೂಲಲಾಮಗೆ ಧೈರ್ಯ ನುಡಿದು | ಮುನಿ |
ಪಾಲ ರಕ್ಷೋಘ್ನ ಸೂಕ್ತದಿ ನೀರ ತಳಿದು ||
ಬಾಲೆಯ ಮೆಲ್ಲನೆಬ್ಬಿಸಲು | ಗುಣ |
ಶೀಲೆ ಕಣ್ದೆರೆದು ನಿಟ್ಟುಸಿರನ್ನ ಬಿಡಲು || ಹೇ || 242 ||
ಉರಕೊರಗಿಸಿಕೊಂಡು ತನುವ | ತಡ |
ವರಿಸಿ ದುಃಖಿಸುತಿರ್ಪ ಪತಿಗಳಾನನವ ||
ತರಳೆ ನಿಟ್ಟಿಸುತುಸಿರಿದಳು | ವಿಧಿ |
ಬರೆದುದನುಣಬೇಕು ಬಿಡಿ ದುಗುಡಗಳು || ಹೇ || 243 ||

**ಜಂಜೂಟಿ - ಏಕ**
ನಾರಿಯಾಡಿದ ಮಾತಿ | ದಹುದಹುದಯ್ಯ ||
ಮೀರಲರಿದು ಬ್ರಹ್ಮ | ಬರೆದಿಹ ಲಿಪಿಯ || ಪ ||
ಬಂದಡಚಿದ ಮೃತ್ಯು | ಹರಿದು ಹೋಯ್ತಿಂದು ||
ಮುಂದೆ ನಾವ್ ತೆರಳಲು | ಪಾಯವೇನೆಂದು || ನಾರಿ || 244 ||
ನಡುಗುತಿಹುದು ದೇಹ | ವುಡುಗಿ ಸತ್ವಗಳು ||
ಅಡಿಯಿಡೆ ತೀರದಿ | ನ್ನೊಡಲ ತಾಪಗಳು || ನಾರಿ || 245 ||
ಈ ತೆರದಲಿ ಪಾಂಡು | ಸುತರು ಯೋಚಿಸುತ |
ಮಾತನಾಡಲು ಮುನಿ | ವ್ರಾತವು ಸಹಿತ || ನಾರಿ || 246 ||
ಒರೆದಳು ದ್ರೌಪದಿ | ಯೆರೆಯರೊಳೊಂದು ||
ಸ್ಮರಿಸಬಾರದೆ ಘಟೋ | ತ್ಕಚನ ನೀವಿಂದು || ನಾರಿ || 247 ||

**ಭಾಮಿನಿ**
ಆಯತಾಂಬಕಿ ನುಡಿದ ವಚನವು |
ಪಾಯವಿದು ಸಮನೆನುತ ಶಶಿಕುಲ |
ರಾಯ ನೆನೆದನು ಮನದಿ ವಾಯುಕುಮಾರನಂದನನ ||
ದಾಯವನು ತಿಳಿದಾಗ ದೈತ್ಯನಿ |
ಕಾಯ ಸಹಿತಲಿ ದಿವಿಜ ವೈರಿ ವಿ |
ಡಾಯಿಯಲಿ ನಡೆತಪ್ಪ ಸೊಬಗನದೇನ ಬಣ್ಣಿಪೆನು || 248 ||

**ಕಾಂಭೋಜ - ಮಟ್ಟೆ**
ಬಂದನಾಗ ಖಳಶಿರೋಮಣಿ | ಆನಂದದಿ |
ಬಂದನಾಗ ಖಳ ಶಿರೋಮಣಿ || ಪ ||
ಬಂದನಾಗ ಮೂರುಕೋಟಿ |
ಮಂದಿ ಸಹಿತ ಬನವ ಬಿಟ್ಟು |
ಇಂದುಧರನ ಭಜನೆಯಿಂದ |
ತಂದೆಯಿದ್ದ ತಾವಿಗಾಗಿ || ಬಂದ || ಅ ||
ಜಟ್ಟ ಮುಕುಟ ಮೇಘಕಣೆಯಲು | ಬರುವ ಭರಕೆ |
ಸೃಷ್ಟಿ ತಗ್ಗಿ ಶರಧಿಯುಕ್ಕಲು ||
ಮುಟ್ಟಿ ತೋಳ ಗಾಳಿ ಸಕಲ |
ಬೆಟ್ಟ ಬೇರು ಕಳಚಿ ಬೀಳ |
ಲಟ್ಟಹಾಸಕಾಗ ಸುರರು |
ಬಿಟ್ಟುಹೋಗೆ ಪಟ್ಟಣವನು || ಬಂದ || 249 ||
ಕರಿಯ ಕಾಯವರುಣ ವಸ್ತ್ರವು | ಅಲೆಯಲ್ಲಿ |
ಸುರಿವ ಕಿಡಿಯು ಮುರಿದ ಮೀಸೆಯು ||
ಕರದಿ ಪಿಡಿದ ಭಾರಿ ಖಡುಗ |
ತ್ವರಿತದಿಂದ ಝಳಪಿಸುತ್ತ |
ಮರುತನನ್ನು ಹಿಂದಕಿರಿಸಿ |
ಬರಲು ಭುಜವನೊದರಿಸುತ್ತ || ಬಂದ || 250 ||
ಪರಮ ಸಹಸಿ ಬಂದು ದೃಷ್ಟಿಸಿ | ಧರ್ಮಸುತನ |
ಚರಣಕೆರಗಿ ಭೀಮಗೊಂದಿಸಿ ||
ಭರದಿ ಮಾದ್ರಿತನಯರಿಂಗೆ |
ಶಿರವ ಬಾಗಿ ದ್ರುಪದ ಸುತೆಗೆ |
ಕರವ ಮುಗಿದು ಭಕ್ತಿಯಿಂದ |
ಭರಿತಬಲನು ನುಡಿದನಿಂತು || 251 ||

**ಭೈರವಿ - ಏಕ**
ನೆನೆದ ಕಾರಣವೇನೆನ್ನ | ಅದ |
ವಿನಯದಿ ಸೂಚಿಸಿ ಮುನ್ನ ||
ಅನುಕರಿಸುತ ಬಲಗೂಡಿ | ನಿಮ್ಮ |
ತನಯನ ಸಾಹಸ ನೋಡಿ || 252 ||
ದೊರೆತನ ಸಾಮ್ರಾಜ್ಯವನ್ನು | ಬಿಟ್ಟು |
ತರುಣಿಸಹಿತಲಡವಿಯನು ||
ಚರಿಸುವ ಪರಿಗಳಿದೇನು | ಎನ |
ಗರುಹಬೇಕು ಹದನವನು || 253 ||
ಮೂರನೆ ಪಿತ ತಾನೆಲ್ಲಿ | ದಯ |
ದೋರಿ ತಿಳುಹಿ ಭರದಲ್ಲಿ ||
ಭೂರಿ ಭಯವ ಬಿಡಿರೆನಲು | ಪೇಳ್ದ |
ಭೂರಮಣನು ಕುವರನೊಳು || 254 ||

**ಸೌರಾಷ್ಟ್ರ - ತ್ರಿವುಡೆ**
ಕೇಳು ಬಾಲಕ ನಮ್ಮ ಕಥೆಗಳ |
ಪೇಳುವರೆ ಷಣ್ಮಾಸ ಸಾಲದು |
ಖೂಳ ಕೌರವನಿಂದಲೀ ವಿಧಿ | ಮೇಳವಿಸಿತು || 255 ||
ಕೃಪಣ ಶಕುನಿಯ ಕೂಡಿ ಮೋಸದಿ |
ಕಪಟದ್ಯೂತವನಾಡಿ ರಾಜ್ಯವ |
ನಪಹರಿಸಿ ನೂಕಿದನು ಕಾಡಿಗೆ | ನಿಪುಣ ಕೇಳು || 256 ||
ತರಣಿಯಿತ್ತಕ್ಷಯದ ಪಾತ್ರೆಯೊಳ್ |
ಧರಣಿಸುರರನು ತೃಪ್ತಿಪಡಿಸುತ |
ಲಿರುವ ಸಮಯದೊಳಾಯ್ತು ವ್ಯಾಸರ | ದರುಶನಗಳು || 257 ||
ಕರುಣಿಸಿದ ಮಂತ್ರೋಪದೇಶವ |
ತೆರಳಿ ಫಲುಗುಣನುಗ್ರತಪದೊಳು |
ಹರನ ಮೆಚ್ಚಿಸಿ ಮನದಭೀಷ್ಟವ | ಭರದಿ ಪಡೆದು || 258 ||
ಇಂದ್ರನಗರಕೆ ಪೋಗಿ ದೈತ್ಯರ |
ಕೊಂದು ಕ್ಷೇಮದೊಳಿರ್ಪ ವಾರ್ತೆಯ |
ತಂದರೀ ರೋಮಶರು ಮನಕಾ | ನಂದವಾಗಿ || 259 ||
ಬಂದೆವಿಲ್ಲಿಗೆ ನಿನ್ನೆ ಸರ್ವರು |
ನೊಂದೆವೈ ಬಹುವೃಷ್ಟಿ ಬಾಧೆಗೆ |
ಕಂದ ನಮ್ಮನ್ನಿಳುಹು ಪರ್ವತ | ದಿಂದ ಕೆಳಗೆ || 260 ||

**ಕಂದ**
ಕೇಳುತ ತಾತರ ಬವಣೆಯ |
ಭಾಳಾಕ್ಷನವೋಲ್ ಕಿಡಿಯುಗುಳಿ ರೋಷದೊಳವಂ ||
ಖೂಳರ ತೆಗವೆನೆನುತ ಖಳ |
ಮೌಳಿಯು ಗರ್ಜಿಸುತ ನುಡಿದ ಭೂಪಾಲನೊಳು || 261 ||

**ಶಂಕರಾಭರಣ - ಮಟ್ಟೆ**
ಹರ ಹರಿಷ್ಟು ಬವಣೆ ನಿಮ್ಮ ಚರಣಕೊದಗಿತೆ |
ನರಗುರಿಗೆ ರಾಜ್ಯವೆಲ್ಲ ಸೂರೆಹೋಯಿತೆ |
ಕರುಣಿಯೇಳು ರಾಜ್ಯವಾಳು ಪರಮಸುಖದೊಳು |
ಕುರುಡ ಪೆತ್ತ ಮಕ್ಕಳುರವ ಬಗಿದು ಕ್ಷಣದೊಳು || 262 ||
ಹದ್ದುಕಾಗೆಗುಣಿಸದಿರಲು ನಿಮ್ಮ ತನಯನೆ |
ಸುದ್ದಿ ಕೇಳಬಹುದು ನಾಳಿನೊಳಗೆ ಭೂಪನೆ ||
ಕದ್ದ ಕಳ್ಳರಂತೆ ಕಟ್ಟಿ ಶಕುನಿ ಕರ್ಣರ |
ಹೊದ್ದಿ ಪಾದದಡಿಯೊಳಿಡುವೆ ನೋಡು ಭೂವರ || 263 ||
ಹರಿ ಹರಾದಿ ಬ್ರಹ್ಮಸುರರ ಮೊರೆಯ ಹೊಕ್ಕರು |
ದುರಳರನ್ನು ವಧಿಸದಿರೆನು ದೇವ ತಿಳಿದಿರು ||
ಒರೆದ ಶಪಥ ನೋಡು ವೀಳ್ಯ ಕರುಣಿಸೆನುತಲಿ |
ಕರದಿ ಖಡ್ಗ ಝಳಪಿಸುತ್ತಲೇಳೆ ಭರದಲಿ || 264 ||
ಸುತನ ವಚನಕುಬ್ಬಿ ಭೀಮನಣ್ಣಗೆರಗುತ |
ಕ್ಷಿತಿಪ ಕಳುಹು ನಮ್ಮನೀಗ ತಡೆಯದೆನ್ನುತ ||
ಅತಿಬಲಾಢ್ಯ ಗದೆಯಗೊಳಲು ನೋಡಿ ಯಮಜನು |
ಖತಿಯಿದ್ಯಾಕೆ ನಿಲ್ಲುನಿಲ್ಲರೆನುತ ನುಡಿದನು || 265 ||

**ಜಹಜು - ಏಕ**
ಸೈರಿಸು ಭೀಮ ನೀ ಸುಮ್ಮನೆ | ಪಿತ್ತ |
ವೇರಿ ತಲೆಗೆ ಹುಚ್ಚನಾಗಿ ಕುಣಿಯಬೇಡ || ಸೈರಿಸು || ಪ ||
ಇತ್ತ ಬಾರೈ ಮುದ್ದು ಕಂದನೆ | ಯಾಕೆ |
ವ್ಯರ್ಥ ಕ್ರೋಧಗಳಿದು ಧೀರನೆ | ಮನ |
ದರ್ತಿಯೊಳಗೆ ಕೇಳೀ ಮಾತನೆ | ಕಡು |
ಧೂರ್ತತನವು ಬೇಡ |
ಸತ್ಯವು ಸ್ಥಿರ ನೋಡ || ಸೈರಿಸು || 266 ||
ಕದನದೊಳಗೆ ಭುಜಶೌರ್ಯವ | ತೋರ |
ಲವಧಿ ದಾಟಲಿ ಬಯಕೆ ತೀರ್ಚುವ | ಸುಖ |
ಪದವಿಯೊಳಿರಲನಕ ಕೌರವ || ಈಗ |
ಬದರಿಕಾಶ್ರಮಕೊಯ್ದು |
ಮುದದೊಳಿಳುಹು ನಮ್ಮ || ಸೈರಿಸು || 267 ||

**ವಾರ್ಧಕ**
ನರನಾಥನಪ್ಪಣೆಗೆ ಕರವ ಮುಗಿದಾಕ್ಷಣದಿ |
ಶಿರದೊಳಾ ಧರ್ಮಜನ ಕುಳ್ಳಿರಿಸಿಕೊಂಡಾಗ |
ಮರುತಸುತ ಮಾದ್ರಿಜರ ಪೆಗಲೊಳೇರಿಸಿ ದ್ರುಪದ ತರಳೆಯಂ ಕಟಿಯೊಳಿಟ್ಟು ||
ನೆರೆದ ಋಷಿವರ್ಗಮಂ ಧರಿಸಿ ನೀವೆನುತಾಗ |
ಹರುಷದಿಂ ತನ್ನ ಪರಿವಾರ ದೈತ್ಯರಿಗರುಹ |
ಲಿರದೆ ಬೆನ್ನಿನೊಳಾಂತು ನಡೆವುತಿರಲಿಟ್ಟಣಿಸಿ ಭರಿತಬಲರತಿ ಬೇಗದಿ || 268 ||

**ಭಾಮಿನಿ**
ಸೋಮವಂಶಾಧಿಪನೆ ಕೇಳಾ |
ರೋಮಶರು ಹೊರತಾಗಿ ಮಿಕ್ಕ ಸ |
ನಾಮರನು ಕೊಂಡೊಯ್ದು ಇಳುಹಲು ಬದರಿಕಾಶ್ರಮದಿ ||
ಭೀಮಸುತ ಜನಕನೊಳನುಜ್ಞೆಯ |
ಪ್ರೇಮದಿಂ ಕೈಗೊಂಡು ದಿತಿಜ |
ಸ್ತೋಮ ಸಹಿತಲೆ ಬಂದು ಹೊಕ್ಕನು ತನ್ನ ಮಂದಿರವ || 269 ||

**ಭೈರವಿ - ಝಂಪೆ**
ಅತ್ತ ಖಳ ತಾ ಗಮಿಸ | ಲಿತ್ತ ಪಾಂಡವರು ಮನ |
ದರ್ತಿಯಲಿ ಮಂಡಿಸುತ | ಲುತ್ತಮ ಸ್ಥಳದಿ || 270 ||
ಪರಿಕಿಸುತ ರೋಮಶರ | ಧರಣಿಪಾಲಕ ನಿಮ್ಮ |
ಚರಣಕತಿ ದಣುವಾಯ್ತು | ಪರಮ ಪಾವನನೆ || 271 ||
ಅಸುರದೇಹವು ನಮಗೆ | ಅಶುಚಿ ಮುಟ್ಟುವುದಕ್ಕೆ |
ಕುಶಲದಿಂ ಗಗನಪಥ | ವೆಸಗಿ ಬಂದಿಹೆವು || 272 ||

**ನಾದನಾಮಕ್ರಿಯೆ - ಅಷ್ಟ**
ಇಂತು ಮಾತಾಡುತ್ತ ಮುದದೊಳು | ಲಕ್ಷ್ಮೀ |
ಕಾಂತನ ನೆನೆವುತ್ತ ಮನದೊಳು ||
ಅಂತಕಾತ್ಮಜ ಸಕಲರ ಕೂಡಿ | ಪೊಕ್ಕಾ |
ನಂತ ಪುಣ್ಯಾಶ್ರಮಗಳ ನೋಡಿ || 273 ||
ಹಿಂಡು ಶಿಷ್ಯರು ಸಹ ತಪದೊಳು | ಮುನಿ |
ತಂಡವಿರಲು ಬಹು ಕಡೆಯೊಳು ||
ಕಂಡಖಿಳರ ಪಾದಪೂಜೆಯ | ಮಾಡಿ |
ದಂಡದಂತೆರಗೆ ಸಜ್ಜನಪ್ರಿಯ || 274 ||
ಹರುಷದೊಳಾ ಯುಧಿಷ್ಠಿರನನ್ನು | ಉಪ |
ಚರಿಸಿ ಯೋಗಿಗಳು ಮಿಕ್ಕವರನ್ನು ||
ಪರಿಪರಿಯಿಂದ ಸತ್ಕರಿಸಲು | ಅಲ್ಲಿ |
ಸ್ಥಿರಗೊಳಿಸಿದರೆಂಟು ದಿನಗಳು || 275 ||

**ಭಾಮಿನಿ**
ಪರಿಕಿಸಿದರಾ ವನವು ಶೋಭಿಪ |
ಸರಸಿ ತರುಲತೆ ಗಂಧ ಚಂದನ |
ಪರಿಪರಿಯ ಫಲ ಪುಷ್ಪ ಖಗ ಮೃಗ ಜಕ್ಕವಕ್ಕಿಗಳು ||
ಮೆರೆವ ತುಂಬಿಯು ಹಂಸ ಬಕ ತಿ |
ತ್ತಿರಿ ಶಶಾಧನ ಚಕ್ರವಾಕವು |
ಮೆರೆವುತಿರ್ಪುದು ಕೇಳು ನರನಾರಾಯಣಾಶ್ರಮದಿ || 276 ||

**ಕೇದಾರಗೌಳ - ಅಷ್ಟ**
ವಿಧುಕುಲಾಧಿಪ ಕೇಳೀ ಪರಿಯಿಂದಲಾ ವನ |
ಮುದದಿ ಸಂಚರಿಸುತಿರೆ ||
ಅದುಭುತವಾದ ಸುವಾಸನೆಯನು ತಂದು |
ಚದುರ ಮಾರುತನು ಬೀರೆ || 277 ||
ಪಸರಿಸಿತೇನೆಂಬೆ ಬಿಸಜದ ಪರಿಮಳ |
ದೆಸೆದೆಸೆಗಳ ಶೋಧಿಸಿ ||
ಎಸೆವ ತಂಗಾಳಿ ಚಂದ್ರನ ಕಾಂತಿ ಬೆಂಬಲ |
ವೆಸಗಲದಕೆ ಮೋಹಿಸಿ || 278 ||
ವರತಪಸಿಗಳೆಲ್ಲ ಬಿಟ್ಟು ಸಮಾಧಿಯ |
ಬೆರಗಾಗಿ ನಾಸಿಕವ ||
ಅರಳಿಸಿ ನೋಡುತ್ತ ಮರುಳುಗೊಂಡಾ ಸ್ಮರ |
ಶರಕೆ ತೆತ್ತರು ತನುವ || 279 ||
ಮೇಲೆ ಮೇಲಡರಿತು ನಳಿನದ ಕಂಪುಗಳ್ |
ಬಾಲೆ ದ್ರೌಪದಿಗೆ ಬಂದು ||
ಲೋಲ ಲೋಚನೆಯದ ಬಯಸಿ ಭ್ರಾಂತಿಗೆ ಮನ |
ಬೀಳುಗೊಟ್ಟಿಂತೆಂದಳು || 280 ||

**ಸಾರಂಗ - ಅಷ್ಟ**
ಏನ ಮಾಡಲಿ ಶಿವನೆ | ಈ ಮನಸು ನಿ |
ಧಾನವಾಗದು ಸುಮ್ಮನೆ ||
ಪ್ರಾಣ ಸರೋಜದಾ | ಧೀನವಾಯಿತು ಪವ |
ಮಾನಗೀ ಪರಿ ಹಗೆ | ಯೇನು ತನ್ನೊಡನಿಂದು || 281 ||
ರಮಣರೈವರು ಎನಗೆ | ಏನಾದರು |
ಸಮಯಕೊದಗರು ಹೀಗೆ ||
ಅಮರನಾಥನ ಸುತ | ಗರುಹಿ ಮನದೊಳಿರ್ಪ |
ಭ್ರಮೆಯ ಕಳೆವೆನೆನೆ | ಗಮಿಸಿಹನವನತ್ತ || 282 ||
ಧುರಧೀರರಾಗಿರುವ | ಯಮಳರಿಗೆ |
ಒರೆವೆನೆಂದರೆ ಕಾರ್ಯವ ||
ಅರೆತಿಲಾಂಶವು ಯಮಸುತನಾಜ್ಞೆ ಮೀರರು |
ವರಭೀಮಸೇನನ ಮನವೆಂತೊ ತಿಳಿಯೆ ನಾ || 283 ||

**ಭಾಮಿನಿ**
ಚಂದವಾಗಿಹ ಜಲಜ ಸೂಡುವ |
ಸುಂದರಾಂಗಿಯರೇಸು ಧನ್ಯರೊ |
ಮಂದಭಾಗ್ಯಳಿಗೆಂತು ದೊರಕುವುದೆಂದು ಚಿಂತಿಸುತ ||
ಇಂದುಮುಖಿಯುಣದುಡದೆ ಮಲಗಿದ |
ದ್ವಂದ್ವವನು ತಿಳಿದಾಗ ಭೀಮನು |
ಬಂದು ಗಲ್ಲವ ಪಿಡಿದು ಮಾತಾಡಿಸಿದ ಮುದ್ದಿಸುತ || 284 ||

**ಸುರುಟಿ - ಏಕ**
ಚಿಂತಿಸದಿರು ಜಾಣೆ | ಬಿಡು ನಿ | ನ್ನಂತರಂಗವೇನೆ ||
ಚಿಂತಿತಾರ್ಥವೇನುಸಿರದ ಸಲಿಸುವೆ |
ಕಾಂತಾಮಣಿ ಕೇಳ್ ಕಳವಳವ್ಯಾತಕೆ || 285 ||
ರಮಣಿ ನಿನ್ನ ಬಯಕೆ | ಸಲಿಸಲು | ಶ್ರಮವೇನಿಲ್ಲದಕೆ ||
ಕಮಲಗಂಧಿ ಕಾಮಿತ ಸಂಗ್ರಹವನು |
ನಿಮಿಷಮಾತ್ರದೊಳಗೊದಗಿಸುವೆನು ಪೇಳ್ || 286 ||
ವಲ್ಲಭ ಬಯಸಿದೆ ನಾ | ಸೋಲ್ಮುಡಿ | ಯಲ್ಲಿರಲೊಂದು ದಿನ ||
ಇಲ್ಲಿ ಕಾಣೆ ಸೌಗಂಧಿಕಸುಮ ಮ |
ತ್ತೆಲ್ಲಿಹುದೈ ನೀ ತಂದರೆ ನೋಡುವೆ || 287 ||

ಸೂರೆ ಹೋಯಿತೆನ್ನ | ಮನವಿದು | ವಾರಿಜದೊಳು ರನ್ನ ||
ಮಾರರೂಪ ಹೊಂತಕಾರಿಯೆ ನೀನಿದ |
ತೋರಿಸಿ ಪೊರೆಯೆನೆ ಮಾರುತಿ ನುಡಿದನು || 288 ||

**ಮುಖಾರಿ - ಏಕ**
ತರುಣಿ ಏನೆಂಬೆನಿದಕೆ ನಾನು || ಕಾಂಕ್ಷೆಯಿದೇನು |
ಮರುಳಾದೆ ಸುಮವ ಬಯಸಿ ನೀನು ||
ಸರಸಿಜಾಕ್ಷಿ ನೀನರುಹಿದೆ ಸುಮ್ಮನೆ |
ಹರಿಯದಂಥ ಘನಕಾರಿಯವೆನ್ನೊಳು || 289 ||
ನರಲೋಕದೊಳೆಲ್ಲಿಯು ಕಾಣೆ | ಸುಳ್ಳಲ್ಲ ಜಾಣೆ |
ದೊರಕದೀಗಿಲ್ಲಿ ಸುಪ್ರವೀಣೆ ||
ಹರಿಹರಬ್ರಹ್ಮಸುರೋರಗ ಲೋಕದೊ |
ಳಿರುವ ವಸ್ತುಗಳು ಬರುವವೆ ನಮಗೆ || 290 ||
ಮೂಕ ವಾಚಕ ಬಯಸಿದಂತೆ | ಯೋಚಿಪರೇನೆ |
ನೂಕದಿರುವ ಸಾಹಸವ ಕಾಂತೆ ||
ಸಾಕುಸಾಕಿದನು ಕೇಳಿದರಗ್ರಜ |
ಪೋಕನೆಂದು ಬಡಿದಟ್ಟುವನೆನ್ನನು || 291 ||

**ವಾರ್ಧಕ**
ಮಾರುತಿಯ ನುಡಿ ಕೇಳ್ದು ನಾರಿ ಜಗ್ಗನೆ ಜರುಗಿ |
ಸೋರುವಶ್ರುಗಳಿಂದ ದುಃಖಿಸುತ ನುಡಿದಳೆಲೆ |
ನೀರ ನಿನ್ನಯ ಚರಣ ಸೇರಿರ್ದ ಸತಿ ಪ್ರಾಣ ಸೂರೆಗೊಡಲಾಯ್ತು ಮನಸು ||
ತೀರಿತಿಲ್ಲಿಗೆ ನಿಮ್ಮ ಋಣವೆಂದು ಹೇಳುತಿಹ |
ನಾರಿಯನು ಪಿಡಿದು ತಳ್ಕಿಸುತೆಂದ ಬಿಡು ದುಗುಡ |
ಮೂರುಲೋಕದೊಳಿರಲಿ ತಹೆ ಸುಮವ ನೋಡೆಂದು ವೀರ ಗದೆಗೊಂಡೆದ್ದನು || 292 ||

**ದೇಶಿ - ಅಷ್ಟ**
ಬಂದ ಭೀಮನು ಮಂದಹಾಸಗಳಿಂದ |
ಲಿಂದುವದನೆಯ ಬಯಕೆ ಸಲಿಸುವೆ |
ನೆಂದು ಮನದೊಳಗುಬ್ಬುತ || 293 ||
ನಡುಗುತಿರ್ದುದು ಇಡುವ ಹೆಜ್ಜೆಗೆ ಭೂಮಿ |
ಕಡಲುವುಕ್ಕಿದುದೊಡನೆ ದಿಗ್ಗಜ |
ಕೊಡಹೆ ಮೌಳಿಯ ಭಾರಕೆ || 294 ||
ತೋಳಗಾಳಿಗೆ ಗಿರಿ ಮರ ಲತೆಗಳು |
ಬೀಳುತಿರ್ದುವು ಶಂಕೆಯಿಲ್ಲದೆ |
ಪೇಳಲೇನದ್ಭುತವನು || 295 ||
ಹರಿಯ ನಾದಕೆ ಖಗಮೃಗಾದಿಗಳೆಲ್ಲ |
ವಿರದೆ ಯೋಜನದಾಚೆಗೋಡುತ |
ಮರಳಿ ನೋಡಲು ಭಯದಲಿ || 296 ||

**ಭಾಮಿನಿ**
ಈ ತೆರದಿ ಬಹ ಭೀಮಸೇನನ |
ವಾತಸಂಭವ ಹನುಮನೀಕ್ಷಿಸಿ |
ಖ್ಯಾತನಿವನ್ಯಾರಕಟ ಮರ್ತ್ಯರೊಳಿಲ್ಲವೀ ರಭಸ ||
ಸೀತೆಯರಸನ ಲಕ್ಷ್ಮಣನ ರವಿ |
ಜಾತನುರಿಜನ ತಾರೆಯಣುಗಣ |
ಖ್ಯಾತಿಗಿಮ್ಮಿಗಿಲಾಯ್ತು ಪೂರ್ವದ ಯುಗವ ಮೀರಿಸಿತು || 297 ||

**ವಾರ್ಧಕ**
ದಾರಿಯಂ ಕಟ್ಟಿ ನೋಡುವೆನಿವನ ಸಾಹಸವ |
ನ್ಯಾರೆಂದು ತಿಳಿಯಬೇಕೆನುತ ವಟಮೂಲದೊಳ್ |
ಭೂರಿವಿಕ್ರಮ ಹನುಮ ಬಾಲಮಂ ಪಥಕಿಟ್ಟು ಕ್ಷೀಣಕಾಯದಿ ಕುಳ್ಳಿರೆ ||
ಆರೆಲವೊ ಕಪಿ ನಮಗೆ ಮಾರ್ಗಮಂ ಬಿಟ್ಟು ಕೆಲ |
ಸಾರೆಂದು ಧಿಕ್ಕರಿಸಲಾಗ ಕಡು ದೈನ್ಯಮಂ |
ತೋರಿಸುತಲಿಂತೆಂದನೆಲೆ ಪರಾಕ್ರಮಿ ಕೇಳು ತನ್ನವಸ್ಥೆಯನೆಂದನು || 298 ||

**ಬೇಗಡೆ - ಅಷ್ಟ**
ಕಡು ಸಾಹಸಿಯೆ ಕೇಳು ಬೆದರಿಸಬೇಡ |
ತಡೆಯಲಾಪೆನೆ ನಿನ್ನ ಭರವನ್ನು ಪ್ರೌಢ ||
ಉಡುಗಿ ಸತ್ತ್ವಗಳೆಲ್ಲ ಹಿಂಗಿಹೆ ನೋಡಾ |
ಪಡೆದ ಪ್ರಾರಬ್ಧವನುಣುತಿಹೆ ವಿಗಡ ||
ಅಡವಿಯೊಳಗಣ ಹಣ್ಣುಹಂಪಲೊ |
ಳೊಡಲ ಹೊರಕೊಂಡೀಗ ಜಲವನು |
ಕುಡಿವೆನೆಂದರೆ ಪಾಪಿ ಬಾಲವ |
ಹಿಡಿದು ಅಲುಗಿಸಲಾರೆ ಕರ್ಮವ || 299 ||
ಗಾರುಮಾಡಿತು ಮುಪ್ಪು ಬಂದೆನ್ನ ಕಾಯ |
ಏರುವುದಿದಕೆ ನೋಡದುಭುತ ಪ್ರಾಯ ||
ಮಾರಹರನು ಬಲ್ಲನೆನ್ನಯ ವ್ಯಥೆಯ |
ದಾರಿಕಾರರು ಬಹು ಶಪಿಸುವರಯ್ಯ ||
ಧೀರ ನೀನತಿಬಲನು ಒಂದುಪ |
ಕಾರ ಮಾಡೆನಗಾಗಿ ಪಥದಿಂ |
ಓರೆಗಿದ ನೀನಿಟ್ಟು ಪೋದರೆ |
ಮೂರುಜನ್ಮಾಂತರಕು ಮರೆಯೆನು || 300 ||

**ಮಿಶ್ರದೇಶಿ - ಏಕ**
ವೃದ್ಧನೆಂದ ನುಡಿಗೆ ಭೀಮ |
ಬದ್ಧವೆಂದು ನಂಬಿದ ||
ಶುದ್ಧ ಕಪಟವೆಂದು ತನ್ನ |
ಬುದ್ಧಿಯೊಳಗೆ ತಿಳಿಯದ || 301 ||
ಅಪರಿಮಿತ ಸಮರ್ಥನೆಂದು |
ಕಪಟ ವಾನರೇಂದ್ರನ ||
ಕಪಿಯು ಕ್ಷೀಣದೇಹನೆಂದು |
ಕೃಪೆಯೊಳನಿಲನಂದನ || 302 ||
ಎತ್ತಿ ಕೆಲದೊಳಿರಿಸಿ ಪಥವ |
ನುತ್ತರಿಸುವೆನೆಂದನು ||
ಚಿತ್ತ ಹಿಗ್ಗಿ ಭುಜವನೊದರಿ |
ಸುತ್ತ ಬದಿಗೆ ಬಂದನು || 303 ||
ಚರಣದಿಂದಲೊದೆಯೆ ನೋವು |
ಭರಿತವಾಗಿ ಹತ್ತಿತು ||
ಕರದಿ ಪಿಡಿಯೆ ಹಸ್ತವೊಡೆದು |
ರುಧಿರ ನೆಲಕೆ ಚಿಮ್ಮಿತು || 304 ||
ಕೊಸರಿ ಮದದೊಳೌಕಿ ಕಡೆಯೊ |
ಳುಸಿರು ತೆಗೆಯಲಾರದೆ ||
ಅಸಮ ಶೌರ್ಯ ಕಾಂತಿ ಜಾಲ |
ಮಸುಳಿ ಧೈರ್ಯಗಾಣದೆ || 305 ||
ತಿರುಹಿ ಮೀಸೆಗಳನು ತನ್ನ |
ಭರಿತ ಗದೆಯೊಳೆತ್ತಿದ ||
ಮುರಿಯಲಾಯ್ತು ಬುಡಕೆ ಸಿಕ್ಕಿ |
ಧರಣಿಗೀತನುರುಳಿದ || 306 ||

**ಭಾಮಿನಿ**
ಹರಹರಾ ತಾನ್ಯಾಕೆ ಜನಿಸಿದೆ |
ಧರೆಯೊಳಗೆ ಗಂಡಾಗಿ ಈ ಕಪಿ |
ಹರಿದ ರೋಮಕೆ ಕಡೆಯ ಮಾಡಿದುದೆನ್ನ ವಿಕ್ರಮವ ||
ಬರಿದೆ ಹೆತ್ತಳು ಕುಂತಿ ಪೃಥ್ವಿಯ |
ಹೊರೆಗೆ ತನ್ನನೆನುತ್ತ ಚಿಂತಾ |
ಶರಧಿಯಲಿ ಮುಳುಗುತ್ತ ತನ್ನಲಿ ತಾನೆ ಯೋಚಿಸಿದ || 307 ||
ಮರುಳುಗೊಂಡೆನು ನೋಡೆ ಕೋತಿಯ |
ಪರಿಗಳಲ್ಲಿದು ಹರಿಯೊ ಬ್ರಹ್ಮನೊ |
ಸುರಪತಿಯ ಮಾಯಕವೊ ಮುಖ್ಯಪ್ರಾಣಮೂರುತಿಯೊ ||
ಸರಸವಲ್ಲಿವನೊಡನೆ ವಿಘ್ನಾ |
ಚರಣೆ ತಪ್ಪಿಸಬೇಕೆನುತ ನಿಜ |
ಕರವ ಮುಗಿದಿಂತೆಂದ ಮಾರುತಿಗೆರಗಿ ದೈನ್ಯದಲಿ || 308 ||

**ಸುರುಟಿ - ಏಕ**
ಭಳಿರೆ ಭಾಪು ವೀರ | ನಿನ್ನಯ |
ನೆಲೆಗಳ ನುಡಿ ಧೀರ ||
ಕುಲದಲಿ ನೋಡೆ ಕುರೂಪಿ ವಿಚಾರ |
ಕಲಿಕಂಠೀರವ ಕಪಟಾಕಾರ || 309 ||
ಮೂಢತನದಿ ನಾನು | ನಿನ್ನೊಳು |
ಮಾಡಿದೆ ಗರ್ವವನು ||
ಬೇಡಿಕೊಂಬೆ ಕರುಣದಿ ಸಲಹಿನ್ನು |
ನೋಡದೆ ಎನ್ನಪರಾಧಗಳನ್ನು || 310 ||
ಬೆದರಿಸುತಿದೆ ಬಾಲ | ನಿನ್ನೊಳ |
ಗಿದೆ ಮಹೇಂದ್ರಜಾಲ ||
ಮದನಹರನೊ ಬ್ರಹ್ಮನೊ ಗುಣಶೀಲ |
ಕದನದರ್ಪ ಹನುಮಂತನೊ ಪೇಳಾ || 311 ||
ಭೀತಿಯೊಳಗೆ ಕಾಯ | ನಡುಗುತ |
ಧಾತುಗೆಟ್ಟಿತು ಜೀಯ ||
ಪ್ರೀತಿ ಕಾರ್ಯಕೆ ತೆರಳುವೆನಯ್ಯ |
ಯಾತಕೆ ಮಾಯಕ ಶರಣನ ಕಯ್ಯ || 312 ||

**ಕಾಂಭೋಜ - ಏಕ**
ಭೀಮಸೇನನೆಂದ ನುಡಿಗೆ | ಮೆಚ್ಚಿ ತನ್ನ ಮನದಿ ||
ಕಾಮರೂಪದವನು ನಗುತ | ಕರೆದು ಪೇಳ್ದ ಮುದದಿ || ಪ ||
ಯಾರು ನಿನ್ನ ಪೆಸರೇನಯ್ಯಾ | ಯಾತಕಿಲ್ಲಿ ಬಂದೆ ||
ನಾರಿ ಬಯಸಿದರ್ಥವ್ಯಾವುದು | ಪೋಪೆಯೆಲ್ಲಿ ಮುಂದೆ || 313 ||
ವೀರ ನಿನ್ನ ಪೆತ್ತ ತಾಯಿ | ತಂದೆ ಯಾರೆಂದರುಹು ||
ಊರುಮನೆಗಳೆಲ್ಲಿ ಪೇಳು | ನಗರಿಗ್ಯಾವ ಪೆಸರು || 314 ||
ವಾಯುಪುತ್ರ ನಾನು ಕೇಳೈ | ಭೀಮನೆಂಬಭಿದಾನ ||
ತಾಯಿ ಕುಂತೀದೇವಿ ತಾನ | ಗ್ರಜನು ಧನಂಜಯನ || 315 ||
ರಾಯ ಪಾಂಡುಜಾತರೈವರ್ | ಗಜಪುರೇಶರೆಮ್ಮ |
ಜಾಯೆ ಸೌಗಂಧಿಕವ  ಬಯಸಲ್ | ತರಲು ಪೋಪ ನೇಮ || 316 ||

**ಕಂದ ಪದ್ಯ**
ಅನಿಲಜನೀ ವಾಕ್ಯವನಾಲಿಸುತ್ತ |
ಮನದೊಳು ವಿಸ್ಮಿತನಾಗುತಲತಿ ಚಿಂತಿಸುತ್ತಂ ||
ಅನುಮಾನಗಳಾಗಿದೆ ಪರಿಕಿಸಬೇಕೆನುತುಂ |
ಘನ ಘರ್ಜಿಸಿ ಭೀಮನೊಳರುಹಿದ ಕೋಪದೊಳಂ|| 317 ||

**ಮಧ್ಯಮಾವತಿ - ಅಷ್ಟ**
ಯೇನನುಸುರಿದೆಯೋ |  ಮಾನವನೆ ನೀ |
ನೇನನುಸುರಿದೆಯೋ ||
ಯೇನನುಸುರಿದೆ | ಹೀನಮಾನವ |
ನೀನು ಮಗನೇ ಯೆನ್ನ ಪಿತಗೇ || ಪ ||
ಯೀರೇಳು ಜಗದಾ ಪ್ರಾಣಿಗಳಾ | ಧಾರ ಮೂರುತಿಯಾತ ಕೇಳಾ |
ಮೂರು ಗೇಣಿಲ್ಲ ಕುರೂಪಿ ನೀನವಗೆ ಕು |
ಮಾರನೆಂತಾದೆಯಯ್ಯ ||
ಶಿರಕೆ ಪಿತ್ಥ | ವೇರಿ ಮಾತಾಡುವೆಯಾ |
ನೀರ್ಜಿವ ನೀ | ನ್ಯಾರೆಂಬ ಹೋಲುವೆಯ |
ನೋಡಿಕೊಂಡೆಯ || 318 ||
ಪಥವನ್ನು ಬಿಡಿಸಿಕೊಳ್ಳುವರೇ | ಯೆನಗೆ |
ಹಿತವಾದ ಸಟೆಯ ಪೇಳುವರೇ ||
ಸುತನಾಗಬೇಕು ಪಾಂಡುವಿಗೆಂದು ಪೇಳಿದೆ |
ಪಿತ ವಾಯುವೆಂಬುದೇನೊ | ನಿಶ್ಚಯಗಳ |
ಜತನದಿಂದುಸುರೊ ನೀನೂ | ಯೆಂದೆನುತಲಿಯತಿಗರ್ಜನೆಯ ಗೈದನು |
ವಾತಜ ತಾನೂ  || 319 ||

**ವಾರ್ಧಕ**
ಹನುಮನಬ್ಬರಕೆ ಮನ ನಡುಗಿ ಭೀಮನು ಪೇಳ್ದ |
ಗುಣಶಿರೋಮಣಿ ಕೇಳುಯಿನಿತು ಕ್ರೋಧಗಳ್ಯಾಕೆ |
ಮುನಿಪ ದುರ್ವಾಸ ಪೂರ್ವದೊಳೈದು ಮಂತ್ರಮಂ ಕರುಣಿಸಿದ ಕುಂತಿಗಂದೂ ||
ಜನಪ ಪಾಂಡುವಿಗೆ ಋಷಿಶಾಪ ಬಂದಡಚಲಾ |
ವನಿತೆ ಕಾಲನ ಭಜಿಸಿ ಧರ್ಮಜನ ಪಡೆದು ಮ |
ತ್ತನಿಲಮಂತ್ರದೊಳೆನ್ನ ಬೆಸನಾಗಿಯಿಂದ್ರನಂ ನೆನೆದು ಪೆತ್ತಳು ಪಾರ್ಥನ || 320 ||

**ಭಾಮಿನಿ**
ಉಳಿದ ಮಂತ್ರಗಳೆರಡು ರಾಯನ |
ಸವತಿಯಾಗಿಹ ಮಾದ್ರಿಗೀಯಲು |
ಲಲನೆ ಪಡೆದಳು ನಕುಲ ಸಹದೇವರನು ಜೋಡಿನಲಿ ||
ನೆಲೆಗಳಿದು ಶ್ರೀರಾಮನಾಣೆಯು|
ಸುಳಿಯದೆನ್ನಲಿ ಕಪಟವೆನಲಾ |
ಕಲಿಮರುತ್ಸುತ ಮೆಚ್ಚಿತಳ್ಕಿಸುತಾಗಳುಸುರಿದನು || 321 ||

**ನವರೋಜು - ಏಕ**
ಮೆಚ್ಚಿದೆ ಭೀಮನೆ ನಿನಗೆ | ಯೀಗ |
ನಿಶ್ಚಯವಾದುದುಯೆನಗೆ ||
ಹುಚ್ಚುತನದಿ ಬಹು ಸಂಶಯ ಬಾಧಿಸಿ|
ಬೆಚ್ಚಿಸಿ ಕೇಳ್ದೆನು ನೆಚ್ಚದೆ ಭಟನೇ || ಪ ||
ಹಿಂದಣ ಜನ್ಮ ಸಫಲವಾ | ರಘು |
ನಂದನನ ದಯಾರಸವಾ||
ಚಂದದಿ ದೊರಕಿತು |
ತಮ್ಮನ ಭೇಟಿಗಳಿಂದಿನ ದಿನವೆ ಶುಭದಿನವಯ್ಯ || ಮೆಚ್ಚಿದೆ || 322 ||
ತಿಳಿಯದೆ ಸಂಬಂಧವನೂ | ಬಹು |
ಬಳಲಿಕೆಯಾನೆಸಗಿದೆನು ||
ಚೆಲುವನೆ ನೀ ಮನದೊಳಗಿಡದಿರುಯೆನುತಲಿ |
ಕಲಿಹನುಮನು ಬಿಗಿದಪ್ಪಿದ ಭೀಮನ || 323 ||
ಚರಣಸೇವಕನನ್ನು | ಉಪ |
ಚರಿಸಲ್ಯಾತಕೆ ನೀನೂ ||
ಯಿರುವನಗ್ರಜನೊಬ್ಬರೀರ್ವರಾದಿರಿಯೀಗ |
ಭರಿತಪುಣ್ಯಕೆ ಸರಿಯಿರದೆನಗಿನ್ನು || 324 ||
ಕಿರಿಯನೆನ್ನುವ ಪ್ರೇಮ | ನಿನ |
ಗಿರಲು ಕೇಳ್ ನಿಸ್ಸೀಮಾ ||
ಶರಧಿಯ ದಾಂಟಿದ ಘನತರ ರೂಪನು |
ಕರುಣಿಸಲೀಕ್ಷಿಪೆ ಪರಮ ಸಾಹಸನೇ || 325 ||

**ನಾದನಾಮಕ್ರಿಯೆ - ಅಷ್ಟ**
ಕುಂತಿಯಾತ್ಮಜನೆಂದ ಮಾತಿಗೆ | ಹನು |
ಮಂತ ತೋಷದೊಳೆಂದನಾತಗೆ || ಪ ||
ಮರುಳಾದೆಯೇನಯ್ಯ ತಮ್ಮನೇ | ಹಿಮ |
ಕರಕುಲೋದ್ಭವ ಗುಣಶೀಲನೇ ||
ಸ್ಮರಿಸಲಾರದೆ ಕಾಯ ಸುಮ್ಮನೇ | ನೀನು |
ಮೊರೆದು ಕೆಡಿಸಲುಂಟೆ ಧೀರನೆ || 326 ||
ಆ ಯುಗಕ್ಕದು ಸಮವಾದರೂ | ಕೇಳು |
ಈ ಯುಗದಲಿ ನೋಡತೀರದೂ ||
ಗೋಯನಾತಗೆ ಭೀತಿ ತೋರ್ದುದು | ರಘು|
ರಾಯನ ಕೃಪೆ ಹ್ಯಾಗೆ ಯಿರ್ದುದೂ || 327 ||
ಬೇಡಿಕೊಂಬೆನು ಅಣ್ಣದೇವನೆ | ದಯ |
ಗೂಡಿಯುದ್ಧರಿಸೆನ್ನ ಜೀಯನೆ ||
ಮಾಡಲಾಗದು ಕ್ರೋಧ ಧೀರನೆ | ಯೆಂದು |
ಕೂಡೆ ಗೈದನು ಬಹುವಂದನೆ || 328 ||
ನಡುಗಿ ಕಂಗೆಡಬೇಡ ಧೈರ್ಯವಾ | ಯೀಗ ಬಾಯ್ |
ಬಿಡದಿರು ನೋಡೆನ್ನ ಕಾಯವಾ ||
ಬಿಡದಿರು ರಘುರಾಮ ನಾಮವಾ | ಯೆಂದು |
ವೊಡನೆ ತೋರ್ದನು ಘೋರ ರೂಪವಾ|| 329 ||

**ವಾರ್ಧಕ**
ಬೆಳೆದ ರಾಘವದೂತನೇನೆಂಬೆನದ್ಭುತವ |
ಪೊಳೆಯೆ ಪಾತಾಳದೊಳು ಚರಣಾಬ್ಜ ಘನ ಕಟಿಗೆ |
ಯಿಳೆಯೆರಕವಾಗಲ್ಕೆ ನಕ್ಷತ್ರಮಂಡಲಂ ಗಳಕೆ ಪೂಮಾಲೆಯಾಗೆ ||
ಚೆಲುವ ಹಿಮಕರಮುಖಿಗೆ ಸಮನಾಗೆ ಮಸ್ತಕಂ |
ನಳಿನಸಖ ಮುಟ್ಟುವಿಸಲಾಗ ಮಣಿ ಮುಕುಟ ತಾ|
ನಿಲದೆ ಧ್ರುವಮಂಡಲಕ್ಕೈಣೆಯೆ ಘನ ಬಾಹುಗಳ್ ಬೆದರಿಸುತ ತ್ರೈಲೋಕ್ಯವ || 330 ||

**ಭಾಮಿನಿ**
ಪರಿಕಿಸುತ ಕಲಿಭೀಮ ಬೆಚ್ಚದೆ |
ಯೆರಗಿ ಬಹುಸ್ತುತಿಗೈದು ನುಡಿದನು |
ಅರರೆಯೀಘನಮಹಿಮೆಯಿಲ್ಲದೆ ಹರಸುರಾಧ್ಯರನು ||
ಮರುಗಿಸಿದ ರಾವಣನ ದರ್ಪವ |
ಮುರಿದು ಲಂಕೆಯ ಸುಡುವರುಂಟೇ |
ಕರುಣನಿಧಿ ಸಾಕೆನಲು ಮುನ್ನಿನ ರೂಪ ಕೈಗೊಂಡ || 331 ||

**ಮಧ್ಯಮಾವತಿ - ಅಷ್ಟ**
ಧೀರನಹುದಹುದೊ | ಮೆಚ್ಚಿದೆ ಭೀಮ |
ಧೀರನಹುದಹುದೊ || ಪ ||
ಧೀರನಹುದು ನಿನ್ನ ಧೈರ್ಯಕ್ಕೆ ಸಮನಾದ |
ವೀರರಿಲ್ಲವು ಯುಗವೆರಡರೊಳಗೆ ಹಿಂದೆ || ಧೀರ || ಅ ||
ಎನ್ನ ಸಂಶಯ ಹರಿದು | ಪೋದುದು ವಾಯು |
ಚಿಣ್ಣನಾಗಲಹುದು ||
ಕಣ್ಣ ಮುಚ್ಚದೆ  ತನು ನಡುಗದೆ ಬೆದರದೆ |
ಉನ್ನತ ಕಲಿಯಾಗಿ ಯೆನ್ನ ನೋಡಿದ ಮೇಲೆ || ಧೀರ || 332 ||
ಸ್ಥಾಣು ವಿರಿಂಚಿಗಳು | ಎನ್ನಯ ರೂಪ |
ಕಾಣುತ್ತಲೋಡುವರು ||
ಜಾಣ ನಿನ್ನಲಿ ಮನ ಸೂರೆಹೋದುದು ವರ |
ವೇನು ಬೇಕಾದುದ ಬೇಡು ನಾ ಕೊಡುವೆನು || ಧೀರ || 333 ||
ಇಂದಿಗೆ ಧನ್ಯ ನಾನು | ಆದರೆ ಲಾಲಿ |
ಸೊಂದು ಬಿನ್ನಹವನು ||
ಮುಂದೆ ಭಾರತಯುದ್ಧವಾಗುತ್ತಲಿದೆ ಜೀಯ  |
ಬಂದು ಮಂಡಿಸಬೇಕಾ ನರನ ರಥಾಗ್ರದಿ || ಧೀರ || 334 ||
ಒರೆದ ಭಾಷೆಗೆ ನಾನಿನ್ನು | ತಪ್ಪುವುದುಂಟೆ |
ಸ್ಮರಿಸಿದಾಕ್ಷಣ ಬಹೆನು || ತೆರಳೆನುತಲಿ ನಿಜಕರದಿ ಮೈದಡಹಲು |
ಭರಿತಬಲನು ಶಿರವೆರಗಿ ನಡೆದ ಮುಂದೆ || ಧೀರ || 335 ||

**ಭೈರವಿ - ಏಕ**
ಅಗ್ರಜನೊಳಪ್ಪಣೆಯ | ಕೊಂ |
ಡುಗ್ರದಿ ಬರೆ ಪಾಂಡುತನಯ ||
ಆಘ್ರಾಣಿಪ ವಾಸನೆಯ | ಬಕ |
ನಿಗ್ರಹನುತ್ತರ ದೆಸೆಯ || 336 ||
ಅರಸುತ ಸೌಗಂಧಿಕವ | ಬಂದ |
ಭರದಲಿ ನೋಡುತ ದಿವವ ||
ಇರೆ ಸತ್ಯಾವತಿಯಲ್ಲಿ | ಸರ |
ಸೀರುಹ ಕಂಡ ಕೊಳದಲಿ || 337 ||
ಈವಿಯೊಳೊಳಪೋಗುತಿರಲು | ಅಲ್ಲಿ |
ಕಾವಲಿರುವ ಚರರುಗಳು ||
ಯಾವವನಿವ ನೋಡೆನುತ | ನಿ |
ರ್ಜೀವಿಯ ಬಿಗಿ ಹೊಯ್ಯೆನುತ || 338 ||
ಕಡುಗ ಕಠಾರಿಗಳಿಂದ | ಮುತ್ತಿ |
ಕಡಿಯಲು ಘನಮದದಿಂದ ||
ಕಿಡಿಕಿಡಿಯಾಗುತ ಭೀಮ | ಹೊಯ್ದು |
ಕೆಡಹಿದ ರಣ ನಿಸ್ಸೀಮ || 339 ||
ಕೂಡಲೇ ಯಕ್ಷರು ಕಂಡು | ಕೈ |
ಮಾಡಲಕ್ಷೌಹಿಣಿ ದಂಡು ||
ಗಾಢವಿಕ್ರಮಿ ಕೊಲುತಿರಲು | ಮಾ |
ತಾಡಿತು ಘನಗರ್ವದೊಳು ||  340 ||

**ಘರಜು - ಏಕ**
ನೋಡ್ ನೋಡ್ ಕೈಮಾಡ್ತಾನಿವನಾ |
ದೂಡ್ ದೂಡ್ ಏನಾಗಲಿ ||
ಬೇಡ್ ಬೇಡೆಂದರೆ ನೂಕ್ತಾನ್ಬಂದು |
ಗಾಡ್ ಗಾಡೊಣ್ಣೆಯರು ಕೂಡಲಿ || 341 ||
ಹುಜೂರ್ ಸಾಮ್ಯರ್ಹುಡುಗ್ಯಾರ್ಮುಡಿವುದ |
ಹಾಜರೈದೆವೆ ಬಾಗ್ಲಿಲಿ ||
ವುಜೂರ್ಮಾಡದೆ ನೂಕ್ತಾನ್ ಬಂದು |
ಬಾಜಾರ್ಕಳೆದೆವು ಬೀದಿಲಿ || 342 ||
ಗುದ್ದೇ ತಿರುಹುತ ಗುಮ್ತಾನೆಂಬ್ತಾನ್ |
ಬುದ್ಧಿಯಿಲ್ಲವನಾಗಲಿ ||
ಮುದ್ದಾವೆರ್ಹುಡುಗ ಏಟಾನರಿಯದೆ |
ಕದ್ದೋನೆಂಬ್ತಾನೆ ನೋಡಲ್ಲಿ || 343 ||
ನಮ್ತಾವಾ ಕೈಲಾಗದ ಮಂದಿಗೆ |
ದಮ್ತಗಲಿಸಿ ತಾ ಹೋಗಲಿ ||
ನಿಮ್ತಾವ್ ಸೆಣಸಲು ಬಂದ್ನೋವೊಳ್ತಾ |
ಗುಮ್ತಾನ್ ತಾನೇನಾಗಲಿ || 344 ||

**ಭಾಮಿನಿ**
ಪುಂಡುತನದಲಿ ಗಣಿಸದವರನು |
ಪುಂಡರೀಕವ ಮುರಿವ ಭೀಮನ |
ಕಂಡು ಹಿಡಿದಾರ್ಭಟಿಸಿ ಹಿಡಿ ಕಡಿ ಕೊಲ್ಲು ತಿವಿಯೆನುತ ||
ಖಂಡಪರಶು ಸಮಾನನಲಿ ಕೋ |
ದಂಡಶರಯುತರಾಗಿ ಯಕ್ಷರ |
ದಂಡು ಮುಸುಕಿತು ಮತ್ತೆ ಮೂದಲಿಸುತ್ತಲೆಣ್ದೆಸೆಗೆ || 345 ||

**ಕೇದಾರಗೌಳ - ಅಷ್ಟ**
ಕೆಟ್ಟ ಚೋರನೆ ನೀನಿಂದೆಲ್ಲಿಗೆ ಒಯ್ವೆಯೊ |
ದಿಟ್ಟತನದಿ ಸುಮವ ||
ಮೆಟ್ಟಿ ನಿನ್ನೆದೆಯೊಳು ತೆಗೆವೆವು ರಕುತವ |
ಮುಟ್ಟದಿರೆಲೊ ಕೊಳವ || 346 ||
ಪೆಗಲೊಳಗಿಟ್ಟಿಹ ಗುದಿಗೆಯ ಬಿಂಕಕೆ |
ಬೆದರುವರಲ್ಲ ನಾವು ||
ವಿಗಡ ನಿನ್ನಯ ಮದಗೊಬ್ಬಿನ ರೋಗಕೆ |
ತೆಗೆವೆವೀಗೌಷಧವು || 347 ||
ಎನುತಲೀಪರಿಯಿಂದ ನುಡಿಯುತವರು ಹೊಯ್ದ |
ರನಿಲಕುಮಾರನನು ||
ಕನಲುತ್ತ ಭೀಮನು ಗದೆಯ ಕೊಂಡಾಕ್ಷಣ |
ಸವರಿದನಖಿಳರನು || 348 ||

**ಭಾಮಿನಿ**
ಗದೆಯ ಹೊಯಿಲ್ಗೆ ಸಕಲ ಸೈನಿಕ |
ವೊದರಿಕೊಂಡುರುಳಿದವು ನೆಣವಸೆ |
ರುಧಿರ ಮಾಂಸವ ಬೆಳಸು ಬೆಳೆದುದು ಧನಪನುಪವನದಿ ||
ಕದನವತಿ ಬಿರುಸೆಣದು ಉಳಿದಿಹ |
ರದುಭುತದ ಭೀತಿಯಲಿ ಬಂದಾ |
ಚದುರವೈಶ್ರವಣಂಗೆ ಬಿನ್ನವಿಸಿದರು ಶಿರವೆರಗಿ || 349 ||

**ದಿವಾಳಿ - ಏಕ**
ದಿನ್ನೋಮ್ತೆವು ತೆಕ್ಕೊಳ್ಳೀ ಸಲ್ಲಾಮು | ಪುರಹರಪ್ರೇಮ |
ದಿನ್ನೋಮ್ತೆವು ತೆಕ್ಕೊಳ್ಳೀ ಸಲ್ಲಾಮು || ಪ ||
ಯಾವನೊ ನರನೋರ್ವ | ದೇವ ನಮ್ಮುಪವನವ ||
ಠೀವಿಯಿಂದೊಳಪೊಕ್ಕನು | ಸೊಕ್ಕಿನೊಳವನು || ಧಿನ್ನೋ || 350 ||
ಗಾಢನದರ ಕಂಡು | ಕೂಡೆ ಯಕ್ಷರ ದಂಡು ||
ಮಾಡೆ ಯುದ್ಧವನವನೊಳು | ಕರುಣಾಳು ಕೇಳು || ಧಿನ್ನೋ || 351 ||
ಗುದಿಗೆಯ ತಿರುಹುತ್ತ | ಸದೆದನೆಲ್ಲರ ಖ್ಯಾತ ||
ಕದಡಿ ತಟಾಕಗಳ | ನಿರ್ಭಯದಿ ಖೂಳ || ಧಿನ್ನೋ || 352 ||

ಮೆರೆವ ಸೌಗಂಧಿಕವನು | ಮುರಿದು ಕಟ್ಟುತಲಿಹನು ||
ಒರೆಯುವುದೇನು ನಾವಿನ್ನು | ಕೇಳು ಭಿನ್ನಪವನ್ನು || ಧಿನ್ನೇ || 353 ||

**ಸೌರಾಷ್ಟ್ರ - ತ್ರಿವುಡೆ**

ದೂರ ಹೇಳಿದ ಚರರ ಮನ್ನಿಸಿ |
ಧೀರ ಧನಪತಿಯೊರೆದ ಮಂತ್ರಿಗೆ |
ಯಾರು ಬಂದವರೆಮ್ಮ ಘನ ಶೃಂ | ಗಾರವನಕೆ || 354 ||
ಮೂರುಲೋಕದ ಜನರು ಮುಟ್ಟರು |
ಭೂರಿಬಲನವನೇಸು ಗರ್ವದಿ |
ಗಾರುಗೆಡಿಸಿದ ಪರಿಯ ತಿಳಿದಾ | ಸಾರಗಳನು || 355 ||
ಅರುಹಬೇಕೀ ಕ್ಷಣದಿ ನಮಗೆನೆ |
ಕರವ ಮುಗಿದಾ ಸಚಿವ ಸೈನ್ಯವ |
ನೆರಹಿ ಪೊರಟೈತಂದ ಮಾರುತಿ | ಯಿರುವ ವನಕೆ || 356 ||
ಕರಿಯವೋಲ್ ಕದಡುತ ತಟಾಕವ |
ಮುರಿಮುರಿದು ಪದುಮಗಳ ಕಟ್ಟುವ |
ಭರಿತಬಲನನು ನೋಡಿ ಕೋಪದೊ | ಳೊರೆದನಾಗ || 357 ||

**ಶಂಕರಾಭರಣ - ಮಟ್ಟೆ**

ಎಲವೊ ಕಳ್ಳತನದಿ ಬಂದು ಕೊಳನ ಕಲಕಿದೆ |
ನಳಿನ ಕೈಗೆ ಸಿಕ್ಕಿತೆಂದು ಬಲದೊಳುಬ್ಬಿದೆ ||
ತಲೆಗೆ ಸಂಚಕಾರವೆಂದು ತಿಳಿಯದಾದೆಯ |
ಕಲಹವನ್ನು ಬಯಸಿ ಕೊಬ್ಬಿ ಮಲೆತು ಬಂದೆಯ || 358 ||
ಬಿಟ್ಟು ಸುಮವನಿಲ್ಲಿ ಬಂದ ಗುಟ್ಟನುಳಿಸಿಕೋ |
ಕೆಟ್ಟ ಚೋರವಿದ್ಯವನ್ನು ಬಿಟ್ಟು ಬಾಳಿಕೋ ||
ಇಟ್ಟು ಹೋಗಬಾರದೆಂಬ ಛಲಗಳಿದ್ದರೆ |
ಭೃಷ್ಟ ತಿರುಗಿ ನಿಲ್ಲು ಧುರಕೆ ಧಿಟ್ಟನಾದರೆ || 359 ||
ತೋಯಜವನು ಮುರಿಯುವಾ ವತ್ಸಾಯವಿರಲಿಕೆ |
ದಾಯವಾದಿಯಲ್ಲ ನಮ್ಮ ರಾಯವರ್ಗಕೆ ||
ನೋಯದೊಯ್ವೆನೆಂಬ ಎದೆಸಹಾಯ ಸತ್ತ್ವವೊ |
ತಾಯ ಬಸುರ ಪೊಕ್ಕರುಳಿವುಪಾಯವಿಲ್ಲವೊ || 360 ||

**ನಾದನಾಮಕ್ರಿಯೆ - ಅಷ್ಟ**

ಬಂದ ಮಂತ್ರಿಯ ಮಾತ ಕೇಳಿದ | ವಾಯು |
ನಂದನ ರೌದ್ರವ ತಾಳಿದ ||
ನಿಂದು ಗದೆಯ ತೂಗುತಿದಿರಲ್ಲಿ | ಕರೆ |
ದೆಂದ ನೋಡುತ ಸಿಂಹರವದಲ್ಲಿ || 361 ||
ಕಳ್ಳ ನಾನಲ್ಲವೊ ರಣಹೇಡಿ | ವೈರಿ |
ದಲ್ಲಣ ಭೀಮ ಕಾಣೆಲೊ ಖೋಡಿ ||
ನಿಲ್ಲದೆ ನಡೆ ನಿನ್ನ ಠಾವಿಗೆ | ಜೀವ |
ಗಳ್ಳ ನಿನ್ನೊಡೆಯನಿಟ್ಟಲ್ಲಿಗೆ || 362 ||
ನಿಪುಣನಹುದು ಮಾತಿನೊಳು ಭಲಾ | ಇಂಥಾ |
ಕೃಪಣ ವಿದ್ಯವು ನಿನಗೇಕೆಲಾ ||
ತಪನಜನಿರುವ ನಗರವನು | ಈಗ |
ಶಪಥದಿ ತೋರ್ಪೆ ನೋಡ್ ಬಗೆಯನು || 363 ||
ಅಡವಿಯ ಕುಸುಮವನೊಯ್ಯಲು | ನಿನ್ನ |
ಕಡು ಪಾರುಪತ್ಯವೇನಿದರೊಳು ||
ಪಿಡಿಯಿದಕೀವೆನು ಕ್ರಯವೆಂದು | ಹೊಯ್ದು |
ಕೆಡಹೆ ಮೂರ್ಛೆಗೆ ಸಂದನವನಂದು || 364 ||

**ಭಾಮಿನಿ**

ಖೂಳ ನಿನ್ನೊಡನೇನು ಕದನಕೆ |
ಹೇಳು ಧೊರೆಯನೆನುತ್ತ ನೂಕಲು |
ಬೀಳುಗೊಳ್ಳುತ ರುಧಿರವನು ಕಾರುತ್ತ ಹೊರವಂಟ ||
ಆಳಿದನ ಬಳಿಗೈದಿ ನಮಿಸುತ ||
ಹೇಳಿದನು ಕಲಿಭೀಮಸೇನನ |
ಕಾಳಗದಿ ನುಗ್ಗಾದ ಭವಣೆಯ ತಾಳಿ ದುಗುಡವನು || 365 ||

**ಸಾರಂಗ - ಅಷ್ಟ**
ಧನಧೀಶ ಲಾಲಿಸಯ್ಯ | ಭಿನ್ನಪವನ್ನು |
ಮನುಮಥರೂಪ ಜೀಯ ||
ಮನದಿ ಸ್ಮರಿಸಲರಿದವನುಪಟಳವನ್ನು |
ವನವ ನಿರ್ಧೂಮವೆಸಗಿ ಕೊಂದ ಬಲವನ್ನು || 366 ||
ನೋಡಿ ಸೈರಿಸಲಾರದೆ | ಯುದ್ಧಗಳನ್ನು |
ಮಾಡಿದೆವೆದೆಗೆಡದೆ ||
ಖೋಡಿ ಹೋಗೆನುತಲಪ್ಪಳಿಸಿದನೆನ್ನನು |
ಕೂಡೆ ಕಮಲವೆಲ್ಲ ಕಿತ್ತುಕೊಂಡೊಯ್ದನು || 367 ||
ಕರಿಪುರಾಧೀಶರಂತೆ | ಎರಡನೆಯವ |
ವರಭೀಮಸೇನನಂತೆ ||
ಉರುಪುಂಡುತನವನುಕರಿಸಿದಾತನು ಎನೆ |
ಭರಿತ ಕೋಪದೊಳಾಗಲೊರೆದ ಸಚಿವನೊಳು || 368 ||

**ಬೇಗಡೆ - ಆದಿ**
ದೂರ ಹೇಳುವುದ್ಯಾಕೆ ನಮಗಿನ್ನು | ನೀ ಕಂಡಮೇಲುಪ |
ಚಾರ ಪೂಜೆಯ ಮಾಡದವನನ್ನು ||
ವೀರ ಮದಗಜ | ಮಾರುತಿಯ ಸುಮ |
ಚೋರನೆಂದು ಪ | ಚಾರಿಸಿದರದ |
ಸೈರಿಸಿದೆ ನ | ಮ್ಮೂರ ಸೂರೆಗೆ |
ಬಾರದೊಂದುಪ | ಕಾರ ಮಾಡಿದ || ದೂರ || ಪ ||
ಸೋಮಕುಲಸಂಭೂತ ನೃಪತಿ ಲ |
ಲಾಮ ಧರ್ಮಜನು | ಘನ ಸಂ |
ಗ್ರಾಮ ನಿಪುಣೋಲ್ಲಾಸ ನಿರುಪಮ |
ಭೀಮನೆಂಬವನು | ಪರಹಿತ |
ಕಾಮನಮರಸಹಾಯ ವರಸು |
ತ್ರಾಮ ನಂದನನು || ಸಂತತ |
ಭೂಮಿಪಾಲ ಶಿ | ರೋಮಣಿಗಳಾ |
ತಾಮರಸವನು | ಕಾಮಿಸಲು ಸು |
ಪ್ರೇಮದಿಂ ಕೊಡ | ದಾ ಮಹಾತ್ಮರ |
ಹೇಮಿಸಲು ಪರಿ | ಣಾಮಿಸುವರೆ || ದೂರ || 369 ||
ಬಂದವನ ಗುಣ ಭೇದ ನಯ ಭಯ |
ದಿಂದ ತಿಳಿಯದೆ | ನಮಗ್ಯಾ |
ಕೆಂದು ತೋರಿದ ವಿದ್ಯಮಾನವ |
ಬಂದು ಪೇಳದೆ | ಪೌರುಷ |
ದಿಂದ ಸೆಣಸುತ ನೀನು ನಮ್ಮಯ |
ಮಂದಿ ಕೊಲ್ಲಿಸಿದೆ || ನಿನಗೇ |
ನೆಂದು ಹೇಳಲಿ | ಮಂದಮತಿ ಕೇಳ್ |
ಮುಂದುವರಿದವ | ನಲ್ಲಿ ಬದುಕಿದು |
ಯೆಂದು ನಮ್ಮಯ | ಪುಣ್ಯ ದೂರನು |
ತಂದೆಯಾ ಬಹು | ಚಂದವಾಯಿತು || ದೂರ || 370 ||
ನಿಲ್ಲಿರೈ ಸಾಕೆಂದು ಯಕ್ಷರ |
ನಲ್ಲಿ ಸಂತೈಸಿ | ಭೂಮಿಯೊ |
ಳಿಲ್ಲದಿರುವ ಸುವಸ್ತು ಒಡವೆಯ |
ನೆಲ್ಲ ಸಂಗ್ರಹಿಸಿ | ಪಾಂಡವ |
ರಲ್ಲಿಗೈದಲುಬೇಕೆನುತ ಮನ |
ದಲ್ಲಿ ನಿಶ್ಚೈಸಿ | ಲಕ್ಷ್ಮೀ | ವಲ್ಲಭನ ಹಿತ |
ವುಳ್ಳವರು ಜಗ | ದಲ್ಲಿ ಧನ್ಯರು |
ಬಲ್ಲಿದಪ್ರತಿ | ಮಲ್ಲ ಪಾಂಡವ | ರೆಲ್ಲರೊಳಗಿದ |
ಬಲ್ಲರೇ ನ | ಮ್ಮಲ್ಲಿ ಮೂಢರು || ದೂರ || 371 ||

**ಭಾಮಿನಿ**
ಕಾಣಿಕೆಯ ತಂದಿತ್ತು ತಾನೇ |
ಕಾಣಬೇಕೆಂಬುತ್ಸಹದೊಳಾ |
ವಾಣಿಯರಸನ ಮೊಮ್ಮ ಪಯಣವ ಮಾಡುತಿರಲಿತ್ತ ||
ಕಾಣಿಸಿತು ದುಃಸ್ವಪ್ನ ನಿಶಿಯೊಳು |
ಕ್ಷೋಣಿಪತಿ ಧರ್ಮಜ ಸುದರ್ಶನ |
ಪಾಣಿಯನು ನೆನೆನೆನೆದು ಕೇಳಿದ ವಿಪ್ರರನು ಕರೆಸಿ || 372 ||

**ಮಧ್ಯಮಾವತಿ - ಏಕ**
ಘನಮಹಿಮರೆ ಕೇಳಿ ನಿಶಿಯಲಿ ನಾನು |
ಕನಸ ಕಂಡೆನುವೊಂದು ಪೇಳಿ ಫಲವನು ||
ಅನುಜಾತ ಭೀಮ ತಾನದ್ಭುತ ಕಪಿಯ |
ಕೆಣಕಿ ಸೋತನು ಮತ್ತೆ ಪಡೆದ ಸಹಾಯ || 373 ||
ಅನಿಮಿಷಕುಲಜರ ಕದನದಿ ಗೆಲಿದು |
ವನಜ ಪುಷ್ಪವನು ತಂದೆನಗಿತ್ತ ಮಣಿದು ||
ಧನುಜನೊಬ್ಬನು ಮಾದ್ರಿತನಯರ ಕೆಡೆದು |
ವನಿತೆ ದ್ರೌಪದಿಯನ್ನು ಕರವಿಡಿದೆಳೆದು || 374 ||
ಮರುಗಿಸುತಿರೆ ವಾತಸಂಭವನವನ |
ಹರಣಗೊಂಡನು ಪೇಳೀ ಸ್ವಪ್ನದ ಹದನ ||
ತ್ವರಿತದೊಳೆನೆ ಕೇಳಿ ಗುಣಿಸಿ ನೋಡುತಲಿ |
ಧರಣಿಸುಪರ್ವರು ನುಡಿದರಾತನಲಿ || 375 ||

**ಮಧುಮಾಧವಿ - ಅಷ್ಟ**
ಶುಭಾಶುಭಕೆ ಸರಿಯಾಗಿದೆ | ಘನ |
ವಿಭವಾಸ್ಪದ ಬಹ ಕದನ ಮೊದಲಿಗಿದು || ಶುಭಾ || ಪ ||
ಜೀವದೊಳಗೆ ಭಯವಾಗದು | ಅಲ್ಪ |
ನೋವಿದು ಸುಮ್ಮನೆ ಹೋಗದು ||
ಐವರೊಳ್ ಮತ್ತೇನಾಯಾಸವೊ | ದುಷ್ಟ |
ಜೀವಿಗಳಿಂದಪ್ಪುದೇನ್ ಮೋಸವೊ || ಶುಭಾ || 376 ||
ಅನುಜರಿಗೆಚ್ಚರ ಪೇಳ್ವುದು | ಮತ್ತೆ |
ದನುಜವೈರಿ ಬಲಗೊಂಬುದು ||
ಮನಸಿನೊಳಗೆ ದಿಟ ತೋರದು | ಕಷ್ಟ |
ನಿನಗಿದು ಸುಖವೆಂದು ಹೇಳಬಾರದು || ಶುಭಾ || 377 ||
ದುರುಳರೆಲ್ಲರ ಗುರು ಭೀಮನು | ಸುಮ್ಮ |
ನಿರುವನಲ್ಲವನೊಬ್ಬ | ತಮ್ಮನು ||
ತರಿಸಿಕೊ ಪಾರ್ಥನ ಸುದ್ದಿಯ | ಇದ್ದ |
ವರಿಗೆಲ್ಲ ಹೇಳು ಚೆನ್ನಾಗಿ ಬುದ್ಧಿಯ || ಶುಭಾ || 378 ||

**ಸಾಂಗತ್ಯ - ರೂಪಕ**
ಭೂಸುರರೆಂದ ಮಾತನು ಕೇಳಿ ಮನದಿ ಶ್ರೀ |
ವಾಸುದೇವನೆ ಗತಿಯೆನುತ ||
ಬೇಸರೆಚ್ಚರಿಸಲು ಕರೆದು ತಮ್ಮಂದಿರ |
ವಾಸವಾತ್ಮಜ ಹೊರತಾಗಿ || 379 ||
ಇಲ್ಲದಿರಲು ಭೀಮನೆಲ್ಲಿಗೈದಿದನೆಂದು |
ಎಲ್ಲರ ಬೆಸಗೊಂಡು ಮತ್ತೆ ||
ವಲ್ಲಭೆಯನು ಕೋಪದಿಂದ ಗರ್ಜಿಸಿ ಕೇಳೆ |
ತಲ್ಲಣಿಸುತಲೆಂದಳ್ ಭಯದಿ || 380 ||
ಮೆರೆವ ಸೌಗಂಧಿಕಕುಸುಮವ ತಹೆನೆಂದು |
ತೆರಳಿರ್ಪ ಪೂರ್ವಿರ್ದ ಬಳಿಗೆ ||
ಬರಲಿಲ್ಲವೆಂಬುದ ಕೇಳಿ ಧರ್ಮಜ ತಾನೆ |
ಪೊರಟ ಚಿಂತಿಸಿ ನೋಡಲವನ || 381 ||

**ಆರ್ಯಸವಾಯ್ - ಏಕ**
ದಾರಿಯ ನೋಡುತ ಧರ್ಮಜ ಬಹು ಪರಿ |
ವಾರ ಸಹಿತ ಬರುತಿರಲಾಗಿ ||
ಮಾರುತಿ ಬಂದಿದಿರಾದನು ಸುಮನಸ |
ವಾರಿಜ ಸಹಿತಲೆ ತಾನಾಗಿ || 382 ||

**ನೀಲಾಂಬರಿ - ಏಕ**
ಬಂದೆಯ ಮರುತಜನೆ | ಸೌಗಂಧಿಕ ಸುಮವ |
ತಂದೆಯ ಸಹಸಿಗನೆ ||
ಒಂದೇ ಮನದಿ ಸತಿಯ | ಕಾಂಕ್ಷೆಯನೀಗ |
ಚಂದದಿ ಸಲಿಸಿದೆಯ || 383 ||

ಪಿರಿಯನೆಂದೆನುತ ನಾನು | ಇರುವುದ್ಯಾಕೆ |
ಒರೆಯದ್ಯೈದಿದಮೇಲಿನ್ನು ||
ತರಳಬುದ್ಧಿಯನು ಹೀಗೆ | ಮಾಳ್ಪರೆ ಎನ ||
ಲೆರಗಿ ಪೇಳಿದನಣ್ಣಗೆ || 384 ||

**ಯರಕಲಕಾಂಭೋಜ - ಅಷ್ಟ**
ಲಾಲಿಸಿ ಕೇಳಣ್ಣದೇವ ನೀ ದಯದಿ |
ಬಾಲಕ ನಾ ಪೇಳ್ವ ಬಿನ್ನಹ ಮುದದಿ || ಲಾಲಿ || ಪ ||
ಭೂಲಲಾಮನೆ ನಿನ್ನ ಕರುಣಕವಚವೆನ್ನ |
ಮೇಲಿರುತಿರೆ ಪದಿನಾಲ್ಕುಲೋಕದೊಳಿಪ್ಪ |
ಖೂಳರ ಲಕ್ಷ್ಯವೇನು || ಕೆಣಕಿ ಎನ್ನ |
ಬಾಳುವ ಭಟನಾವನು | ಆದರೆ ನಿನ್ನೊಳ್ |
ಪೇಳಿ ಪೋಗದ ತಪ್ಪ ಪಾಲಿಸೊಂದದನು || ಲಾಲಿ || 385 ||
ನಾರಿ ದ್ರೌಪದಿಯೊಂದು ಪದುಮ ಬಯಸಿ ಕಣ್ಣ |
ನೀರ ಸುರಿಸಲರೆಕ್ಷಣಕೆ ಬರುವೆನೆಂದು |
ಘೋರನೆ ತೆರಳಿದೆನು || ಮಾರ್ಗದಿ ಕಂಡೆ |
ಶ್ರೀರಾಮದೂತನನು | ಲಂಕೆಗೆ ತಾನು |
ಹಾರಿದ ರೂಪ ತೋರಿದ ದಯಾಕರನು || ಲಾಲಿ || 386 ||
ಅದುಭುತ ಕಾಯವ ಕಂಡು ಧೈರ್ಯದಲಿ ಬೆ |
ಚ್ಚದೆ ನಾನಿರಲು ಕಾಣುತಲೆ ತಮ್ಮನಹುದೆಂದು |
ಮುದದಿ ಸತ್ಕರಿಸಿದನು || ಬೇಕಾದುದ |
ವೊದಗಿನೋಳ್ ಬೇಡೆಂದನು | ಪಾರ್ಥನ ರಥ |
ತುದಿಯೊಳ್ ಮಂಡಿಸುವಂತೆ ವರವ ಪಡೆದೆನು | ಲಾಲಿ || 387 ||
ಎರಗಿ ಮಹಾತ್ಮನೊಳಪ್ಪಣೆಯನು ಕೊಂಡು |
ತೆರಳಿ ಕುಬೇರನ ವನವನ್ನು ಪೊಗುತಿರೆ |
ಚರರು ತಡೆಯೆ ಕೊಂದೆನು || ಗರ್ವದಿ ಮಂತ್ರಿ |
ಧುರಕೆ ತಾನಿದಿರಾದನು |ಹೊಯ್ದವನನು |
ಸರಸಿಜ ಕಿತ್ತುಕೊಂಡೈದಿದೆ ನಾನು || ಲಾಲಿ || 388 ||

**ಭಾಮಿನಿ**
ಏನ ಹೇಳಲಿ ಮೂರ್ಖತೆಗಳನು |
ನೀನು ಎಸಗುವ ರಾಜಕಾರ್ಯದಿ |
ದಾನವಾರಿಯ ಕೃಪೆಯೊಳೆನ್ನಯ ಮಾನಪ್ರಾಣಗಳು ||
ಹಾನಿಯಲ್ಲದೆ ಉಳಿಯಬೇಕೆಂ |
ದಾ ನರೇಶ್ವರ ನುಡಿವ ಸಮಯಕೆ |
ಸೇನೆಸಹಿತೈತಂದು ಕಂಡನು ಧನಪ ಧರ್ಮಜನ || 389||

**ದ್ವಿಪದಿ**
ಬಂದ ಧನಪತಿಯ ಕರೆತಂದು ಯಮಸೂನು |
ಚಂದದಲಿ ಸತ್ಕರಿಸುತೆರಗಿ ಪೇಳಿದನು || 390 ||
ಏನು ಧನ್ಯರೊ ನಾವು ತವ ಚರಣಭೇಟಿ |
ತಾನಾಗಿ ದೊರಕಿದುದು ನಮಗ್ಯಾರು ಸಾಟಿ || 391 ||
ಪರಮಪಾವನವಾಯ್ತು ಶಶಿವಂಶ ಮುದದಿ |
ನರಮನುಜರಾವು ಈ ಪರಿಪೂರ್ಣ ದಯದಿ || 392 ||
ಚಿತ್ತವಿಸಿ ಬಂದ ಹದನೇನೊ ನಾನರಿಯೆ |
ಬಿತ್ತರಿಸಬೇಕು ಕರುಣದಲಿ ಗುಣಮಣಿಯೆ || 393 ||
ಇಂತು ಧರ್ಮಜ ನುಡಿಯೆ ಕೇಳಿ ವೈಶ್ರವಣ |
ಸಂತಸದಿ ಪೇಳಿದನು ಬಿಗಿಯಪ್ಪುತವನ || 394 ||

**ಪುನ್ನಾಗವರಾಳಿ - ಏಕ**
ಭಾಪು ಭಳಿರೆ ಗುಣಶೀಲ ಪರಾಕ್ರಮಿ |
ಭೂಪ ಧರ್ಮರಾಯ |
ಪಾಪರಹಿತ ಸತ್ಯ ಧರ್ಮನಿಷ್ಠ ಜಗ |
ದ್ವ್ಯಾಪಕ ಹರಿಪ್ರಿಯ |
ತಾಪಸಜನ ಪರಿತೋಷಿತ ಮನುಮಥ |
ರೂಪನೆ ಶಶಿಕುಲದೀಪ ದಯಾಪರ | | ಭಾಪು || 395 ||

ಚೆಲುವ ನಹುಷ ಹರಿಶ್ಚಂದ್ರ ಪುರೂರವ |
ನಳ ಭರತಾದಿಗಳು |
ಇಳೆಯನಾಳ್ದರತಿ ಸತ್ಯವಂತರೆಂ |
ದೆನಿಸಿ ಬಹಳ ನೃಪರು |
ಕಲಿತೆಯ ನುಡಿಯಲ್ಲಿದು ತವ ಪುಣ್ಯವ |
ಲಲಿತಕೀರ್ತಿಗೆ ಸರಿಗೂಡರಾ ದೊರೆಗಳು || ಛಾಪು || 396 ||
ಯಾರಿಗಿಹುದು ನಿನ್ನನುಜರ ವಿಕ್ರಮ |
ಭೂರಿಶೂರರು ಜಗದಿ |
ಮಾರಹರನ ಶ್ರೀರಾಮನ ಪೋಲುವ |
ವೀರರಯ್ಯ ಬಲದಿ |
ವಾರಿಜಕೋಸುಗ ಹೋರಿದರಂತೆ ವಿ |
ಕಾರಿಗಳೆಮ್ಮವರೀ ಮಾರುತಿಯೊಳು || ಛಾಪು || 397 ||

**ವಾರ್ಧಕ**
ಹರಿಭಕ್ತರೊಳವ ಕಿರುಕುಳರು ಬಲ್ಲರೆ ಭೂಪ |
ಸರಸಿಜವ ಕೊಳ್ಳೆಂದು ಚರರ ಮುಖದೊಳಗಿಡಿಸಿ |
ಪರಿಪರಿಯ ವಸ್ತುವಾಯುಧವ ನಾಲ್ವರಿಗಿತ್ತು ಹರುಷದಿಂ ಮನ್ನಿಸುತಲಿ ||
ತೆರಳೆ ದ್ರುವ್ಯಾಧಿಪಂ ನಿಜನಗರಿಗಿತ್ತ ಸಿರಿ |
ವರನ ಕರುಣದಿ ಪಾಂಡುಸುತರಿರ್ದರತಿ ಸುಖದಿ |
ವರ ನೀತಿಶಾಸ್ತ್ರ ಪೌರಾಣ ಕಥನಗಳಿಂದ ತರುಣಿ ದ್ರೌಪದಿ ಸಹಿತಲಿ || 398 ||

**ಕಾಂಭೋಜ - ಝಂಪೆ**
ಪೃಥ್ವಿಪತಿ ಸಕಲರನು ಕುಶಲದಿಂದೊಡಗೊಂಡು |
ಮತ್ತೆ ಬರೆ ಗಂಧಮಾದನಕೆ ||
ಉತ್ತಮನೆ ನೀನಿದರನೇರಿದರೆ ಮೊದಲಿಂದ |
ಹತ್ತುಮಡಿ ಕಷ್ಟ ದೊರಕುವುದು || 399 ||
ಎಂದು ಈ ಪರಿ ಗಗನವೊದರುತಿರೆ ಕೇಳಿ ಯಮ |
ನಂದನನು ಬೆದರಿ ಪಿಂತಿರುಗಿ ||
ಬಂದು ಬದರಿಯ ಬಳಿಯೊಳಂದವಾಗಿಹ ಸ್ಥಳದಿ |
ಮಂದಿರವ ರಚಿಸಿ ಪರ್ಣದಲಿ || 400 ||
ಏಳುದಿನವಿರಲಲ್ಲಿ ಭೂಲಲಾಮಗೆ ವನದ |
ಕೇಳಿಗಾಯಿತು ಮನವು ಮುದದಿ ||
ಲೋಲಲೋಚನೆಯ ಪರಿಪಾಲನೆಗೆ ಯಮಳರನು |
ಮೇಳವಿಸಿ ಭೀಮ ಸಹ ಭರದಿ || 401 ||
ಶರ ಚಾಪವನು ಕೊಂಡು ತೆರಳಿ ಘೋರಡವಿಯೊಳ |
ಗಿರುವ ಪುಲಿ ಕರಡಿ ಸಿಂಹಗಳ ||
ಒರಗಿಸುತ ಶಾರ್ದೂಲ ಕರಡಿ ಕಾಡ್ಕೋಣಾದಿ |
ಹರಿಣ ಮೃಗಗಳಿಗೆ ಬಾಣಗಳ || 402 ||
ನಡೆದರೀಪರಿ ಯೋಜನಾಂತರಕ್ಕಿತ್ತ ಮುನಿ |
ಗಡಣ ಸಹಿತಿರಲು ಮಾದ್ರುಯರು ||
ಕಡು ಪರಾಕ್ರಮಿ ಜಟಾಸುರನೆಂಬ ಖಳನೋರ್ವ |
ಸಡಗರದಿ ಕಂಡ ದೂರದೊಳು || 403 ||

**ಭಾಮಿನಿ**
ಅರರೆ ಹಾರುವತಂಡ ಸಿಕ್ಕಿತು |
ಪರುವವೆನ್ನೊಡಲಿಂಗೆ ಶಿವ ತಾ |
ಕರುಣಿಸಿದನೆಂದೆನುತ ಮೀಸೆಯ ತಿರುಹಿ ಗರ್ಜಿಸುತ ||
ಬರಸಿಡಿಲು ಹೊಡೆದಂತೆ ವಿಪ್ರರ |
ನೆರವಿಯನು ಹೊಕ್ಕಾಗ ಸದೆವುತ |
ಲಿರಲು ಭಯದಿಂದೊದರಿ ಕರೆದರು ಮಾದ್ರುತನಯರನು || 404 ||

**ಭೈರವಿ - ಅಷ್ಟ**
ಧರಣಿಸುರರ ಭಂಗವ | ನಕುಲ ಕಂಡು |
ಧರಿಸುತ್ತ ಧನುಶರವ |
ಇರದೆ ಸರ್ವರಿಗಭಯವನಿತ್ತು ದುರುಳನ |
ಕರೆದೆಂದ ಬಿರುವಾಕ್ಯವ || 405 ||

ಎಲವೊ ದೃತ್ಯಾಧಮನೆ | ತೋರಿಸು ನಿನ್ನ |
ಬಲುಹುಗಳೆನ್ನೊಡನೆ ||
ಮಲೆತು ನೀ ವಿಪ್ರರ ಬೆದರಿಸಿದಂತಲ್ಲ |
ನಿಲು ನಿಲು ಕಡು ಖೂಳನೆ || 406 ||
ಮುಪ್ಪಿನ ದೇಹದೊಳು | ಸಾರಗಳಿಲ್ಲ |
ಸಪ್ಪೆಯಾಗಿಹುದು ಕೇಳು ||
ಅಲ್ಪ ಪ್ರಾಯದ ಚಿಣ್ಣ ದೊರಕಿದೆ ರುಚಿಯಾಗಿ |
ತಪ್ಪಲ್ಲ ಪುಣ್ಯಗಳು || 407 ||
ಸಿಕ್ಕಿದ ಮನುಜರನು | ಭಕ್ಷಿಸಿ ಬಹು |
ಸೊಕ್ಕಿದ ಕಾಯವನು ||
ಇಕ್ಕುವೆ ಬಲಿಯನೀಕ್ಷಣ ಭೂತಗಣಕೆಂದು |
ರಕ್ಕಸಾಧಮಗೆಚ್ಚನು || 408 ||
ಬರುವ ನಾರಾಚವನು | ಖಂಡಿಸಿ ಜಟಾ |
ಸುರನಿಡೆ ಶಕ್ತಿಯನು ||
ಉರಕೆ ಬಂದೆರಗಿತು ಹರನ ಕಣ್ಗಿಡಿಯಂತೆ |
ಒರಗಿದ ನಕುಲಾಂಕನು || 409 ||

**ಭೈರವಿ - ಏಕ**
ಅಗ್ರಜ ಮಲಗಿದ ಒಲವ | ಕಂ | ಡುಗ್ರದಿ ಕಲಿ ಸಹದೇವ ||
ಶೀಘ್ರದಿ ಶರಚಾಪವನು || ಹ | ಸ್ತಾಗ್ರದಿ ಕೊಂಡುಸಿರಿದನು || 410 ||
ಅಣ್ಣನ ಕೆಡಹಿದ ಖೋಡಿ | ನಿ | ಲ್ಲೆನ್ನೊಳು ನೀ ಕೈಮಾಡಿ ||
ಬೆನ್ನಲಿ ತೆಗೆವೆನು ಕರುಳ | ನೋ | ಡೆನ್ನುತಲೆಚ್ಚನು ಸರಳ || 411 ||
ಅದುಭುತ ಸಿಂಹನ ಬಳಿಗೆ | ಕರಿ | ಕದನಕೆ ತೆರಳಿದ ಹಾಗೆ |
ಒದಗಿದೆಯೆನ್ನಲಿ ಪೋರಾ | ನೀ | ಬದುಕುವುಪಾಯವ ತೋರಾ || 412 ||
ಕರೆ ಕರೆ ಮುದಿ ಹಾರುವರ | ನಿನ್ನ | ಪೊರೆಯಲಿ ನೋಡುವೆ ಕುವರ ||
ಶಿರವನು ಕೊಳ್ಳುವ ಬಾಣ | ಇಕೊ | ಬರುತಿದೆ ತಾಳಿಕೊ ಜಾಣ || 413 ||
ಎನುತೆಚ್ಚನು ಪದಿನಾರ | ನರ | ನನುಜನು ಕಡಿಯುತಲಿದರ ||
ವನಜಾಕ್ಷನ ಶರ ಬಿಡಲು | ಬಿದ್ದ | ದನುಜನು ಕಡು ಮೂರ್ಛೆಯೊಳು || 414 ||

**ಭಾಮಿನಿ**
ನೊರೆರಕುತ ಕಾರುತಲೆ ದೇಹದ |
ಸ್ಮರಣೆಯಿಲ್ಲದೆ ತ್ರಿಘಟಿ ಪರಿಯಂ |
ತೊರಗಿ ಮೆಲ್ಲನೆಯೆದ್ದು ಕಣ್ದೆರೆದಾಗಲೀಕ್ಷಿಸುತ ||
ಘುರಘುರನೆ ಪಲ್ಗಡಿದು ಕೋಪದೊ |
ಳುರಿಯನುಗುಳುತ ಮೃತ್ಯುವಂದದಿ |
ದುರುಳನಾರ್ಭಟಿಸುತ್ತ ಶೂಲವ ತಿರುಹಿ ಮುರಿದಿಟ್ಟ || 415 ||

**ನಾದನಾಮಕ್ರಿಯೆ - ಅಷ್ಟ**
ಪ್ರಳಯಕಾಲದ ಸಿಡಿಲಂದದಿ | ವಕ್ಷ |
ಸ್ಥಳಕೆ ಬಂದೆರಗಿತು ಮೋಸದಿ ||
ಇಳೆಗೊರಗಿದ ಸಹದೇವನು | ಖಳ |
ನೊಳಪೊಕ್ಕು ಹೊಯ್ದು ಭೂಸುರರನು || 416 ||
ಹರ ಹರಾ ಇವನೊಳ್ ಸಿಕ್ಕಿದೆವಲ್ಲ | ದು |
ರ್ಮರಣಕಾಯಿತು ಪಥ ನಮಗೆಲ್ಲ |
ಬರಲಿಲ್ಲ ಭೀಮಧರ್ಮಜರಿನ್ನು | ಮಾದ್ರಿ |
ತರಳರು ಮಲಗಿದರಿನ್ನೇನು || 417 ||
ಒರಲುತೀ ಪರಿಯಿಂದ ಭರದೊಳು | ವಿಪ್ರ |
ನೆರವಿಯೋಡಿತು ನಾಲ್ಕು ಕಡೆಯೊಳು ||
ದುರುಳ ಪೊಕ್ಕನು ಪರ್ಣಶಾಲೆಯ | ಘನ |
ಹರುಷದಿ ಕಂಡ ಪಾಂಚಾಲೆಯ || 418 ||

**ಕೋರೆ - ಏಕ**
ಇವಳ್ಯಾರೋ ಇವಳ್ಯಾರೋ ಇವಳ್ಯಾರೋ |
ಶಿವ ಶಿವ | ಮಾನಿನಿ | ಇವಳ್ಯಾರೋ || ಪ ||
ಇವಳ್ಯಾರೋ ಶತ | ರವಿಯಂತೆಸೆವಳು |
ಯುವತಿಗೆ ಕಾಣೆನು | ಸರಿ ಭುವನದೊಳು || ಇವಳ್ಯಾರೋ || ಅ ||
ಬೇಸರಗೊಳ್ಳದೆ | ಈ ಸೌಂದರ್ಯವ |
ನೇಸು ವತ್ಸರ ನಿ | ರ್ಮಿಸಿದನೊ ವಿಧಿ ತಾ || ನಿವಳ್ಯಾರೋ || 419 ||

ಪಡೆದವಳಿನ್ನೇನ್ | ಸುಕೃತಳೊ ಜಗದಲಿ |
ಮೃಡ ಬಲ್ಲನು ಕೈ | ಪಿಡಿದನ ಯೋಗವ || ಇವಳ್ಯಾರೋ || 420 ||
ನಾಕದ ಸತಿಯರ | ನೂಕಲಿ ಮಡುವಿಗೆ |
ಈಕೆಯ ನೋಡದ | ನೇತ್ರವೆ ಹರ ಹರ || ಇವಳ್ಯಾರೋ || 421 ||
ಪುತ್ಥಳಿ ಪೋಲುವ | ಉತ್ತಮ ತನುವಿದ |
ನರ್ತಿಯೊಳ್ ಬಿಗಿದ | ಪ್ಪದ ತೋಳ್ ವ್ಯರ್ಥವು || ಇವಳ್ಯಾರೋ || 422 ||
ಸರಸವಿನೋದದಿ | ಸವಿಯುತ ಅಧರವ |
ತರುಣಿಯ ಭೋಗಿಸೆ | ಪರಮ ಕೃತಾರ್ಥನು || ಇವಳ್ಯಾರೋ || 423 ||

**ನಾದನಾಮಕ್ರಿಯೆ - ಅಷ್ಟ**
ಖಳನು ಈ ಪರಿ ಹಲವಂದದಿ | ಮನ |
ದೊಳಗೆ ಯೋಚಿಸಿ ಸ್ಮರ ತಾಪದಿ |
ಕಳವಳಿಸುತ ಕಡು ತೀವ್ರದಿ | ಪಾಪಿ |
ಯೆಳೆದ ಬಾರೆನುತಟ್ಟಹಾಸದಿ || 424 ||
ಗರುಡನ ಕೈಯೊಳು ಸಿಕ್ಕಿದ | ಅಹಿ |
ಮರಿಯಂತೆ ಮಿಡುಕುತ್ತ ಶೋಕದ ||
ಹೊರಳಿಯೊಳ್ ಕೊಸರಿಕೊಂಡೋಡ್ವುದ | ಕಂಡು |
ದುರುಳ ಒದೆದು ಮೂರ್ಛೆಗೈಸಿದ || 425 ||
ಎಲ್ಲಿ ಪೋಗುವೆ ಲೌಡಿ ನಿನ್ನನು | ಬಿಡ |
ಬಲ್ಲೆನೆ ಎನುತಾಗ ದೈತ್ಯನು ||
ಫುಲ್ಲನೇತ್ರೆಯನೆಳೆದೊಯ್ದನು | ಧೌಮ್ಯ |
ತಲ್ಲಣಿಸುತ ತಡೆದೆಂದನು || 426 ||

**ಪಂಚಾಗತಿ - ಮಟ್ಟೆ**
ಎಲವೊ ದ್ರೋಹಿ ಪರರ ಸತಿಯ |
ಬಲುಮೆಯಿಂದ ಕಳ್ಳತನದಿ |
ಸೆಳೆದು ಒಯ್ವರೇನೊ ಭ್ರಷ್ಟ | ಬಿಡುಬಿಡಾಕೆಯ ||
ಬೋಳುತಲೆಯ ಪಾರ್ವ ನಿನ್ನ |
ಸೀಳದುಳಿದೆನೆಂಬ ಗರ್ವ |
ತಾಳಿ ಬಂದೆಯೇನೋ ನಮ್ಮ | ಪಾರು ಪತ್ಯಕೆ || 427 ||
ಸೀಳಿ ಕರುಳನುಗಿವ ಭಟನು |
ತಾಳು ನಿಮಿಷದೊಳಗೆ ಬಹನು |
ಖೂಳ ನಿನ್ನಾಯುವಿಗೆ ಬಂತು | ಕಾಲ ನೋಡಿಕೊ ||
ಫಾಲನಯನ ಬಂದರೆನ್ನ |
ತೋಳಸತ್ವಕಿದಿರೆ ನೋಡು |
ಮೂಳ ನಿನ್ನಪ್ಪಂಗೆ ಪೋಗಿ | ಪೇಳು ದೂರನು || 428 ||
ಮುಪ್ಪಿನವರು ನುಡಿದ ಮಾತು |
ತಪ್ಪದೆಲವೊ ನಮ್ಮ ಧೊರೆಯ |
ಬೊಪ್ಪನೆಡೆಗೆ ಪೋಗಬಹುದು | ಸ್ವಲ್ಪ ಸೈರಿಸು ||
ಚಪ್ಪಳಿಕೆಯ ಹರಟೆಯನ್ನು |
ದರ್ಪಿಸುವೆಯ ಡೊಳ್ಳು ನಿನ್ನ |
ಸೊಪ್ಪುರಿವೆನೆನುತ್ತ ಗದೆಯೊ | ಳಪ್ಪಳಿಸಿದನು || 429 ||
ಮಂದಮತಿಯೆ ಹೆಜ್ಜೆಯನ್ನು |
ಮುಂದೆ ಇಟ್ಟರೀಗ ಧರ್ಮ |
ಕಂದನಾಣೆಯೆನುತ ಮಿಗೆ ದಿ | ಗ್ಬಂಧ ಗೈದನು ||
ಇಂದುಧರನ ತೆರದಿ ಕೋಪ |
ದಿಂದಲಾರುಭಟಿಸಿ ಸತಿಯ |
ಮುಂದಲೆಯನು ಪಿಡಿದು ಕುಸುಬ | ಲಂದು ದುಃಖಿಸೆ || 430 ||

**ನೀಲಾಂಬರಿ - ಆದಿ**
ಹರ ಹರ ಕೆಟ್ಟೆನು ವಿಧಿಯೆ |
ಅರೆಕ್ಷಣ ಸೈರಿಸಲರಿಯೆ ||
ದುರುಳನ ಬಾಧೆಯ ನಾನು |
ಅರುಹುವುದ್ಯಾರಿಗೆ ಇನ್ನು || 431 ||
ಎರೆಯರನಿಬ್ಬರ ಕೆಡಪಿ |
ಧರೆಯೊಳಗೆನ್ನನು ಪಾಪಿ ||
ಉರುಳಿಸಿ ಕಾಲಿನೊಳೊದೆದು |
ಗರುವದೊಳೊಯ್ವನು ಪಿಡಿದು || 432 ||

ಸುರಪತಿ ಮಾರುತಿ ಯಮರು |
ಪರಿಕಿಸೆ ನೀವ್ ಮಾತುಳರು ||
ಕರುಣದಿ ನಿಮ್ಮಯ ಸೊಸೆಯ |
ಸೆರೆಯನು ಬಿಡಿಸಿರಯ್ಯ || 433 ||
ಅನಲನೆ ಲಾಲಿಸೊ ನಿನ್ನ |
ತನಯಳನೀ ಖಳ ಮುನ್ನ ||
ದಣಿಸುವ ಕೊಬ್ಬಿನೊಳಿಂದು |
ವಿನಯದಿ ರಕ್ಷಿಸೊ ಬಂದು || 434 ||
ವರ ಧೌಮ್ಯಾದಿಗಳೆಲ್ಲ |
ಪರಿಕಿಸಿ ನೋಡುವರಲ್ಲ ||
ಪೊರೆವರ ಕಾಣೆನು ಹರಿಯೆ |
ಕರುಣದಿ ಪಾಲಿಸೊ ಧೊರೆಯೆ || 435 ||
ರಂಗನಾಥನೆ ನಿನಗೆ |
ತಂಗಿಯಲ್ಲವೆ ಹೇಗೆ ||
ಭಂಗವ ತಪ್ಪಿಸಿ ಯೆನ್ನ |
ಪಿಂಗದೆ ನೋಳ್ಪರೆ ರನ್ನ || 436 ||
ಶರಣರ ಪೋಷಕನೆನುವ |
ಬಿರುದನು ತೋರಿಸಿ ದೇವ ||
ಮರೆತರೆ ಕಾಣೆನು ಗತಿಯ |
ದುರುಳಗೆ ಸಿಕ್ಕಿದೆನಯ್ಯ || 437 ||

**ಭಾಮಿನಿ**
ಮೊರೆವ ಸಿಂಹನ ಕೈಗೆ ಸಿಕ್ಕಿದ |
ಹರಿಣದರ್ಭಕನಂತೆ ಪಾಂಡವ |
ರರಸಿ ಬಾಯ್ಬಿಡುತೊದರೆ ಮರ ಶಿಲೆ ಕರಗುವಂದದಲಿ ||
ಹರಿದರಿತ್ತಲು ಧೌಮ್ಯ ಶಿಷ್ಯರು |
ಕರೆವುತಲೆ ದಶದಿಕ್ಕು ಹುಡುಕುತ |
ಬರಬರಲು ಮಾರ್ಗದಲಿ ಕಂಡರು ಭೀಮಧರ್ಮಜರ || 438 ||
ಸುರಿವ ಬೆವರಿನ ಡಗೆಯ ಹೊಯ್ಲಿನ |
ಕರದ ಬಾಯ್ಗಳ ರೋದನಧ್ವನಿ |
ಭರಿತವಾಗಿಹ ವಿಪ್ರನೆರವಿಯ ನೋಡಿ ಕಂಗೆಡುತ ||
ಧರಣಿಪತಿ ಬೆಸಗೊಂಡ ದುಃಖವ |
ಪರಿಗಳೇನೆಮ್ಮರಸಿಯನುಜರು |
ಹರುಷವೇ ಮತ್ತೇನು ದುರ್ಘಟವೆನಲು ಪೇಳಿದರು || 439 ||

**ಸುರುಟಿ - ಏಕ**
ಕೇಳು ಧರ್ಮಜಾತ | ವಿಧುಕುಲ |
ಮೌಳಿ ಸುಜನಪ್ರೀತ ||
ಪೇಳಲರಿದು ಪರ್ಣಾಲಯದೊಳಗೊಬ್ಬ |
ಖೂಳ ದಾನವ ಬಂದು ಗೋಳುಗುಟ್ಟಿಸಿದನು || ಕೇಳು || 440 ||
ಬೆದರಿಸಿ ವಿಪ್ರರನು | ಅನುಜರ |
ಕದನದಿ ಕೆಡಹಿದನು ||
ಸುದತೀಮಣಿ ದ್ರೌಪದಿಯನು ಕಾಲೊಳ |
ಗೊದೆದು ತುರುಬ ಪಿಡಿದೆಳೆದೊಯ್ವನು ಖಳ || ಕೇಳು || 441 ||
ಬಿಡದೆ ಮುಂದಕವನ | ಧೌಮ್ಯರು |
ತಡೆದರು ಪಾತಕನ ||
ಬಡ ಹಾರವ ಹೋಗೆನತಲಿ ಕೋಪದಿ |
ಖಡುಗವ ಜಡಿಯಲು ತಡೆಗಟ್ಟಿದರು || ಕೇಳು || 442 ||
ತಂದೆವು ದೂರುಗಳ | ನೋಡಿರಿ |
ಮುಂದಹ ಕಾರ್ಯಗಳ ||
ಎಂದೀ ಪರಿಯಲಿ ನುಡಿಯಲು ಕಾಲಜ |
ನಂದು ಮಿಡುಕಿ ಹರಿ ಕಂದನನೀಕ್ಷಿಸೆ || ಕೇಳು || 443 ||

**ವಾರ್ಧಕ**
ಅರರೆ ಸಿಂಹನ ಸತಿಯ ನರಿ ಕೆಣಕಿದಂತಾಯ್ತು |
ದೊರಕಿದುದೆ ರಮಣಿಗೀಪರಿ ಕಷ್ಟ ನಾವಿನ್ನು |
ಧರಣಿಯೊಳಗಿರ್ದು ಫಲವೇನೆನುತ ಮನದೊಳಗೆ ಮರುಗಿ ವೀರಾವೇಶದಿ ||
ಉರಿಸೂಸಿ ಕಂಗಳೊಳು ತಿರುಹಿ ಮೀಸೆಯ ಭಾರಿ |
ಮರಗಳಂ ಮುರಿದುಕೊಂಡಬ್ಬರಿಸುತಲ್ಲಿಂದ |
ಮರುತ ವೇಗದೊಳಾಗ ರಿಪುಭಯಂಕರ ಭೀಮ ತೆರಳಿ ಕಂಡನು ದೈತ್ಯನ || 444 ||

**ಭಾಮಿನಿ**
ಕ್ರೂರ ಪಾತಕಿ ಇತ್ತ ತಿರುಗೆಲೊ |
ಹಾರುವರನಂಜಿಸಿದ ನಾರೀ |
ಚೋರ ನೀನಿನ್ನಾರ ಬಸಿರನು ಪೊಗುವೆ ಸಮರದಲಿ ||
ಬೀರುವೆನು ತವ ರಕುತ ಮಾಂಸವ |
ಮಾರಿ ಬಳಕಗೆ ನೋಡು ಕದನದ |
ಭೈರವನ ಕಲಿಭೀಮ ಕೊಂದರೆ ತಡೆವರ್ಯಾರೆಂದ || 445 ||

**ಶಂಕರಾಭರಣ - ಮಟ್ಟೆ**
ಮರುತಜಾತನೆಂದ ನುಡಿಗೆ ಉರಿಯನುಗುಳುತ |
ಧರಣಿ ನಡುಗುವಂತೆ ಆರುಭಟಿಸಿ ಕೂಗುತ ||
ಸುರಗಿಯನ್ನು ತಿರುಹುತಾಗ ಪೇಳ್ದನವನೊಳು |
ಧುರಕೆ ಬಂದೆಯೇನೊ ಮರಣ ಬಯಸಿ ತನ್ನೊಳು || 446 ||
ನೆಲದೊಳೊರಗಿದವರ ಕಂಡು ಪೋಗು ಸುಮ್ಮನೆ |
ಲಲನೆಗಾಗಿ ಸಾಯಬೇಡ ನರರೊಳಧಮನೆ ||
ನಳಿನಪೀಠ ಬರೆದ ಲಿಪಿಯು ತೀರಿತಾದಡೆ |
ನಿಲು ನಿಲೆಲವೊ ಹಬ್ಬವೆನಗೆ ನಿನ್ನ ಕೊಂದಡೆ || 447 ||
ಎನುತ ಭುಜವನೊದರಿಸುತ್ತ ಭಿಮಸೇನನ |
ಕನಲಿ ಪೊಯ್ದ ಸುರವಿರೋಧಿ ಕನಲುತಾಕ್ಷಣ ||
ಧನುಜನಾಯುಧವನು ಮುರಿದು ವಾತತನುಜನು |
ಮನುಮಥಾರಿಯಂತೆ ಕೋಪವೇರಿ ನುಡಿದನು || 448 ||
ಪುಲಿಯ ಕೂಡೆ ಸರಸವೇನೊ ಎಳೆಯ ಕರುವಿಗೆ |
ಖಲರೊಳಧಮ ನಿಲ್ಲು ನಿನ್ನ ಬಿಡುವೆನೆಲ್ಲಿಗೆ ||
ಇಳೆಯ ಋಣವು ತೀರಿತೆಮ್ಮ ಕೆಣಕಿದಾಗಲೆ ||
ಬಲುಹ ನೋಡೆನುತ್ತ ಮರದಿ ಬಡಿದನಾಗಲೆ || 449 ||
ವೃಕ್ಷಹತಿಗೆ ಬಹಳ ನೊಂದು ರಕುತ ಕಾರುತ |
ಅಕ್ಷಿ ತಿರುಗಿ ನೆಲಕೆ ಬಿದ್ದು ಮತ್ತೆ ಏಳುತ ||
ದಕ್ಷಹರನ ತೆರದಿ ಕೋಪ ಮಸಗಿ ಭೀಮನ |
ವಕ್ಷವನ್ನು ತಿವಿದನಾಗ ಬೆದರೆ ಸುರಗಣ || 450 ||

**ಸಾವೇರಿ - ಮಟ್ಟೆ**
ಭರಿತ ಮುಷ್ಟಿಗೆ | ಉರುಳಿ ಧರಣಿಗೆ |
ಮರಳಿ ಏಳುತ | ಭೀಮ ಗಜರುತ || 451 ||
ನುಡಿದ ಕೇಳೆಲೊ | ವಿಗಡನಹುದೆಲೊ |
ತಡೆಯದೀಕ್ಷಣ | ತೋರ್ಪೆ ಕಾಲನ || 452 ||
ಎಂದು ಭರದೊಳು | ಒದೆಯೆ ಕಾಲೊಳು |
ನೊಂದು ದೈತ್ಯನು | ಶೂಲವಿಟ್ಟನು || 453 ||
ಬರುವ ಶೂಲವ | ಪಿಡಿದು ಶೌರ್ಯವ |
ಧರಿಸಿ ಗದೆಯನು | ತಿರುಹುತೆಂದನು || 454 ||
ಇಹದೊಳಿರ್ಪುದು | ಮರಣ ನಿನ್ನದು |
ವಿದಿತವೆಂದನು | ಭರದಿ ಹೊಯ್ದನು || 455 ||

**ಭಾಮಿನಿ**
ಭರಿತ ಗದೆಹೊಯ್ಲಿನಲಿ ಗಾಜಿನ |
ಭರಣಿಯೋಲ್ ಜರ್ಜರಿತವಾಗಲು |
ಒರಲಿ ಬಿದ್ದನು ಯೋಜನಾರ್ಧಕೆ ಧರಣಿತಳ ಕುಸಿಯೆ ||
ಗಿರಿನಿಕರ ಮಗುಚಿದವು ದ್ರೌಪದಿ |
ಯಿರದೆ ಬಂದಪ್ಪಿದಳು ಭೀಮನ |
ಶರಧಿಘೋಷದಿ ಪೊಗಳೆ ವಿಪ್ರರು ಯಮಳರೆಚ್ಚರಿಯೆ || 456 ||

**ಕೇದಾರಗೌಳ - ಅಷ್ಟ**
ಸರಿಯಲಿತ್ತಲು ಯಮಪುರಿಗೆ ಖಳಾಧಮ |
ಧರಣೀಶನಂಘ್ರಿಯಲಿ ||
ತರುಣಿ ದ್ರೌಪದಿ ಭೀಮ ಯಮಳರು ಸಹಿತಾಗ |
ಲೆರಗೆ ಭಕ್ತಿಗಳಿಂದಲಿ || 457 ||
ಪರಸುತ್ತ ಶಿರವನ್ನು ಕರದಿಂದ ಪಿಡಿದೆತ್ತಿ |
ಪರಮ ಸಂತೋಷದೊಳು ||
ಇರುತಿರೆ ಹಬ್ಬಿತು ವನವೆಲ್ಲ ಶವದಿಂದ |
ದುರಗಂಧ ಹೊಲಸುಗಳು || 458 ||
ತಡೆಯಲಾರದೆ ಮುನಿಗಡಣ ಸಹಿತ ಮುಂದೆ |
ನಡೆದರು ವಹಿಲದಲಿ ||
ಬಿಡದೆ ಹೊಕ್ಕರು ವೃಷಪರ್ವನಾಶ್ರುಮವನ್ನು |
ಕಡು ಬಳಲಿಕೆಯಿಂದಲಿ || 459 ||
ಉತ್ತಮ ಜಲ ಫಲ ಪುಷ್ಪಸಂದೋಹಗ |
ಳರ್ತಿಯೊಳೀಕ್ಷಿಸುತ ||
ಒತ್ತಿನೊಳಿರುವ ಶೈಲವನಡರಿದರಾಗ |
ಚಿತ್ತದೊಳಗೆ ಹಿಗ್ಗುತ || 460 ||
ಸುರರಿಗೆ ಕಂಟಕನಾಗಿ ಭೂಸುರರಿಗೆ |
ವರಮೃತ್ಯುವಂದದಲಿ ||
ಇರುತಿರ್ದ ಮಾಣಿಮಾನ್ಯನೆನುವ ದಾನವನೋರ್ವ |
ಮೊರೆಯುತ್ತೈತಂದನಲ್ಲಿ || 461 ||

**ಕಂದ ಪದ್ಯ**
ಶರನಿಧಿಯೋಲ್ ಬಹ ಪಾರ್ವರ |
ಪರಿಕಿಸಿ ಕರ್ಬುರನುರಿಮಸಗುತ ಕ್ರೋಧದೊಳಂ ||
ಮೊರೆವುತ ಬರೆ ಭೀತಿಯೊಳಂ |
ಮೊರೆವುತ ಬರೆ ದ್ವಿಜರನಿಲಾತ್ಮಜನಿದಿರಾದಂ || 462 ||

**ನಾದನಾಮಕ್ರಿಯೆ - ಅಷ್ಟ**
ಕಡು ಖೂಳ ದೈತ್ಯ ಈ ಕೊಬ್ಬನು | ವಿಪ್ರು |
ರೊಡನೆ ತೋರ್ಪೆಯ ಬಿಡು ಫಲವೇನು ||
ಹೆಡತಲೆ ಮೃತ್ಯು ತಾನಿರುತಿರೆ | ನಿನ |
ಗೆಡಬಲದ್ವಂಗ್ಯಾಕೆ ಸಾವರೆ || 463 ||
ಇದರ ಸವಿಯ ನೋಡು ಎನುತಲಿ | ಪೊಯ್ದ |
ಗದೆಯೊಳಾಕ್ಷಣ ಸಿಂಹರವದಲಿ ||
ಒದರುತ ನಾಲ್ದೆಸೆ ತಿರುಗಲು | ನೃಪನ |
ಪದವು ತಾಗಿತು ಪುಣ್ಯವಶದೊಳು || 464 ||

**ತೋಡೀಗೌಳ - ಏಕ**
ಭಲಾ ಭಲಾ ಭೂಪತಿ ರನ್ನ |
ಕಲಾಪ್ರೌಢ ಕಂದರ್ಪಸದ್ರೂಪ ||
ಭಲಾ ಭಲಾ || ಪ ||
ವೈರಿಗಜಕಂಠೀರವ | ಸುವಿ |
ಚಾರ ನಿರುಪಮ ವೈಭವ ||
ವೀರ ಪಾಂಡುಕುಮಾರ ಪಾರಾ |
ವಾರಸಮಗಂಭೀರನಹಹಾ
ಭಲಾ ಭಲಾ || 465 ||
ಸಲಕ್ಷಣಾನ್ವಿತ ಸುಪ್ರತಿ |
ಬಲು ಪ್ರತಾಪಿ ಮಹೋನ್ನತಿ ||
ವಿಲಾಸ ಗೌರವ ಚಾರುಕೀರ್ತಿ |
ಕಲಾಪ ಕಮನೀಯಾಂಗನಹಹಾ ||
ಭಲಾ ಭಲಾ || 466 ||
ಸುಧಾಂಶುಕುಲಕುಮುದೇಂದುವಾ |
ಸದಾಶ್ರಿತಾಪದ್ಬಾಂಧವ |
ಬುಧಾ:ಪ್ರಯಾಮಲಚಿತ್ತರಂಜನ ಸು |
ಹೃದಯಾ ಲಲಿತಾ ಶ್ರೀಮಂತನಹಹಾ ||
ಭಲಾ ಬಲಾ || 467 ||

**ಕೇದಾರಗೌಳ - ಅಷ್ಟ**
ಈ ತೆರದೊಳಾಗ ಭೂನಾಥನ ಪೊಗಳುತ್ತ |
ಪ್ರೀತಿಯೊಳೊಂದಿಸುತ ||
ವಾತಸುತಗೆ ಶಿರವೆರಗುತ್ತ ಮಾದ್ರಿಸಂ |
ಜಾತರ ಮನ್ನಿಸುತ || 468 ||
ಪರಿ ಪರಿ ವಸ್ತ್ರ ಭೂಷಣ ಮಹಾಯುಧಗಳ |
ತರಿಸುತ ನಾಲ್ವರಿಗೆ ||
ಹರುಷದಿ ಕೊಟ್ಟುಪಚರಿಸುತಲೊರೆದನು |
ಶರಜಾರಿವಂಶಜಗೆ || 469 ||
ಲಾಲಿಸು ನೃಪನಾ ಗಂಧರ್ವನಗಸ್ತ್ಯರ |
ಶಾಪದ ದೆಸೆಯಿಂದಲಿ ||
ಖೂಳಜನ್ಮವಿದು ಬಂದೊದಗಿತು ಪರಿಹಾರ |
ವಾಯಿತು ನಿಮ್ಮಿಂದಲಿ || 470 ||
ಧರಣಿ ಮೂರರೊಳತಿ ಪಾವನನಾದೆನು |
ಪರಮ ಕೃಪಾನಿಧಿಯೆ ||
ಕರುಣಿಸಿರಪ್ಪಣೆ ಎನುತಲೆ ನಮಿಸುತ |
ತೆರಳಿದ ಕೇಳ್ ದೊರೆಯೆ || 471 ||

**ಭೈರವಿ - ಝಂಪೆ**
ಧೀರ ಗಂಧರ್ವನನು | ಕಾರುಣ್ಯದಲಿ ಕಳುಹಿ |
ಭೂರಮಣನಿರ್ದ ಪರಿ | ವಾರ ಸಹಿತಲ್ಲಿ || 472 ||
ಮರುತಜನ ಸಾಹಸಕೆ | ಹರುಷಗೊಳ್ಳುವನೊಮ್ಮೆ |
ನರನ ಯೋಚನೆಯೊಳಗೆ | ಕರಗುತೊಮ್ಮೊಮ್ಮೆ || 473 ||
ಇರುತಿರಲಿಕೊಂದು ದಿನ | ದಿರುಳು ದು:ಸ್ವಪ್ನ ವಿಳೆ |
ಯರಸನಿಗೆ ಕಾಣಿಸಲು | ತ್ವರಿತದಿಂದೆದ್ದು || 474 ||
ಮನದಿ ಭೀತಿಯ ತಾಳಿ | ಹರಿ ಕೃಷ್ಣಯೆಂದೆನುತ |
ಅನುಜನನು ನೆನೆನೆನೆದು | ಮರುಗೆ ಭೂನಾಥ || 475 ||

**ತಿಲ್ಲಾನಿ - ರೂಪಕ**
ಬಾರನ್ಯಾಕೆ ಪಾರ್ಥನಿನ್ನು | ಭೂರಿ ಕೊರತೆಯೊಳಗೆ ಮನವು |
ಸೂರೆಹೋದುದಕಟ ನಿಮಿಷ | ತಾಳಲಾರೆನು || 476 ||
ಇನ್ನು ದಣಿಯಲಾರೆ ಪಾಪಿ | ಅಣ್ಣನೊಡನೆ ವನದೊಳೆಂದು |
ಮುನ್ನ ತೊರೆದನೇನೊ ನಮ್ಮ | ಚಿಣ್ಣ ಫಲುಗುಣ || 477 ||
ವೃತ್ರವೈರಿಗದ್ದುಗೆಯನು | ಹತ್ತಿದವರು ತಿರುಗಿ ಕರ್ಮ |
ಪೃಥ್ವಿಗಿನ್ನು ಬಹರೆ ಕಳೆದೆ | ವ್ಯರ್ಥ ತಮ್ಮನ || 478 ||
ಏಕೆ ನುಡಿದರೆನಗೆ ವ್ಯಾಸ | ರೇಕೆ ಕಳುಹಿಕೊಟ್ಟೆ ನರನ |
ನೇಕೆ ಮರುಳುಗೊಂಡೆನಯ್ಯೊ | ಕಾಕುತನದಲಿ || 479 ||
ಹಲವು ರೀತಿಯೊಳಗೆ ಭೂಪ | ಹಲುಬುತಿರಲು ಸಹಜರಾಗ |
ತಿಳಿದು ದುಗುಡ ಧರಿಸಲವರು | ಲಲನೆ ಸಹಿತಲಿ || 480 ||

**ಭಾಮಿನಿ**
ಅರಸನಲಿ ಬೇರೂರಿ ಮಗುಳಂ |
ಕುರಿಸಿದುದು ಭೀಮನಲಿ ನಕುಲನೊ |
ಳೆರಡು ಮೂರೆಲೆಯಾಯ್ತು ಸಹದೇವನಲಿ ಕವಲೊಡೆದು ||
ಅರಸಿಯಲಿ ಪ್ರಬಲಿಸಿತು ಧೌಮ್ಯನೊ |
ಳಿರದೆ ಹಬ್ಬಿತು ಶೋಕಲತೆ ಮುನಿ |
ವರರ ಮುಸುಕಿತು ಕೇಳು ಜನಮೇಜಯ ಮಹಾಕ್ಷಿತಿಪ || 481 ||

**ಮಾರವಿ - ಏಕ**
ಈ ತೆರದಲಿ ಭೂ | ನಾಥನು ತನ್ನನು |
ಜಾತರು ಭೂಸುರ | ವ್ರಾತ ಸಹಿತ ದುಃ |
ಖಾತುರದೊಳಗೆ ಮ | ಹಾಂತ ಯೋಚನೆಯೊಳು |
ಚೇತನವಡಗಿ ಶ್ರೀ | ನಾಥನೆ ಸಲಹೆನ |
ಲಾತತುಕ್ಷಣ ಶುಭ | ಶಕುನ ಕಾಣಿಸಿತು || ಕೇಳು ಭೂಪ || 482 ||

ಇತ್ತಲು ಜಗ ಜಗಿ | ಸುತ್ತಲು ಸಾವಿರ |
ಮಿತ್ರನವೋಲ್ ಕ | ಣ್ಣರ್ತಿಯ ಕಾಣುತ |
ವೃತ್ರಾರಿಯ ರಥ | ಪೃಥ್ವಿಗೆ ಬರುತಿರೆ |
ಸತ್ತಿಗೆ ಸಾಲುಗ | ಳಿತ್ತೆರ ಚೌರಿಗಳುತ್ತಮ ಹಯಗಳು |
ನರ್ತಿಸುತಾಗ || ಕೇಳು ಭೂಪ || 483 ||
ಕ್ಷೋಣಿಪ ಮೊದಲಾ | ದಖಿಳರು ಇದರನು |
ಕಾಣುತ ಭ್ರಮಿಸಿ ನಿ | ಧಾನಗಳಿರಿಯದೆ |
ಏನಚ್ಚರಿಯಿದು | ಭಾನು ತಾ ಬರುವನೊ |
ಸ್ಥಾಣುವಿರಿಂಚರ | ಗಮನವೊ ಹದನನು |
ದಾನವಾಂತಕ ಬಲ್ಲ | ನೆನುತಿರಲಾಗ || ಕೇಳು ಭೂಪ || 484 ||
ಮಾತಳಿಪೊಗಳಿಕೆ | ಭೂತಳ ತುಂಬಲು |
ಶ್ವೇತವಾಹನ ವಿ | ಖ್ಯಾತ ಮುರಾರಿಯ |
ಪ್ರೀತ ಖಳರ ನಿ | ರ್ಧೂತ ಜಗತ್ರಯ |
ನಾಥ ಸುರೇಂದ್ರನ | ಜಾತ ಪರಾಕು ಮ |
ಹಾತಿ ಪರಾಕ್ರಮಿ | ಭಳಿ ಬಳಿರೆನಲು || ಕೇಳು ಭೂಪ || 485 ||

**ಭಾಮಿನಿ**
ಅರರೆ ಫಲುಗುಣ ಬಂದ ನಿಶ್ಚಯ |
ಪರಮ ಸಹಸಿಯ ಸುಪ್ರತಾಪದ |
ಬಿರುದಿನುಗ್ಗಡಣೆಗಳು ಕರ್ಣಕೆ ಕೇಳುತಿದೆ ಎನುತ ||
ಶರಧಿಘೋಷದೊಳೆದ್ದು ಸರ್ವರು |
ಬರವ ನೋಡುತಲಿರುವ ಸಮಯದಿ |
ನರನು ಧರಣಿಗೆ ಬಂದು ರಥದಿಂದಿಳಿದು ಧರ್ಮಜಗೆ || 486 ||
ಚರಣಕಾನತನಾಗಿ ಭೀಮನಿ |
ಗೆರಗಿ ಯಮಳರನಪ್ಪಿ ಮೋಹದಿ |
ಭರದಿ ದೌಮ್ಯಾದಿಗಳಿಗೊಂದಿಸಿ ಸುರಪ ಕರುಣಿಸಿದ ||
ಧರೆಗೆ ನೂತನವಾದ ವಸ್ತ್ರಾ |
ಭರಣವೈವರಿಗಿತ್ತು ನಿಂದಿಹ |
ನರನನೀಕ್ಷಿಸಿ ನಗುತ ಕೇಳಿದ ಧರ್ಮನಂದನನು || 487 ||

**ಸೌರಾಷ್ಟ್ರ - ತ್ರಿವುಡೆ**
ಕ್ಷೇಮವೇ ಜಂಭಾರಿ ಮುಖ್ಯ ಸ |
ನಾಮ ಸುಮನಸರೆಲ್ಲ ಹದುಳರೆ |
ಆ ಮಹಾ ಶಚಿ ರಂಭೆಯೂರ್ವಶಿ | ಕಾಮಿನಿಯರು || 488 ||
ವ್ಯೋಮಕೇಶನನೆಂತು ಭಜಿಸಿದೆ |
ಕಾಮಿತಾರ್ಥವನೆಂತು ಪಡೆದೈ |
ಸೋಮವಂಶದ ಮಣಿಯೆ ಪೇಳನು | ಮಾನವ್ಯಾಕೆ || 489 ||
ಹ್ಯಾಗೆ ಘಟಿಸಿತು ನಾಕದರುಶನ |
ಹ್ಯಾಗೆ ಹತ್ತಿದೆ ಸುರಪಗದ್ದುಗೆ |
ಹ್ಯಾಗೆ ಕೊಂದೆ ನಿವಾತಕವಚರ | ಪೋಗಿ ಧುರದಿ || 490 ||
ನಾಗವಾಹನ ಗೈದ ಮನ್ನಣೆ |
ಭೋಗದಲಿ ನೀ ನಮ್ಮನೆಲ್ಲರ |
ಹೀಗೆ ಮರೆವರೆ ಸುಗುಣ ಕಲ್ಮನ | ನಾಗಿ ನೀನು || 491 ||
ಅಣ್ಣನಾಡಿದ ನುಡಿಗೆ ವಿಜಯನು |
ತನ್ನ ಮನದೊಳು ನಾಚಿ ಮಾತಳಿ |
ಯನ್ನರೀಕ್ಷಿಸೆ ಪೇಳತೊಡಗಿದ | ಪುಣ್ಯನಿಧಿಗೆ || 492 ||

**ಭೈರವಿ - ತ್ರಿವುಡೆ**
ಕೇಳು ರಾಯ | ನರನ ಪ್ರ |
ತಾಪ ಶೌರ್ಯ || ಪ ||
ಕೇಳು ನೀನತಿ ಕರುಣದಿಂದಲಿ |
ಪೇಳುತಿಹ ಬಿನ್ನಪವನು |
ಲೀಲೆಯಲಿ ವರ ಇಂದ್ರಕೀಲದ |
ಪರ್ವತವ ಕಂಡೀತನು ||
ತಾಳಿ ಹರುಷವ ತಪಕೆ ನಿಂದನ |
ದೇನ ಪೇಳುವೆ ಬಲುಹನು |
ನೀಲಕಂಠನ ಮೂಲಮಂತ್ರವ |
ಬಾಳ ಪರಿಯಲಿ ಜಪವ ಗೈದನು || ಕೇಳು ರಾಯ || 493 ||

ಮೂರುದಿನಕೊಂದೊಂದು ಫಲ ಮ |
ತ್ತಾರುದಿನಕೊಂದೊಂದನು |
ಧೀರ ಮೆಲುತಲೆ ಕಡೆಗೆ ಪರ್ಣಾ |
ಹಾರದಲಿ ದಿನ ಕಳೆದನು ||
ಮಾರುತನ ಭಕ್ಷಣೆಯೊಳಂಗಜ |
ವೈರಿಯಲಿ ಮನವಿಟ್ಟನು |
ವೀರ ಶ್ವಾಸವ ಬಲಿದು ಕಡೆಗೆ ಪು |
ರಾರಿಯೇ ತಾನಾಗಿ ನಿಂದನು || ಕೇಳು ರಾಯ || 494 ||
ಬಲ್ಲಿದನ ತಪಜ್ವಾಲೆ ಧರಣಿಗ |
ಳೆಲ್ಲ ಮುಸುಕಲು ಭಯದೊಳು |
ತಲ್ಲಣಿಸಿ ಬಹು ಋಷಿಗಳಗಜಾ |
ವಲ್ಲಭನ ಗಿರಿ ನೋಡಲು ||
ನಿಲ್ಲದೊಂದಿಸಿ ಕೆಟ್ಟೆವೈ ಉರಿ |
ಯಲ್ಲಿ ಸಲಹೆನುತೊದರಲು |
ಫುಲ್ಲವೈರಿಯ ಜೂಟ ಸರ್ವರ |
ನಿಲ್ಲಿಸಿದ ಕೊಡುತಭಯ ಮುದದೊಳು || ಕೇಳು ರಾಯ || 495 ||
ಮೆರೆವ ಪ್ರಮಥಗಣಂಗಳಾ ಗುಹ |
ಗಣಪ ಪಾರ್ವತಿ ಮುಖ್ಯರ |
ನೆರೆದು ಹರುಷದಿ ಶಬರವೇಷವ |
ಧರಿಸಿ ಬಂದನು ಪುರಹರ ||
ಧುರದೊಳೀತನ ಕೆಣಕಲಖಿಳರ |
ಬಡಿಯೆ ಕಾಣುತ ಶಂಕರ |
ಭರದಿ ತಾನೇ ನಿಲಲು ಸಮನಾ |
ಗಿರಲು ಸಮರವು ಮೆಚ್ಚಿ ದಯಕರ || ಕೇಳು ರಾಯ || 496 ||
ಕೊಟ್ಟನೈ ಪಾಶುಪತ ಮನ |
ದಿಷ್ಟವೆಲ್ಲವ ದಯದೊಳು |
ಸೃಷ್ಟಿ ಮೂರನು ಗೆಲುವ ಶರ ಕೈ |
ಮುಟ್ಟಿ ಶಾಂಭವಿ ಇತ್ತಳು ||
ಧಿಟ್ಟಗಜಮುಖ ವೀರಭದ್ರ ವಿ |
ಶಿಷ್ಟರೊಂದೊಂದೀಯಲು |
ಅಷ್ಟದಿಕ್ಪಾಲಕರ ಪಾಲಿಸಿ |
ತಟ್ಟನೆಲ್ಲರು ಸರಿಯಲಿತ್ತಲು || ಕೇಳು ರಾಯ || 497 ||
ವರ ವರೂಥವ ಕಳುಹುತಿಂದ್ರನು |
ಕರೆಸಿ ತನ್ನಯ ಸ್ವರ್ಗಕೆ |
ಪರಿಪರಿಯೊಳುಪಚರಿಸುತೀತನ |
ನಡರಿಸಿದ ಹರಿಪೀಠಕೆ ||
ದುರುಳರಟ್ಟುಳಿ ತಿಳುಹಲಾಕ್ಷಣ |
ತೆರಳಿ ಕೊಂದನು ನಿಮಿಷಕೆ |
ಭರಿತ ಕೀರ್ತಿಯ ಪಡೆದ ಲೋಕದಿ |
ಸರಿಯದಾರೈ ನಿನ್ನ ಪುಣ್ಯಕೆ || ಕೇಳು ರಾಯ || 498 ||

**ಭಾಮಿನಿ**
ಸುರಪಸಾರಥಿ ನುಡಿದ ಕಥೆಯನು |
ಧರಣಿಪಾಗ್ರಣಿ ಕೇಳಿ ತೋಷದ |
ಶರಧಿಯಲಿ ಮುಳುಗಾಡಿ ಭೀಮನ ಮುಖವನೀಕ್ಷಿಸುತ ||
ಒರೆದನೆಲೆ ಮಾರುತಿಯೆ ವಿಜಯನ |
ಉರುಪರಾಕ್ರಮ ಕಿವಿಗೆ ಕೇಳ್ದದೆ |
ಭರತವಂಶದ ಮಣಿಯೆ ನೋಡೆನಲಾಗ ವಾತಜಗೆ || 499 ||
ಕಿಡಿಗಳುದುರಿತು ಕಣ್ಣಿನಲಿ ಮೈ |
ಜಡಿಯೆ ರೋಷಾಗ್ನಿಯಲಿ ಹುಬ್ಬುಗ |
ಳೊಡನೆ ಗಂಟಿಕ್ಕಿದುವು ಕುಣಿದುವು ಮೀಸೆ ನಿಮಿಷದಲಿ ||
ಬಿಡದೆ ಬಾಹ್ವಪ್ಪಳಿಸಿ ಕಾಲೊಳು |
ಪೊಡವಿ ಕೆದರುತ ನೋಡುತಣ್ಣನ |
ಕಡು ಭಯಂಕರದೋರುತಾರ್ಭಟಿಸುತ್ತಲುಸಿರಿದನು || 500 ||

**ಭೈರವಿ - ಏಕ**
ಪೊಡವಿಪ ಲಾಲಿಸು ನೀನು | ತಪ್ಪು |
ನುಡಿವೆಯ ಸತ್ಯಾತ್ಮಕನು ||
ಮಿಡುಕುವದ್ಯಾಕಿದಕಿನ್ನು | ತೃಣ |
ಹಡೆಯದ ಖೂಳನೆ ನಾನು || 501 ||
ಇರುವೆಗೆ ಕೊಳಚಿನ ಜಲವು | ದೊಡ್ಡ |
ಶರಧಿಯವೋಲ್ ಕಾಣುವುವು ||
ನರನನು ಬಹುತರ ಸ್ತುತಿಸಿ | ನಿಮ್ಮ |
ಗರಳಗಳೊಣಗಿತು ನಿಲಿಸಿ || 502 ||
ಗಿರಿಕಾನನ ಗುಹೆಗಳನು | ಹುಟ್ಟು |
ಮರುಳರ ತೆರದೊಳಗಿವನು ||
ತಿರುಗುತಲುಪವಾಸವನು | ಮಾಡಿ |
ಮರುಗಿಸಿ ಜೀವಾತ್ಮನನು || 503 ||
ಮೌನಿಜನರ ಗೋಳಿಡಿಸಿ | ಮುಂ |
ಗಾಣದೆ ಶಿವನಲಿ ಸೆಣಸಿ ||
ನಾನಾಪರಿಯೊಳು ಬಳಲಿ | ಬಡ |
ವಾನರನಂದದಿ ನರಳಿ || 504 ||
ಶರವೊಂದನು ತರೆ ನಿನಗೆ | ಘನ |
ಗರುವಗಳೇರಿತೆ ಹೀಗೆ ||
ಇರದೆನ್ನನು ಹೀನಿಸಿದ | ಮಾತ |
ಮರೆದಿರರಸನೆ ನುಡಿದ || 505 ||
ದಕ್ಷಾರಿಯ ಚರಣವನು | ನಿ |
ಮ್ಮಕ್ಷಿಗೆ ದರುಶನಗಳನು ||
ಈ ಕ್ಷಣ ಮಾಡಿಸದಿರಲು | ಕಮ |
ಲಾಕ್ಷನ ಭಜಕನೆ ಕೇಳು || 506 ||
ವೀರನ ಬಗೆ ನೋಡೆನುತ | ತನ್ನ |
ಭಾರಿಯ ಗದೆ ತಿರುಗಿಸುತ ||
ಹಾರಿಸುತಿನ ಮಂಡಲಕೆ | ಶಿರ |
ಭೋರನೆ ಒಡ್ಡಿದನದಕೆ || 507 ||

**ವಾರ್ಧಕ**
ಗಿರಿಜೇಶ ಕೇಳ್ ನಿನಗೆ ಶರಣರಕ್ಷಕನೆಂಬ |
ಬಿರುದುಳ್ಳಡೀಗೆನ್ನ ಹರಣಮಂ ಸಲಹೆನುತ |
ನೆರೆದೃಢದಿ ನಿಂದಿರಲು ಪುರಹರಂ ತಿಳಿದಾಗ ಮನದಿ ಭೀತಿಯ ತಾಳುತ ||
ಧರಣಿತೂಕದ ಮಹಾಗದೆಯಿವನ ಶಿರಕುರುಳೆ |
ಬರುವುದಪಕೀರ್ತಿ ತನಗೆನ್ನುತಾಕ್ಷಣದೊಳಗೆ |
ತೆರಳಿ ಭೀಮನ ತನ್ನ ಪಿಂದಿರಿಸುತಾಯುಧವ ಕರದಿ ಪಿಡಿಯಲು ಶಂಕರ || 508 ||
ಧರಣೀಶ ಧೌಮ್ಯ ರೋಮಶ ಮುಖ್ಯ ಮುನಿವರರು |
ನರ ನಕುಲ ಸಹದೇವ ತರುಣಿ ದ್ರೌಪದಿಸಹಿತ |
ಹರ ತ್ರಿಯಂಬಕ ಪಾಹಿ ಪರಮೇಶ ಭವನಾಶ ಜಯ ನಮೋಯೆನುತಿರ್ದರು ||
ಕರುಣಾಳು ನೋಡಿ ನಸುನಗೆಯಿಂದ ಸಕಲರಂ |
ಮರುತಜನ ಕೈಪಿಡಿದು ಭಳಿರೆ ಮೆಚ್ಚಿದೆ ನಿನ್ನ |
ವರದೃಢಕೆ ಬೇಗದಿಂದರುಹು ಮನದಿಷ್ಟಾರ್ಥವೆನೆ ವೃಕೋದರ ನುಡಿದನು || 509 ||

**ಮಾರವಿ - ಏಕ**
ದೇವರ ದೇವ ಕೃಪಾನಿಧಿ ಭಕ್ತರ |
ಜೀವನಸುರಧೇನು ||
ಕೇವಲ ಮೂಢನ ರಕ್ಷಿಸಿ ಕರುಣಿಸೊ |
ಠೀವಿಯ ವರಗಳನು || 510 ||
ಶರಣನೆನುವ ಪ್ರೇಮಗಳಿರುತಿರೆ ನಾ |
ಸ್ಮರಿಸಿದ ಸಮಯದೊಳು ||
ಕರುಣಿಸೊ ನಿನ್ನವತಾರವ ಜಾಹ್ನವಿ |
ಧರ ಮೂಬಾರಿಯೊಳು || 511 ||
ಒಂದುಬಾರಿ ತನಗೀಕ್ಷಣ ಕೊಡುಯೆನ |
ಲಂದು ಮಹೇಶ್ವರನು ||
ಚಂದದೊಳೀಯುತಲಂತರ್ಧಾನದಿ |
ನಿಂದ ಪುರಾಂತಕನು || 512 ||

ತಾಳಿದನಿತ್ತಲು ಭೀಮನು ಗಿರಿಜಾ |
ಲೋಲನ ರೂಪವನು ||
ಫಾಲನೇತ್ರ ಪಂಚಾನನ ದಶಭುಜ |
ಮೌಳಿಯೊಳ್ ಹಿಮಕರನು || 513 ||
ಇಟ್ಟ ಮುಕುಟ ಧ್ರುವಪಟ್ಟಣಕಡರೆ ಕಂ |
ಗೆಟ್ಟುದು ಸುರಕುಲವು ||
ಅಟ್ಟಹಾಸಕೆ ತ್ರೈಭುವನವು ನಡುಗಿತು |
ಸೃಷ್ಟಿಗಳದುರಿದವು || 514 ||
ವರಧೌಮ್ಯಾದಿ ಮುನೀಂದ್ರರು ಧರಣಿಪ |
ನರ ಯಮಳಾದಿಗಳು ||
ಉರುತರ ಭಯದಿಂದೋಡಲು ದ್ರೌಪದಿ |
ಪರಿಪರಿ ನುತಿಸಿದಳು || 515 ||

**ವಾರ್ಧಕ**
ಆರಿಗರುಹುವುದಿನ್ನು ಮಾರುತಿಗೆ ತ್ರಿಪುರಾರಿ |
ಘೋರರೂಪವನಿತ್ತು ತೆರಳಿದಂ ಪರಿಕಿಸಲು |
ತೀರದಿನ್ನಕಟ ಮುರಹರ ಕೃಷ್ಣ ಸಲಹೆಂದು ಧಾರಿಣೀಶ್ವರ ಭಜಿಸಲು ||
ಭೂರಿಭಯದಿಂದಲತಿ ಧೈರ್ಯಗೆಟ್ಟುದು ಮುಂದೆ |
ಮೀರುವುದು ಕಾರ್ಯವೆಂದೆನುತಲಾಕ್ಷಣದೊಳಗೆ |
ಮಾರಪಿತನೈತಂದು ಸಕಲರಂ ಸಂತವಿಸಿ ಕಾರುಣ್ಯದಿಂ ನುಡಿದನು || 516 ||
ಮರುಳಾದಿರೇಕೆ ನೀವ್ ಮರನಂತೆ ನಿಲ್ಲುವಿರಿ |
ತರುಣಿ ದ್ರೌಪದಿಯಳಂ ವರಶಕ್ತಿಪರದಿಂದ |
ಲಿರದೆ ಪ್ರಾರ್ಥಿಸಿ ಬೇಗಲೆನೆ ಸಕಲರೊಂದಾಗಿ ಹರಿನಿರೂಪವ ಕೇಳುತ ||
ಸರಸಿಜಾನನೆ ದೇವಿ ಶರಣಜನಸಂಜೀವಿ |
ಪರಮಮಾಯಾತೀತೆ ಪರಮಾತ್ಮಸಹಜಾತೆ |
ದುರುಳವಂಶಕುಠಾರೆ ಸುರುಚಿರಾಲಂಕಾರೆ ಪರಿಹರಿಸು ಬಲು ಭೀತಿಯ || 517 ||

**ಭಾಮಿನಿ**
ನುತಿಸಲೀಪರಿಯಿಂದಲನಿಬರು |
ಸತಿಶಿರೋಮಣಿ ದ್ರುಪದನಂದನೆ |
ಅತಿಭಯಂಕರವಾದ ಕಾಳಿಯ ರೂಪವನು ಧರಿಸೆ ||
ಕ್ಷಿತಿಯ ತಿಂಬಳೊ ಶಕ್ರಪುರವನು |
ಹತವ ಗೈವಳೊ ಸಪ್ತಶರಧಿಯ |
ನತಿಶಯದಿನೀಂಟುವಳೊ ಎಂಬಂದದಲಿ ಕಾಣಿಸಿತು || 518 ||

**ಮುಖಾರಿ - ಝಂಪೆ**
ಘೋರರೂಪದ ಪತಿಯ ನೋಡಿದಳು ನೀರೆ |
ಬೀರುತಲೆ ಮೋಹವನು ಬಳಿಸಾರ್ದಳಾ ಪ್ರೌಢೆ || ಘೋರ || ಪ ||
ಚರಣದಂದುಗೆ ಗೆಜ್ಜೆ ಘಲಿಘಲಿರೆನುತ್ತ ಪರಿ |
ಪರಿಯ ಭೂಷಣದ ಪ್ರಭೆಯನು ತೋರುತ ||
ಅರೆನೋಟದಿಂದ ಬಹು ಬೆಡಗು ಮಾಡುತ ನಗುತ |
ಸರಸದೊಳು ಬಂದು ಬಿಗಯಪ್ಪಿ ಚುಂಬಿಸುತ || ಘೋರ || 519 ||
ವಾಮಭಾಗದಿ ನಿಂತ ಮಾನಿನಿಯ ಮುಂಗುರುಳ |
ಪ್ರೇಮದಿಂ ತಿದ್ದಿ ಮುದ್ದಿಸಲಾ ಕ್ಷಣ ||
ಆ ಮಹಾರೂಪವೀರ್ವರಿಗಡಗಿ ಧರ್ಮಜಗೆ |
ಕಾಮಪಿತನಿಗೆ ಸಹಿತ ಭೀಮ ವಂದಿಸುತ || ಘೋರ || 520 ||
ಪರಮ ಸಹಸಿಯ ಶಿರವ ಹರುಷದೊಳು ಪಿಡಿದೆತ್ತಿ |
ತರುಣಿ ದ್ರೌಪದಿಯನು ಮನ್ನಿಸಿ ಕೃಷ್ಣನು ||
ಒರೆದು ನೀತಿಯ ಪಾಂಡುತರಳರಿಗೆ ಸಂಭ್ರಮದಿ |
ತೆರಳಿದನು ದ್ವಾರಕೆಗೆ ಗರುಡವಾಹನನು || ಘೋರ || 521 ||

**ಭೈರವಿ - ಝಂಪೆ**
ಅಸುರಮರ್ದನನತ್ತ | ಕುಶಲದಿಂ ಗಮಿಸಲ್ಕೆ |
ವಸುಮತೀಶ್ವರನಿತ್ತ | ಋಷಿಸಮೂಹದೊಳು || 522 ||
ಪಾಲಿಸುತಲಿರುತಿರಲು | ಖೂಳ ಧುರ್ಯೋಧನಗೆ |
ಪೇಳಿರುವ ಭಾಷೆ ಹ | ನ್ನೆರಡಬುದವಾಗೆ || 523 ||
ತರುಣಿಯನುಜರು ಸಹಿತ | ಲೆರಗಿ ರೋಮಶನಡಿಗೆ |
ಸುರಪುರಕೆ ಬೀಳ್ಕೊಟ್ಟು | ಕರೆದು ಧೌಮ್ಯರನು || 524 ||

ಅರುಹಿದನು ವನವಾಸ | ಹರಿದುದಿಂದಿಗೆ ನಮಗೆ |
ಧರಿಸಬೇಕಜ್ಞಾತ | ರವಿಯುದಯದೊಳಗೆ || 525 ||
ಹರಿಯ ಕರುಣದಿ ನಾವು ನಿರ್ವಹಿಸಿ ಬರುವನಕ |
ಪೊರೆವುದೀ ಮುನಿತತಿಯ | ಕರುಣಾಳು | ನೀವು || 526 ||
ಎನುತಲಕ್ಷಯಪಾತ್ರ | ವನು ಧೌಮ್ಯರೊಡನಿತ್ತು |
ಜನಪ ತನ್ನನುಜರನು | ವನಿತೆ ಸಹಿತಾಗ || 527 ||
ವಂದಿಸುತಲೆಲ್ಲರಿಗೆ | ನಿಂದು ಹರಕೆಯ ಕೊಂಡು |
ಮುಂದೆ ತೆರಳಿದರು ಗೋ | ವಿಂದ ಸಲಹೆನುತ || 528 ||

**ವಾರ್ಧಕ**
ಬೇರೆ ಬೇರೊಂದು ರೂಪವನು ಧರಿಸುತ್ತ ಕಡು |
ಧೀರನಾದ ವಿರಾಟನಾಲಯದೊಳಿರುತಿರಲು |
ನಾರಿ ದ್ರೌಪದಿಯ ಕೀಚಕನೆಳೆಯೆ ಖಳವಂಶ ತೀರಿಸಿದನಾ ಭೀಮನು ||
ಚಾರಕರ ಮುಖದಿಂದ ಕೇಳಿ ಕೌರವ ಸೈನ್ಯ |
ವಾರಿಧಿಯನೊಡಗೊಂಡು ತುರುಗಳಂ ಸೆರೆವಿಡಿಯೆ |
ವೀರ ಫಲುಗುಣನವರ ಗೋಳಿಡಿಸಿ ಬರೆ ಮತ್ತೆ ತೋರೆ ತಮ್ಮಯ ನಿಜವನು || 529 ||
ಪರಿಕಿಸುತಲೆರಗಿ ನುತಿಗೈವ ಮತ್ಸ್ಯೇಶ್ವರನ |
ಹರುಷದಿಂ ಮನ್ನಿಸುತಲಭಿಮನ್ಯುವಿಗೆ ತನ್ನ |
ತರಳೆಯುತ್ತರೆಯ ಪರಿಣಯ ರಚಿಸಿ ಶ್ರೀಹರಿಯ ಭರದಿ ಸಂಧಿಗೆ ಕಳುಹಲು ||
ದುರುಳ ಕೌರವ ಧರಣಿಯನು ಕೊಡದೆ ಧಿಕ್ಕರಿಸಿ |
ಧುರದಿ ಭೀಷ್ಮ ದ್ರೋಣ ಕರ್ಣಾದಿ ಸುಭಟರ |
ನ್ನೊರಗಿಸುತ ಕುರುಕುಲವ ಸಂಹರಿಸಿ ನಗರವಂ ಶುಭಮುಹೂರ್ತದಿ ಪೊಕ್ಕರು || 530 ||

**ಭಾಮಿನಿ**
ಪರಮ ಮಂಗಳದಿಂದ ಪಟ್ಟವ |
ವಿರಚಿಸಲು ಧರ್ಮಜಗೆ ರಾಜ್ಯವ |
ಪೊರೆದ ನಳ ನಹುಷಾದಿ ರಾಯರ ಮರೆಸಿ ವಿಭವದಲಿ ||
ಹರಿದುದೈ ಪಾಂಡವರ ಕೀರ್ತಿಯ |
ಬೆಳೆಸು ತ್ರೈಭುವನದಲಿ ಲಕ್ಷ್ಮೀ |
ವರನ ಭಕ್ತರಿಗಾರು ಸರಿ ಜನಮೇಜಯ ಕ್ಷಿತಿಪ || 531 ||

**ಸೌರಾಷ್ಟ್ರ - ತ್ರಿವುಡೆ**
ಈ ತೆರದಿ ಕಥೆಗಳನು ಶಶಿಕುಲ |
ಜಾತ ಜನಮೇಜಯಗೆ ಮುನಿಕುಲ |
ನಾಥ ವೈಶಂಪಾಯ ನುಡಿದನು | ಪ್ರೀತಿಯಿಂದ || 532 ||
ಘನತರದ ಭೂಸುರರ ವಂಶದ |
ಗುಣಭರಿತ ನಾರಾಯಣಾರ್ಯನ |
ತನಯ ನಾಗನು ಯಕ್ಷಗಾನದಿ | ವಿನಯದೊಳಗೆ || 533 ||
ವಿರಚಿಸಿದನಿದರೊಳಗೆ ತಪ್ಪಾಗ |
ಳಿರಲು ಬಲ್ಲ ಮಹಾತ್ಮರೆನ್ನೊಳ |
ಗಿರಿಸಿ ದಯವನು ತಿದ್ದಿ ಮೆರೆಸಲಿ | ಕರುಣದಿಂದ || 534 ||
ಪೊಡವಿಗುತ್ತಮವಾದ ಧ್ವಜಪುರ |
ದೊಡೆಯ ಕೋಟೀಶ್ವರನು ಬಾಯೊಳು |
ನುಡಿಸಿದುದ ಸೃಜಿಸಿದೆನು ಕವಿತೆಯ | ಬುಡವನರಿಯೆ || 535 ||

**ಆಹೇರಿ - ಏಕ**
ಮಂಗಳಂ | ಜಯ | ಮಂಗಳಂ || ಪ ||
ಮಂಗಳ ಖಗಶತತೇಜನಿಗೆ || ಜಯ |
ಮಂಗಳ ಕೌಸ್ತುಭಹಾರನಿಗೆ ||
ಮಂಗಳ ಧ್ರುಹಿಣನ ತಾತನಿಗೆ | ಶುಭ |
ಮಂಗಳ ಜಲಜದಳಾಕ್ಷನಿಗೆ || ಮಂಗಲಂ || 536 ||
ಮಂಗಳ ಪಯನಿಧಿವಾಸನಿಗೆ | ಜಯ |
ಮಂಗಳ ಗರುಡತುರಂಗನಿಗೆ |
ಮಂಗಳ ಫಣಿಪತಿಶಯನನಿಗೆ | ಶುಭ |
ಮಂಗಳ ತ್ರಿಣಯನ ಮಿತ್ರನಿಗೆ || ಮಂಗಳಂ || 537 ||

ಮಂಗಳ ಸಾಸಿರನಾಮನಿಗೆ | ಜಯ |
ಮಂಗಳ ಕಂಸವಿರಾಮನಿಗೆ ||
ಮಂಗಳ ಗಜಮುಖಜನಕನಿಗೆ | ಶುಭ |
ಮಂಗಳ ಗಜಖಳನಾಶನಿಗೆ || ಮಂಗಳಂ || 538 ||
ಮಂಗಳ ಗಿರಿಜಾಲೋಲನಿಗೆ | ಜಯ |
ಮಂಗಳ ಕರಿಚರ್ಮಾಂಬರಗೆ ||
ಮಂಗಳ ತ್ರಿಪುರವಿನಾಶನಿಗೆ | ಶುಭ |
ಮಂಗಳ ಸ್ಮರತನು ಶಿಕ್ಷಕಗೆ || ಮಂಗಳಂ || 539 ||
ಮಂಗಳ ಭಸ್ಮವಿಲೇಪನಿಗೆ | ಜಯ |
ಮಂಗಳ ಹಿಮಕರಜೂಟನಿಗೆ ||
ಮಂಗಳ ಸುರಮುನಿವಂದಿತಗೆ | ಶುಭ |
ಮಂಗಳ ಧ್ವಜಪುರವಾಸನಿಗೆ ||
ಮಂಗಳಂ | ಜಯ ಮಂಗಳಂ || 540 ||

*****ಶುಭಂ*****

# ಕೃತಜ್ಞತೆಗಳು


**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಪಾವಂಜೆ ಗುರುರಾವ್ ಅಂಡ್ ಸನ್ಸ್, ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ

**ಪ್ರಸಂಗ ಪ್ರತಿ ಆಧಾರ:** ಪಾವಂಜೆ ಗುರುರಾವ್ ಅಂಡ್ ಸನ್ಸ್, ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಿತ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ಡಾ. ರಾಧಾಕೃಷ್ಣ ಉರಾಳ್

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ರವಿ ಮಡೋಡಿ

**ಅಂತರಜಾಲ ಪ್ರತಿ ಬರವಣಿಗೆ:** ಸತೀಶ್ ಭಟ್ ಯಲ್ಲಾಪುರ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ಶಿವಕುಮಾರ ಬಿ. ಎ. ಅಳಗೋಡು, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ